ಬೆಂಗಳೂರು, ಬೀದರ, ಕಲಬುರ್ಗಿ, ರಾಯಚೂರು, ಯಾದಗಿರಿ, ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟಣೆ

15ನೇ ವರ್ಷದತ್ತ...

RNI No : KARKAN/2011/61467

ಅನಿಲಕುಮಾರ್ ಕಮಠಾಣೆ ಸಾರಥ್ಯದಲ್ಲಿ...

BIDAR KOTE KANNADA WEEKLY

ಇದು ಭ್ರಷ್ಟರ ಬೇಟೆ

# ಬೀದರ್ ಕೋಟೆ

VOLUME : 15 | ISSUE : 171 | APRIL 6TH TO 13TH, 2026 | PAGES : 16 | RS. 10/- | ಕನ್ನಡ ವಾರಪತ್ರಿಕೆ



# ದುರ್ವಾಸನೆ ಬೀರುತ್ತಿದೆ ಮಹಾನಗರ ಪಾಲಿಕೆ!



## ಬೀದರ: ನಿಜ ಪತ್ರಕರ್ತರಿಗೆ ಬೆಲೆ ಇಲ್ಲ... ಪ್ರಶಸ್ತಿ ಗೌರವಗಳು ಸಿಗುತ್ತಿಲ್ಲ...!

## ಕಲಬುರಗಿ: ಅಂತರರಾಜ್ಯ ಕುಖ್ಯಾತ ಇರಾನಿ ಗ್ಯಾಂಗ್ ಬಂಧನ





## ಹುಮನಾಬಾದ್ ಶೆಡೋಳ ಗ್ರಾಮ ಪಂಚಾಯಿತಿಯಲ್ಲಿ ಭ್ರಷ್ಟಾಚಾರದ ಸುಳಿವು? ಮಾಹಿತಿ ಹಕ್ಕು ಕೇಳಿದರೆ ಉತ್ತರವೇ ಇಲ್ಲ!

## ಮಾಹಿತಿ ಕೇಳಿದರೆ ಮಾಹಿತಿ ನೀಡದ ಭಾಲ್ಕಿ ತಾಲ್ಲೂಕಿನ ಕೋಸಂ ಗ್ರಾ.ಪಂ!?



# ಡಾ| ಬಿ.ಆರ್ ಅಂಬೇಡ್ಕರ್ ಅವರಲ್ಲೊಬ್ಬ ದಾರ್ಶನಿಕ ಅರ್ಥ ಶಾಸ್ತ್ರಜ್ಞರನ್ನು ಕಾಣಬೇಕಿದೆ

ಡಾ| ಬಿ.ಆರ್ ಅಂಬೇಡ್ಕರ್ ಹೆಸರನ್ನು ಭಾರತದಲ್ಲಿ ಕೇಳದವರೇ ಇಲ್ಲಿ ಎನ್ನಬಹುದು. ಜನ ಸಾಮಾನ್ಯವಾಗಿ ಅಂಬೇಡ್ಕರ್ ಎಂದರೆ ನಮ್ಮ ಸಂವಿಧಾನವನ್ನು ರಚಿಸಿದವರು. 'ಫಾದರ್ ಆಫ್ ಇಂಡಿಯನ್ ಕಾನ್ಸಿಟ್ಯೂಷನ್' ಎನ್ನು ವುದು ತಿಳಿದಿದೆ. ಇನ್ನೊಂದು ವರ್ಗ ಅವರನ್ನು ದಲಿತ ನಾಯಕ ಎನ್ನುವಂತೆ ಬಿಂಬಿಸಲು ನೋಡುತ್ತಾರೆ. ಆದರೆ ಅಂಬೇಡ್ಕರ್ ಅವರು ಇವೆಲ್ಲವನ್ನು ಮೀರಿದ ತುಂಬು ವ್ಯಕ್ತಿತ್ವವನ್ನು ಹೊಂದಿದ್ದವರು ಭಾರತದ ಅರ್ಥ ವ್ಯವಸ್ಥೆ ಬಗ್ಗೆ ಅವರಿಗೆ ಅಪಾರವಾದ ಜ್ಞಾನವಿತ್ತು.

ಯಾವ ರೀತಿಯಲ್ಲಿ ಅರ್ಥ ವ್ಯವಸ್ಥೆಯನ್ನು ಮುಂದುವರಿಸಿದರೆ ಸಾಮಾಜಿಕವಾಗಿ ನಾವು ಇನ್ನಷ್ಟು ಪ್ರಬಲರಾಗಬಹುದು ಎನ್ನುವ ದೂರ ದರ್ಶಿತ್ವ ಕೂಡ ಇತ್ತು ಎನ್ನುವುದಕ್ಕೆ ನಮಗೆ ಹಲವಾರು ಉದಾಹರಣೆಗಳು ಸಿಗುತ್ತವೆ. ಡಾ| ಬಿ.ಆರ್ ಅಂಬೇಡ್ಕರ್ ಅವರು ಸಂವಿಧಾನ ಶಿಲ್ಪಿ ಅಷ್ಟೇ ಅಲ್ಲ ಅವರೊಬ್ಬ ಮಹಾನ್ ಎಕನಾಮಿಕ್ಸ್ ಆಗಿದ್ದರು. ಅವರ ಬಗೆಗಿನ ಈ ವಿಷಯ ಹೆಚ್ಚು ಜನಪ್ರಿಯವಲ್ಲ. ಆದರೆ ಭಾರತಕ್ಕೆ ಎಕನಾಮಿಸ್ಟ್ ಆಗಿ ಅವರು ಕೊಡುಗೆ ನೀಡಿದ್ದರು. ಬಹಳ ಜನರಿಗೆ ಈ ವಿಷಯ ಗೊತ್ತಿರುವುದಿಲ್ಲ. ಅಂದರೆ

ಅಂಬೇಡ್ಕರ್ ಅವರ ಈ ಮಂಡನೆಯನ್ನು ವೇದ ವಾಕ್ಯದಂತೆ ತೆಗೆದುಕೊಂಡು ಬಹಳಷ್ಟು ದೇಶಗಳು ಇಂದು ಮುಂದುವರಿದ ಪಟ್ಟಿಗೆ ಸೇರಿದವರಾದರೂ ಭಾರತ ಮಾತ್ರ ಈ ಕ್ಷೇತ್ರದಲ್ಲಿ ಇಂದಿಗೂ ಹಾಗೇ ಉಳಿದು ಕೊಂಡಿರುವುದು ಖೇದನೀಯ. ತಮ್ಮ ಜೀವನದ ಒಂದು ಹಂತದ ನಂತರ ರಾಜಕೀಯ ಕ್ಷೇತ್ರಕ್ಕೆ ಬಂದ ಅಂಬೇಡ್ಕರ್ ಅವರು ಭಾರತೀಯ ಆರ್ಥಿಕತೆ ಬಗ್ಗೆ ಕಳ ಕಳಿ ವ್ಯಕ್ತಪಸಿಡುತ್ತಲೇ ಇದ್ದರು. ದೇಶವೊಂದು ಆರ್ಥಿಕ ಭದ್ರವಾಗದ ಹೊರತು ಜಾಗತಿಕ ಮಟ್ಟದಲ್ಲಿ ಮನ್ನಣೆ ಸಿಗುವುದಿಲ್ಲ ಮತ್ತು ದೇಶ ಆರ್ಥಿಕತೆ ಬಗ್ಗೆ ಕಳಕಳಿ ವ್ಯಕ್ತಪಡಿಸುತ್ತಲೇ ಇದ್ದರು. ದೇಶ ವೊಂದು ಆರ್ಥಿಕತೆ ಭದ್ರವಾಗದ ಹೊರತು ಜಾಗತಿಕ ಮಟ್ಟದಲ್ಲಿ ಮನ್ನಣೆ ಸಿಗುವುದಿಲ್ಲ ಮತ್ತು ದೇಶ ಆರ್ಥಿಕವಾಗಿ ಭದ್ರವಾಗಲು ಜೊತೆಗೆ ಉಳಿಸುವ ಸಂಪ್ರದಾಯ ಬರುತ್ತದೋ ಆ ದೇಶದಲ್ಲಿ ಆರ್ಥಿಕ ಭದ್ರತೆ ತಾನೇ ತಾನಾಗಿ ಬರುತ್ತದೆ. ಎನ್ನುವ ಅವರ ಮಾತನ್ನು ಒಂದು ಹಂತದ ವರೆಗೆ ಭಾರತದ ಸಮಾಜ ಪಾಲಿಸಿದೆ.



ಅಂಬೇಡ್ಕರ್ ಅವರು ತಮ್ಮ ವೃತ್ತಿ ಜೀವನವನ್ನು ಎಕನಾಮಿಸ್ಟ್ ಆಗಿ ಪ್ರಾರಂಭಿಸುತ್ತಾರೆ. ಅಂದಿನ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಚರ್ಚೆ ಗಳಲ್ಲಿ ಇವರ ಹೆಸರಿಲ್ಲದೆ ಮುಕ್ತಾಯ ಕಾಣುತ್ತಿ ರಲಿಲ್ಲ ಎನ್ನುವಷ್ಟರ ಮಟ್ಟಿಗೆ ತಿಳಿದುಕೊಂಡವ ರಾಗಿದ್ದರು. ಅಂದಿನ ದಿನದಲ್ಲಿ ಭಾರತದಲ್ಲಿ ಅತಿ ಹೆಚ್ಚು ಎಕಾ ನಮಿ ಬಗ್ಗೆ ಅಧ್ಯಯನ ಮಾಡಿದ. ಏಕೈಕ ವ್ಯಕ್ತಿ ಅಂಬೇಡ್ಕರ್ ಆಗಿದ್ದರು. ಬಾಬಾ ಸಾಹೇಬ್ ಅವರು ಎರಡೆರಡು ಯೂನಿವರ್ಸಿಟಿ ಗಳಿಂದ ಡಾಕ್ಟರೇಟ್ ಪದವಿಯನ್ನು ಪಡೆದವರು. ಅಮೆರಿ ಕಾದ ಕೊಲಂಬಿಯಾ ಯೂನಿವರ್ಸಿಟಿಯಲ್ಲಿ ಮತ್ತು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಎಕನಾಮಿಕ್ಸ್ ವಿಷಯದಲ್ಲಿ ಡಾಕ್ಟರೇಟ್ ಪದವಿ ಯನ್ನು ಪಡೆದಿದ್ದಾರೆ. ಇಂದಿಗೂ ಅವರ ಹಲವಾರು ಅರ್ಥ ವ್ಯವಸ್ಥೆಯ ಚಿಂತನೆಗಳು ಪ್ರಸ್ತುತವಾಗಿದೆ.

ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆಯಲು ಅಂಬೇ ಡ್ಕರ್ ಅವರು ತೆಗೆದುಕೊಂಡಿದ್ದ ವಿಷಯ ಮ್ಯಾನೇ ಜ್ಮೆಂಟ್ ಆಫ್ ರುಪಿ ಎನ್ನುವುದು ಆಮೇಲೆ ಪುಸ್ತಕದ ರೂಪದಲ್ಲಿ ಕೂಡ ಪ್ರಕಟವಾಗಿ ಬಹಳ ಜನ ಪ್ರಿಯತೆಯನ್ನು ಪಡೆದುಕೊಂಡಿತು. ಅಂದಿನ ದಿನದಲ್ಲೇ ಪೇಪರ್ ಹಣವನ್ನು ಮುದ್ರಿಸಲು ಗೋಲ್ಡ್ ಬ್ಯಾಕ್ ಅಪ್ ಇರುವುದು ಅವಶ್ಯಕ ಎನ್ನು ವುದನ್ನು ಅಂಬೇಡ್ಕರ್ ಅವರು ಪ್ರತಿವಾದಿಸಿದ್ದರೆನ್ನು ವುದು ಗಮನಾರ್ಹ. ಅಂದಿನ ದಿನಗಳಲ್ಲಿ ಜಾಗತಿಕ ಮಟ್ಟದಲ್ಲಿ ಆರ್ಥಿಕತೆ ಬಹಳ ದೊಡ್ಡ ಬದಲಾವ ಣೆಯ ದಾರಿಯಲ್ಲಿತ್ತು. ಗೋಲ್ಡ್‌ರಶ್ ಉಂಟಾದ ನಂತರ ಅಮೆರಿಕಾ ತನ್ನ ಹಣವನ್ನು ಗೋಲ್ಡ್ ಸ್ಟಾಂಡರ್ಡ್ ಅಥವಾ ಗೋಲ್ಟ್ ಬ್ಯಾಕ್ ಅಪ್ ಇಲ್ಲದೆ ಮುದ್ರಿ ಸಲು ಮುಂದಾಗುತ್ತದೆ. ಇದರಿಂದ ಉಂಟಾಗುವ ದೂರಗಾಮಿ ಪರಿಣಾಮಗಳನ್ನು ಬಾಬಾ ಸಾಹೇಬ್ ಊಹಿಸಿದ್ದರು ಅನ್ನಿಸುತ್ತದೆ. ಪೇಪರ್ ಹಣವನ್ನು ಇಚ್ಚೆ ಬಂದಂತೆ ಬಂಗಾರದ ರಿಸರ್ವ್ ಇಲ್ಲದೆ ಮುದ್ರಿಸುವುದು ತಪ್ಪು ಎನ್ನುವುದು ಇವರ ವಾದವಾಗಿತ್ತು. ಇಂದು ಜಾಗತಿಕ ಮಟ್ಟದಲ್ಲಿ ಗೋಲ್ಡ್ ಬ್ಯಾಕ್ ಅಪ್ ಇಲ್ಲದೆ ಕೇವಲ ನಂಬಿಕೆಯ ಆಧಾರದ ಮೇಲೆ ಹಣವನ್ನು ಮುದ್ರಿಸುತ್ತಿರುವುದ ರಿಂದಲೇ ಜಗತ್ತಿನೆಲ್ಲಡೆ ಹಣದುಬ್ಬರ ವಿಪರೀತವಾಗಿ ಏರಿದೆಯೆನ್ನಬಹುದು. ವಿಶ್ವದ ಅರ್ಥ ವ್ಯವಸ್ಥೆ ಕುಸಿತ ಕಂಡಾಗ ಅಂಬೇಡ್ಕರ್ ಅವರ ವಾದದಲ್ಲಿ ಎಷ್ಟು ಹುರುಳಿತ್ತು ಎನ್ನುವುದರ ಅರಿವಾಗುತ್ತಿದೆ ಅಂಬೇ ಡ್ಕರ್ ಅವರ ನಿಲುವನ್ನು ಸಮರ್ಥಿಸಿಕೊಂಡಿದ್ದರೆ ಇಂದು ಭಾರತ ಮಾತ್ರವಲ್ಲ ಜಗತ್ತು ಕೂಡ ಅವರನ್ನು ನೆನೆಯುತ್ತಿತ್ತು.

ಪಬ್ಲಿಕ್ ಫೈನಾನ್ಸ್ ಬಯಸುವ ಎಲ್ಲಾ ಸಂಸ್ಥೆ ಗಳು ತಮ್ಮ ಖರ್ಚಿಗೆ ಬೇಕಾದ ಸಂಪನ್ಮೂಲ ವನ್ನು ತಾವೇ ಕ್ರೋಢೀಕರಿಸಿಕೊಳ್ಳುವ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಆಗ ಮಾತ್ರ ಸುಸ್ಥಿರ ಬೆಳವಣಿಗೆ ಸಾಧ್ಯ ಎನ್ನುವುದು ಅಂಬೇಡ್ಕರ್ ಅವರ ಆರ್ಥಿಕತೆ ಕುರಿತಾದ ಇನ್ನೊಂದು ಬಹುದೊಡ್ಡ ನಿಲುವಾ ಗಿತ್ತು. ಈ ಆಧಾರದ ಮೇಲೆ ಕೆಲಸ ಮಾಡುವ ಯಾವ ಸಂಸ್ಥೆಯೂ ಕುಸಿತ ಕಾಣಲು ಸಾಧ್ಯವಿಲ್ಲ. ಬಹುತೇಕ ಸರಕಾರಿ ಸಂಸ್ಥೆಗಳಲ್ಲಿ ಈ ತಿರುಳನ್ನು ಅಳವಡಿಸಿ ಕೊಳ್ಳಲಾಗಿದೆ. ಆದರೆ ಮೂಲ ಆಶಯವನ್ನು ಮರೆತುದರ ಪರಿಣಾಮ ಇಂದು ಸರಕಾರಿ ಸ್ವಾಮ್ಯದ ಸಂಸ್ಥೆಗಳು ಆ ಮಟ್ಟದ ಯಶಸ್ಸನ್ನು ಕಾಣುತ್ತಿಲ್ಲ.

ಅಂಬೇಡ್ಕರ್ ಅವರು ಲ್ಯಾಂಡ್ ರಿಫಾಮ್ ಆಕ್ಟ್ ಕುರಿತು ಕೂಡ ಬಹಳ ಮುಂದಾ ಲೋಚನೆ ಇಟ್ಟು ಕೊಂಡವರಾಗಿದ್ದರು. ಕೇವಲ ಭೂಮಿ ಯನ್ನು ಹೊಂದಿದ್ದರೆ ಪ್ರಯೋಜ ನವಿಲ್ಲ. ಉತ್ಪನ್ನತೆಗೆ ಬೇಕಾದ ಅಂಶಗಳಲ್ಲಿ ಭೂಮಿ ಒಂದು ಅಂಶವಷ್ಟೇ. ಉದಾ: ಕೇವಲ ಭೂಮಿ ಇದ್ದು, ಉಳಲು ಬೇಕಾದ ಜನ ಶಕ್ತಿಯಾಗಲೀ ಸಾಮಾ ಗ್ರಿಯಾಗಲೀ ಇರದಿದ್ದರೆ ಪ್ರಯೋಜನವೇನಿದೆ? ಹೀಗೆ ಎಲ್ಲವೂ ಒಂದಕ್ಕೊಂದು ಪೂರಕವಾಗಿ ಇರಬೇಕೇ ಹೊರತು, ಎಲ್ಲವನ್ನೂ ವಿಭಜಿಸಿ ನೋಡಬಾರದು. ಹಾಗೆ ಮಾಡಿದರೆ ಕೃಷಿಯನ್ನು ನಂಬಿ ಕುಳಿತಿರುವ ಭಾರತ ಎಂದಿಗೂ ಆರ್ಥಿಕ ವಾಗಿ ಸಬಲವಾಗಲು ಸಾಧ್ಯವಿಲ್ಲ ಎನ್ನುವುದು ಅಂಬೇಡ್ಕರ್ ನಂಬಿಕೆಯಾಗಿತ್ತು. ನಮ್ಮ ದೇಶದ ಲ್ಯಾಂಡ್ ಆಕ್ಟ್ ಏನಿವೆ ಅವುಗಳಲ್ಲಿ ಅಮೂಲಾಗ್ರ ಬದಲಾ ವಣೆ ಬೇಕಿದೆ. ಇದರಲ್ಲಿ ಕುರಿತು ಕಾನೂನಿನಲ್ಲಿ ಬಹಳಷ್ಟು ಎಡವಟ್ಟುಗಳಿದ್ದು ವಿಪರ್ಯಾಸ ವೆಂದರೆ ಇಂದಿಗೂ ಅವು ಹಾಗೆಯೇ ಇದೆ.


ಭಾರತ ಇಂದಿಗೂ ಕೃಷಿ ಪ್ರಧಾನ ದೇಶ. ಅಂದಿನ ದಿನಗಳಲ್ಲಿ ಪ್ರಧಾನವಾದ ಉದ್ಯೋಗ ದಲ್ಲೇ ಭಾರತ ಮುಗ್ಗರಿಸುತ್ತಿತ್ತು. ಒಂದು ದೇಶ ಆರ್ಥಿಕವಾಗಿ ಸಬಲವಾಗದಿದ್ದರೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಅದಕ್ಕೆ ಕವಡೆ ಕಾಸಿನ ಕಿಮ್ಮತ್ತು ಇರುವುದಿಲ್ಲ. ಎನ್ನುವುದು ಅಂಬೇಡ್ಕರ್ ಅವರಿಗೆ ಗೊತ್ತಿತ್ತು. ಭಾರತದ ಕೃಷಿ ನೀತಿಯನ್ನು ಲ್ಯಾಂಡ್ ಆಕ್ಟ್‌ಗಳನ್ನು ಸುಧಾರಿಸುವುದು ಸುಲಭದ ಮಾತಲ್ಲ ಎನ್ನುವುದು ಕೂಡ ಅರಿವಿತ್ತು. ಹೀಗಾಗಿ ಹೊಸ ಉದ್ದಿಮೆಗಳು ಮತ್ತು ಹೊಸ ಬಂಡವಾಳ ಭಾರತವನ್ನು ಆರ್ಥಿಕವಾಗಿ ಸಬಲವಾಗಿಸಲು ಬೇಕಿರುವ ಔಷಧಗಳು ಎನ್ನುವುದನ್ನು ತಮ್ಮ ಮಾತು ಮತ್ತು ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಭಾರತ ಇಂದಿನ ಭಾರತವಾಗಿ ಉಗಮವಾಗಲು ಕೈಗಾರೀಕರಣ ಬಹಳ ದೊಡ್ಡ ದೇಣಿಗೆ ನೀಡಿದೆ.

ನಿರುದ್ಯೋಗ ಎಂಬುದು ಕಣ್ಣಿಗೆ ಕಾಣದ ಒಂದು ಬಹು ದೊಡ್ಡ ಸಮಸ್ಯೆ. ಇದು ಕೇವಲ ಭಾರತವಲ್ಲದೆ ಜಾಗತಿಕ ಮಟ್ಟಕ್ಕೂ ಅನ್ವಯ ಆಗುತ್ತದೆ. ಕೃಷಿ ಮತ್ತು ಇನ್ನಿತರ ಕ್ಷೇತ್ರದಲ್ಲಿ ಹೆಸರಿಗೆ ಬಹಳಷ್ಟು ಜನ ತೊಡಗಿಸಿಕೊಂಡಿದ್ದರೂ ನಿಜವಾಗಿ ಯಾವ ಮಟ್ಟದಲ್ಲಿ ವಿನಿಯೋಗವಾಗುತ್ತಿದೆ ಎಂದು ತಿಳಿಯುವುದು ಕಷ್ಟ. ಇಂದಿಗೂ ಭಾರತದ ಜನ ಸಂಖ್ಯೆಯ ಶೇ 60 ಪ್ರತಿಶತ ಜನ ತಮ್ಮನ್ನು ತಾವು ರೈತರು ಎಂದು ಕರೆಸಿಕೊಂಡಿದ್ರೂ ಅವರಲ್ಲಿ 20 ಪ್ರತಿ ಶತ ಜನ ಕೂಡ ಪೂರ್ಣಾವಧಿ ಕೃಷಿ ಯಲ್ಲಿ ತೊಡಗಿಕೊಂಡಿರುವುದಿಲ್ಲವೆಂಬುದು ಗಮನಾರ್ಹ. ಹೀಗಿದ್ದಾಗ ಉಳಿದ ಬಹುದೊಡ್ಡ ಸಂಖ್ಯೆಯ ಜನ ಏನು ಮಾಡುತ್ತಿರುತ್ತಾರೆ? ಯಾವುದೇ ರೀತಿಯ ವೈಯಕ್ತಿಕ ಅಥವಾ ಸಾಮಾಜಿಕ ಅಭಿವೃದ್ಧಿಗೆ ದೇಣಿಗೆ ನೀಡದ ಅವರ ಸಮಯ ಪೋಲಾಗುತ್ತಿರುತ್ತದೆ. ಹೀಗೆ ಸುಮ್ಮನೆ ಕುಳಿತ ಜನರ ಸಮಯವನ್ನು ಸರಿಯಾಗಿ ಬಳಸಿ ಕೊಂಡರೆ ದೇಶ ವಿಕ್ರಮವನ್ನು ಸಾಧಿಸಬಹುದು ಎನ್ನುವುದು ಬಾಬಾ ಸಾಹೇಬರ ಮಾತಾಗಿತ್ತು. ಜನರಲ್ಲಿ ಉಳಿಸುವಷ್ಟು ಹಣ ಸಂಗ್ರಹವಾಗಬೇಕು. ಹಾಗಾಗಲು ಒಂದು ವಲಯದಲ್ಲಿ ಸುಮ್ಮನೆ ಕುಳಿತ ಜನರ ಕೈಗೆ ಕೆಲಸ ನೀಡಬೇಕು. ಕೈಗಾರೀ ಕರಣವಾಗಬೇಕು ಇದಕ್ಕೆ ಟೂ ಸೆಕ್ಟರ್ ಮಾಡೆಲ್ ಎಕಾನಮಿ ಎಂದು ಕರೆಯುತ್ತಾರೆ.

ಸರ್ ಅರ್ಥರ್ ಲೀವಿಸ್ ಎನ್ನುವ ಅರ್ಥ ಶಾಸ್ತ್ರಜ್ಞ ಅಂಬೇಡ್ಕರ್ ಅವರ ಈ ಆರ್ಥಿಕತೆಯ ಎಳೆಯನ್ನು ಇನ್ನಷ್ಟು ವಿಸ್ತರಿಸಿ ಒಂದು ಸೆಕ್ಟರ್‌ನಲ್ಲಿ ಇರುವ ಕೊರತೆಯನ್ನು ಇನ್ನೊಂದು ಸೆಕ್ಟರ್‌ನಲ್ಲಿ ಹೆಚ್ಚು ಕೆಲಸವಿಲ್ಲದೆ ಜನರನ್ನು ಬಳಸಿಕೊಂಡು ಕೈಗಾರಿಕಾ ಕ್ರಾಂತಿ, ಮತ್ತು ಹೆಚ್ಚು ಕ್ಷಮತೆಯಿಂದ ಮ್ಯಾನ್ ಪವರ್ ಉಪಯೋಗಿಸಿಕೊಳ್ಳುವುದ ರಿಂದ ಹೇಗೆ ದೇಶದ ಆರ್ಥಿಕತೆ ಬದಲಾಗುತ್ತದೆ ಮತ್ತು ವೈಯಕ್ತಿಕ ಆರ್ಥಿಕತೆ ಬಲಿಷ್ಠವಾಗುತ್ತದೆ ಎನ್ನುವುದನ್ನು ಮಂಡಿಸಿ ಎಕನಾಮಿಕ್ಸ್‌ಗೆ ನೀಡುವ ನೊಬೆಲ್ ಪ್ರಶಸ್ತಿಗೆ ಕೂಡ ಭಾಜನರಾಗುತ್ತಾರೆ. ಸರ್ ಅರ್ಥರ್‌ರವರು ಈ ವಾದ ಮಂಡಿಸುವ ದಶಕಗಳ ಮುಂಚೆಯೇ ಅಂಬೇಡ್ಕರ್ ಅವರು ಇದನ್ನು ಪ್ರಸ್ತಾಪಿಸಿದ್ದರೆನ್ನುವುದು ಗಮನಾರ್ಹ. ಈ ಘಟನೆ ಅಂಬೇಡ್ಕರ್ ಅವರು ಕೇವಲ ಭಾರ ತೀಯ ಆರ್ಥಿಕತೆಗೆ ಮಾತ್ರವಲ್ಲ ಜಾಗತಿಕ ಆರ್ಥಿ ಕತೆಗೆ ಕೂಡ ದಿಕ್ಕು ತೋರಿಸಬಲ್ಲ ಅರ್ಥ ಶಾಸ್ತ್ರಜ್ಞರಾ ಗಿದ್ದರು ಎನ್ನುವುದನ್ನು ಸಾಬೀತು ಮಾಡುತ್ತದೆ.

ಅಂಬೇಡ್ಕರ್ ಅವರ ಈ ಮಂಡನೆಯನ್ನು ವೇದ ವಾಕ್ಯದಂತೆ ತೆಗೆದುಕೊಂಡು ಬಹಳಷ್ಟು ದೇಶಗಳು ಇಂದು ಮುಂದುವರಿದ ಪಟ್ಟಿಗೆ ಸೇರಿದವರಾದರೂ ಭಾರತ ಮಾತ್ರ ಈ ಕ್ಷೇತ್ರದಲ್ಲಿ ಇಂದಿಗೂ ಹಾಗೇ ಉಳಿದು ಕೊಂಡಿರುವುದು ಖೇದನೀಯ. ತಮ್ಮ ಜೀವನದ ಒಂದು ಹಂತದ ನಂತರ ರಾಜಕೀಯ ಕ್ಷೇತ್ರಕ್ಕೆ ಬಂದ ಅಂಬೇಡ್ಕರ್ ಅವರು ಭಾರತೀಯ ಆರ್ಥಿಕತೆ ಬಗ್ಗೆ ಕಳ ಕಳಿ ವ್ಯಕ್ತಪಸಿಡುತ್ತಲೇ ಇದ್ದರು. ದೇಶವೊಂದು ಆರ್ಥಿಕ ಭದ್ರವಾಗದ ಹೊರತು ಜಾಗತಿಕ ಮಟ್ಟದಲ್ಲಿ ಮನ್ನಣೆ ಸಿಗುವುದಿಲ್ಲ ಮತ್ತು ದೇಶ ಆರ್ಥಿಕತೆ ಬಗ್ಗೆ ಕಳಕಳಿ ವ್ಯಕ್ತಪಡಿಸುತ್ತಲೇ ಇದ್ದರು. ದೇಶ ವೊಂದು ಆರ್ಥಿಕತೆ ಭದ್ರವಾಗದ ಹೊರತು ಜಾಗತಿಕ ಮಟ್ಟದಲ್ಲಿ ಮನ್ನಣೆ ಸಿಗುವುದಿಲ್ಲ ಮತ್ತು ದೇಶ ಆರ್ಥಿಕವಾಗಿ ಭದ್ರವಾಗಲು ಜೊತೆಗೆ ಉಳಿಸುವ ಸಂಪ್ರದಾಯ ಬರುತ್ತದೋ ಆ ದೇಶದಲ್ಲಿ ಆರ್ಥಿಕ ಭದ್ರತೆ ತಾನೇ ತಾನಾಗಿ ಬರುತ್ತದೆ. ಎನ್ನುವ ಅವರ ಮಾತನ್ನು ಒಂದು ಹಂತದ ವರೆಗೆ ಭಾರತದ ಸಮಾಜ ಪಾಲಿಸಿದೆ. ಬಹಳಷ್ಟು ಪಾಲಿಸುವ ಅವಶ್ಯಕತೆ ಇದೆ. ಡಾ. ಬಿ.ಆರ್ ಅಂಬೇಡ್ಕರ್ ಅವರನ್ನು ಯಾವುದೇ ಒಂದು ವರ್ಗಕ್ಕೆ ಸೀಮಿತ ಗೊಳಿಸದೆ ಅವರಲೊಬ್ಬ ದಾರ್ಶನಿಕ ಅರ್ಥ ಶಾಸ್ತ್ರಜ್ಞರನ್ನು ಕಾಣಬೇಕಿದೆ.





ಗೌತಮ ವಾಗರಾಜ
ನ್ಯಾಯವಾದಿಗಳು
ಬೀದರ ಕೋಟೆ ವಾರ ಪತ್ರಿಕೆ
ಕಾನೂನು ಸಲಹೆಗಾರರು.

# ಕೆಪಿಎಸ್ಸಿ ನೇಮಕಾತಿ ಪ್ರಕ್ರಿಯೆ ಮತ್ತೊಮ್ಮೆ ವಿವಾದ

ಕೆಪಿಎಸ್ಸಿ ಮೂಲಕ ಸರ್ಕಾರಿ ಉದ್ಯೋಗವನ್ನು ಪಡೆಯುವ ಹಂಬಲವನ್ನು ಬಹುಶಹ ಇನ್ನು ಮುಂದೆ ಮರೆತು ಬಿಡಬೇಕೆನೋ. ಕಾರ್ಯದರ್ಶಿಕವಾಗಿ ನಡೆಯಬೇಕಿದ್ದ ಆಯ್ಕೆ ಪ್ರಕ್ರಿಯೆಯಲ್ಲಿ ಲೋಪ ದೋಷಗಳು ಎದ್ದು ಕಾಣುತ್ತವೆ. ಇದರಿಂದ ನಿಷ್ಠಾವಂತ ಪ್ರಾಮಾಣಿಕ ಹಾಗೂ ಅರ್ಹತೆಯುಳ್ಳ ಯುವಕರಿಗೆ ಅವರು ಬಯಸಿದ ಉದ್ಯೋಗ ಸಿಗದೇ ವಂಚನೆ ಆಗುತ್ತಿರುವುದು ಕಾಣಬಹುದು!

ಕರ್ನಾಟಕದಲ್ಲಿ ಸರ್ಕಾರಿ ಉದ್ಯೋಗಕ್ಕಾಗಿ ಲಕ್ಷಾಂತರ ಯುವಕರು ಕನಸು ಕಾಣುತ್ತಾರೆ. ಆ ಕನಸುಗಳನ್ನು ಸಾಕಾರಗೊಳಿಸುವ ಪ್ರಮುಖ ಸಂಸ್ಥೆ ಎಂದರೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್ಸಿ). ಆದರೆ ಕಳೆದ ಕೆಲವು ವರ್ಷಗಳಿಂದ ಈ ಆಯೋಗದ ನೇಮಕಾತಿ ಪ್ರಕ್ರಿಯೆ ಪದೇ ಪದೇ ಅಕ್ರಮ, ಭ್ರಷ್ಟಾಚಾರ ಮತ್ತು ಆಡಳಿತಾತ್ಮಕ ಗೊಂದಲಗಳ ಕಾರಣಕ್ಕೆ ಸುದ್ದಿಯಾಗುತ್ತಲೇ ಇದೆ. ಇತ್ತೀಚಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯೂ ಇದೇ ರೀತಿಯ ವಿವಾದಕ್ಕೆ ಕಾರಣವಾಗಿ ಮತ್ತೊಮ್ಮೆ ಆಯೋಗದ ಕಾರ್ಯವೈಖರಿಯನ್ನು ಪ್ರಶ್ನಿಸುವಂತಾಗಿದೆ.

## ದಶಕಗಳಿಂದ ಮುಂದುವರಿಯುತ್ತಿರುವ ಆರೋಪಗಳು!

ಸುಮಾರು ಮೂರು ದಶಕಗಳಿಂದ ಕೆಪಿಎಸ್ಸಿ ನಡೆಸಿದ ಹಲವಾರು ನೇಮಕಾತಿ ಪ್ರಕ್ರಿಯೆಗಳ ಬಗ್ಗೆ ವಿವಾದಗಳು ಕೇಳಿಬರುತ್ತಲೇ ಇವೆ. ಅರ್ಹ ಅಭ್ಯರ್ಥಿಗಳಿಗೆ ನ್ಯಾಯಯುತವಾಗಿ ಹುದ್ದೆಗಳು ದೊರೆತಿರುವ ಉದಾ ಹರಣೆಗಳು ಅಪರೂಪವೆಂದು ಉದ್ಯೋಗ ಆಕಾಂಕ್ಷಿಗಳು ಆರೋಪಿಸುತ್ತಾರೆ. ವಿಶೇಷವಾಗಿ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪ್ರತಿ ಬಾರಿಯೂ ಯಾವುದಾದರೂ ಒಂದು ವಿವಾದಕ್ಕೆ ಕಾರಣವಾಗುವುದು ಸಾಮಾನ್ಯವಾಗಿದೆ.

ಈ ಅವಧಿಯಲ್ಲಿ ರಾಜ್ಯದಲ್ಲಿ ಆಡಳಿತ ನಡೆಸಿದ ಪ್ರಮುಖ ರಾಜಕೀಯ ಪಕ್ಷಗಳು? ಭಾರತೀಯ ಜನತಾ ಪಾರ್ಟಿ (ಬಿಜೆಪಿ), ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಜಾತ್ಯಾತೀತ ಜನತಾ ದಳ ವಿರೋಧ ಪಕ್ಷದಲ್ಲಿದ್ದಾಗ ಆಯೋಗದ ಅಕ್ರಮಗಳ ವಿರುದ್ಧ ತೀವ್ರವಾಗಿ ಧ್ವನಿ ಎತ್ತಿದ್ದರೂ, ಅಧಿಕಾರಕ್ಕೆ ಬಂದ ನಂತರ ಆಯೋಗದಲ್ಲಿ ಮೂಲಭೂತ ಸುಧಾರಣೆ ತರಲು ಪ್ರಯತ್ನಿಸಿಲ್ಲ ಎಂಬ ಟೀಕೆಗಳು ಕೇಳಿಬರುತ್ತಿವೆ.

## 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿ...

2024ರ ಫೆಬ್ರವರಿಯಲ್ಲಿ ಸುಮಾರು 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಯಿತು. ಸಾಮಾನ್ಯವಾಗಿ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟವಾದ ಬಳಿಕವೇ ವಿವಾದಗಳು ಪ್ರಾರಂಭವಾಗುತ್ತಿದ್ದರೆ, ಈ ಬಾರಿ ಪರೀಕ್ಷೆಯ ಆರಂಭದಲ್ಲೇ ಸಮಸ್ಯೆಗಳು ಕಾಣಿಸಿಕೊಂಡವು.

2024ರ ಆಗಸ್ಟ್‌ನಲ್ಲಿ ನಡೆದ ಪೂರ್ವಭಾವಿ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆಗಳ ಕನ್ನಡ ಭಾಷಾಂತರದಲ್ಲಿ ಗಂಭೀರವಾದ ದೋಷಗಳು ಕಂಡುಬಂದವು. ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರಿಸುವ ವೇಳೆ ಪ್ರಶ್ನೆಗಳು ಮತ್ತು ಆಯ್ಕೆ ಉತ್ತರಗಳು ಪರಸ್ಪರ ವಿರುದ್ಧವಾಗಿದ್ದವು. ಕೆಲವು ಪ್ರಶ್ನೆಗಳು ಅರ್ಥವಾಗದಂತೆಯೂ ಇದ್ದವು. ಇದರಿಂದ ಅಭ್ಯರ್ಥಿಗಳಲ್ಲಿ ತೀವ್ರ ಅಸಮಾಧಾನ ವ್ಯಕ್ತವಾಯಿತು.


ಈ ಹಿನ್ನೆಲೆಯಲ್ಲಿ ಸರ್ಕಾರ ಮಧ್ಯಪ್ರವೇಶಿಸಿ ಮತ್ತೆ ಪೂರ್ವಭಾವಿ ಪರೀಕ್ಷೆ ನಡೆಸುವಂತೆ ಸೂಚಿಸಿತು. ನಂತರ 2024ರ ಡಿಸೆಂಬರ್‌ನಲ್ಲಿ ಮರುಪರೀಕ್ಷೆ ನಡೆಯಿತು.

ಮುಖ್ಯ ಪರೀಕ್ಷೆ ಮತ್ತು ಸಂದರ್ಶನ ಪಟ್ಟಿ 2025ರ ಮೇ ತಿಂಗಳಲ್ಲಿ ನಡೆದ ಮುಖ್ಯ ಪರೀಕ್ಷೆಯಲ್ಲಿ ಸುಮಾರು 5,700ಕ್ಕೂ ಹೆಚ್ಚು ಅಭ್ಯರ್ಥಿಗಳು ಭಾಗವಹಿಸಿದರು. ನಿಯಮಾನುಸಾರ 1:3 ಅನುಪಾತದಲ್ಲಿ 1,152 ಅಭ್ಯರ್ಥಿಗಳನ್ನು ವ್ಯಕ್ತಿತ್ವ ಪರೀಕ್ಷೆಗೆ ಆಯ್ಕೆ ಮಾಡಲಾಯಿತು. ಈ ಪಟ್ಟಿಯನ್ನು ಆಯೋಗವು 2026ರ ಮಾರ್ಚ್ 2ರಂದು ಪ್ರಕಟಿಸಿತು.



| | | |
|---|---|---|
| 780) | 250004809 | SHABEER AHAMMAD |
| 781) | 250004810 | SAFVAAN P A |
| 782) | 250004811 | ARAVIND S M |
| 783) | 250004812 | NAVEEN KUMAR A S |
| 784) | 250004813 | BEERENDRA KESHAVA T |
| 785) | 250004814 | SONIK B |
| 786) | 250004815 | PUNITH V |
| 787) | 250004816 | VINAY M H |
| 788) | 250004818 | GUNAPALA J |
| 789) | 250004819 | KEMPARAJU MC |
| 790) | 250004823 | VASHISTA S R |
| 791) | 250004826 | CHANDRASHEKAR S S |
| 792) | 250004828 | IRSHAD KHAN |
| 793) | 250004836 | PRASHANTH B |
| 794) | 250004838 | VIJAYAKUMAR PUTTAPPA NAIK |
| 795) | 250004843 | ABILASH B |
| 796) | 250004844 | VINAYAK SIDDAPPA BHAVI |
| 797) | 250004845 | MANJUNATH L |

32 / 47



ಆದರೆ ಈ ಪಟ್ಟಿ ಪ್ರಕಟವಾದ ಕೂಡಲೇ ಹೊಸ ವಿವಾದ ಆರಂಭವಾಯಿತು. ಅರ್ಹತಾ ಪಟ್ಟಿ ಸಿದ್ಧಪಡಿಸುವ ವೇಳೆ ಭ್ರಷ್ಟಾಚಾರ ನಡೆದಿದೆ, ಒಂದು ಹುದ್ದೆಗೆ ಹಲವು ಕೋಟಿ ರೂಪಾಯಿ ಲಂಚ ಪಡೆಯಲಾಗಿದೆ ಎಂಬ ಗಂಭೀರ ಆರೋಪಗಳು ಕೇಳಿಬಂದವು. ಈ ಆರೋಪಗಳ ನಡುವೆಯೇ ಆಯೋಗವು ವ್ಯಕ್ತಿತ್ವ ಪರೀಕ್ಷೆಯ ವೇಳಾಪಟ್ಟಿಯನ್ನು ಪ್ರಕಟಿಸಿತು.

## ಸರ್ಕಾರದ ಸ್ಪಷ್ಟನೆ ಮತ್ತು ಆಯೋಗದ ಪ್ರತಿಕ್ರಿಯೆ...

ಈ ಆರೋಪಗಳ ಬಗ್ಗೆ ವರದಿ ನೀಡುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಆಯೋಗದ ಕಾರ್ಯದರ್ಶಿಗೆ ಸೂಚನೆ ನೀಡಿದರು. ಆದರೆ ಆಯೋಗದ ಕಾರ್ಯದರ್ಶಿ ಕೆ ಜ್ಯೋತಿ ಯಾವುದೇ ಭ್ರಷ್ಟಾಚಾರ ನಡೆದಿಲ್ಲ, ಪರೀಕ್ಷೆ ಸಂಪೂರ್ಣ ಪಾರದರ್ಶಕವಾಗಿ ನಡೆಸಲಾಗಿದೆ ಎಂದು ಸ್ಪಷ್ಟಪಡಿಸಿದರು. ಆಧಾರವಿಲ್ಲದೆ ಆರೋಪ ಮಾಡುವುದು ಸರಿಯಲ್ಲ ಎಂದು ಅವರು ಹೇಳಿದರು.ಇದಕ್ಕೂ ಮಧ್ಯೆ ವ್ಯಕ್ತಿತ್ವ ಪರೀಕ್ಷೆಗೆ ನಿಗದಿಪಡಿಸಿದ್ದ ವೇಳಾಪಟ್ಟಿಯನ್ನು "ಆಡಳಿತಾತ್ಮಕ ಕಾರಣಗಳಿಂದ" ಹಿಂಪಡೆಯಲಾಗಿದೆ ಎಂದು ಆಯೋಗ ಘೋಷಿಸಿತು.

## ವಿಧಾನಸಭೆಯಲ್ಲೂ ಪ್ರತಿಧ್ವನಿ?

ಈ ವಿವಾದ ರಾಜ್ಯ ರಾಜಕೀಯದಲ್ಲೂ ದೊಡ್ಡ ಚರ್ಚೆಗೆ ಕಾರಣವಾಯಿತು. ವಿಧಾನಸಭೆ ಕಲಾಪದಲ್ಲಿಯೂ ವಿಷಯ ಪ್ರಸ್ತಾಪವಾಗಿ ವಿರೋಧ ಪಕ್ಷದ ಸದಸ್ಯರು ಕೆಪಿಎಸ್ಸಿಯನ್ನು "ಉದ್ಯೋಗ ಆಕಾಂಕ್ಷಿಗಳ ಕನಸುಗಳನ್ನು ಕೊಲ್ಲುವ ಕೇಂದ್ರ" ಎಂದು ಟೀಕಿಸಿದರು.ಇನ್ನೊಂದೆಡೆ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ ಖರ್ಗೆ ಆಯೋಗವನ್ನೇ ರದ್ದುಪಡಿಸುವ ಕುರಿತು ಚಿಂತನೆ ಮಾಡಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

2025ರ ವಿಧಾನಸಭಾ ಅಧಿವೇಶನದಲ್ಲಿ ಈ ವಿಷಯ ಚರ್ಚೆಗೆ ಬಂದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಆಯೋಗದಲ್ಲಿ ಪಾರದರ್ಶಕತೆ ಹೆಚ್ಚಿಸಲು ಕಾಯಿದೆಗಳಿಗೆ ತಿದ್ದುಪಡಿ ತಂದು ನಿಯಮಗಳನ್ನು ಬದಲಾಯಿಸಲಾಗುವುದು ಎಂದು ಭರವಸೆ ನೀಡಿದ್ದರು. ಆದರೆ ಒಂದು ವರ್ಷ ಕಳೆದರೂ ಯಾವುದೇ ಮಹತ್ವದ ಸುಧಾರಣೆ ಕಂಡುಬಂದಿಲ್ಲ ಎಂಬ ಟೀಕೆಗಳು ಮುಂದುವರಿದಿವೆ.

## ಆಡಳಿತಾತ್ಮಕ ಅಸ್ಥಿರತೆ

ಈ ನೇಮಕಾತಿ ಪ್ರಕ್ರಿಯೆಯ ಅವಧಿಯಲ್ಲಿ ಆಯೋಗದ ಆಡಳಿತಾತ್ಮಕ ವ್ಯವಸ್ಥೆಯಲ್ಲಿಯೂ ಅಸ್ಥಿರತೆ ಕಂಡುಬಂದಿದೆ. ಅಧಿಸೂಚನೆ ಹೊರಬಂದ ನಂತರ ಆಯೋಗದ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸಿದ್ದ ಲತಾ ಕುಮಾರಿ, ರಾಕೇಶ್ ಕುಮಾರ್, ರಮಣ ದೀಪ್ ಚೌಧರಿ ಮತ್ತು ಆರ್. ವಿಶಾಲ್ ಸೇರಿದಂತೆ ಹಲವು ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ. ಪ್ರಮುಖ ಹುದ್ದೆಗಳಲ್ಲಿ ನಡೆದ ಈ ಬದಲಾವಣೆಗಳ ಹಿಂದೆ ಕಾಣದ ಕೈಗಳ ಒತ್ತಡವಿದೆ ಎಂಬ ಆರೋಪಗಳು ಕೇಳಿಬಂದಿವೆ.

ಆದರೆ ಪರೀಕ್ಷೆಗಳ ಉಸ್ತುವಾರಿ ಹೊಂದಿರುವ ನಿಯಂತ್ರಕ ಹುದ್ದೆಯಲ್ಲಿ ನಾಲ್ಕು ವರ್ಷಗಳಿಂದ ಇರುವ ಜ್ಞಾನೇಂದ್ರ ಕುಮಾರ್ ಗಂಗವಾರ ಅವರನ್ನು ಇನ್ನೂ ವರ್ಗಾವಣೆ ಮಾಡಿಲ್ಲ ಎಂಬ ಪ್ರಶ್ನೆಯೂ ಎದ್ದಿದೆ. ಪರೀಕ್ಷೆಗಳಲ್ಲಿನ ಲೋಪಗಳಿಗೆ ಅವರೇ ಕಾರಣ ಎಂದು ವಿಧಾನಸಭೆಯಲ್ಲಿಯೇ ಕೆಲವು ಶಾಸಕರು ಆರೋಪಿಸಿದ್ದಾರೆ.

## ಮುಂದಿನ ದಾರಿ ಏನು?

ಕೆಪಿಎಸ್ಸಿ ಒಂದು ಸಾಂವಿಧಾನಿಕ ಸಂಸ್ಥೆಯಾಗಿರುವುದರಿಂದ ಅದರ ಸದಸ್ಯರ ವಿರುದ್ಧ ನೇರವಾಗಿ ಕ್ರಮ ಜರುಗಿಸುವ ಅಧಿಕಾರ ಸರ್ಕಾರಕ್ಕೆ ಇಲ್ಲ. ಆದರೆ ಹೊಸ ಸದಸ್ಯರನ್ನು ನೇಮಿಸುವಾಗ ಕಳಂಕ ರಹಿತ ಹಾಗೂ ಪ್ರಾಮಾಣಿಕ ವ್ಯಕ್ತಿಗಳನ್ನು ಆಯ್ಕೆ ಮಾಡುವ ಜವಾಬ್ದಾರಿ ಸರ್ಕಾರದ ಮೇಲಿದೆ.

ನಿವೃತ್ತ ನ್ಯಾಯಮೂರ್ತಿಗಳು ಹಾಗೂ ಆಡಳಿತ ತಜ್ಞರೊಂದಿಗೆ ಸಮಾಲೋಚನೆ ನಡೆಸಿ ಆಯೋಗದ ಕಾರ್ಯವೈಖರಿಯನ್ನು ಸಂಪೂರ್ಣವಾಗಿ ಪುನರ್‌ರಚಿಸುವ ಅಗತ್ಯವಿದೆ ಎಂಬ ಅಭಿಪ್ರಾಯ ತಜ್ಞರಿಂದ ವ್ಯಕ್ತವಾಗುತ್ತಿದೆ. ವಿಶೇಷವಾಗಿ ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್ (ಯುಪಿಎಸ್ಸಿ) ಮಾದರಿಯಲ್ಲಿ ಪಾರದರ್ಶಕ ಹಾಗೂ ನಂಬಿಕೆಗೆ ಪಾತ್ರವಾದ ವ್ಯವಸ್ಥೆಯನ್ನು ರೂಪಿಸುವ ಅಗತ್ಯವಿದೆ.

ರಾಜ್ಯದ ಲಕ್ಷಾಂತರ ಉದ್ಯೋಗ ಆಕಾಂಕ್ಷಿಗಳ ಭವಿಷ್ಯ ಈ ಸಂಸ್ಥೆಯ ಮೇಲೆ ಅವಲಂಬಿತವಾಗಿದೆ. ಆದ್ದರಿಂದ ಸರ್ಕಾರವು ಮಾತಿನ ಮಟ್ಟದಲ್ಲೇ ನಿಲ್ಲದೆ ಗಂಭೀರ ಸುಧಾರಣೆಗಳಿಗೆ ಮುಂದಾಗುವುದು ಕಾಲದ ಅವಶ್ಯಕತೆಯಾಗಿದೆ.

# ಕಲಬುರಗಿ: ಅಂತರರಾಜ್ಯ ಕುಖ್ಯಾತ ಇರಾನಿ ಗ್ಯಾಂಗ್ ಬಂಧನ

## 27.30 ಲಕ್ಷ ಮೌಲ್ಯದ ವಸ್ತುಗಳ ವಶ





ಈ ಕಾರ್ಯಾಚರಣೆ ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ. ಅವರ ಮಾರ್ಗದರ್ಶನದಲ್ಲಿ, ಅಪರಾಧ ಮತ್ತು ಸಂಚಾರ ವಿಭಾಗದ ಉಪ ಪೊಲೀಸ್ ಆಯುಕ್ತ ಪ್ರವೀಣ್ ಎಚ್ ನಾಯಕ್ ಹಾಗೂ ಸಬ್ ಅರ್ಬನ್ ಉಪ ವಿಭಾಗದ ಎಸಿಪಿ ಬಸವೇಶ್ವರ ಅವರ ಮೇಲ್ವಿಚಾರಣೆಯಲ್ಲಿ ನಡೆಯಿತು. ಸಬ್ ಅರ್ಬನ್ ಪೊಲೀಸ್ ಠಾಣೆಯ ಪಿಐ ನಟರಾಜ ಲಾಡೆ ನೇತೃತ್ವದಲ್ಲಿ ಪಿಎಸ್ಐ ಶಶಿಕಲಾ ಮತ್ತು ಸಿಬ್ಬಂದಿ ತಂಡ ದಾಳಿಯಲ್ಲಿ ಭಾಗವಹಿಸಿದ್ದರು. ಬಂಧಿತ ಆರೋಪಿಗಳನ್ನು ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶ ರಾಜ್ಯಗಳ ವಿವಿಧ ಭಾಗಗಳ ನಿವಾಸಿಗಳೆಂದು ಗುರುತಿಸಲಾಗಿದೆ. ಬಂಧಿತರಲ್ಲಿ ಜಹೀರ್ ಅಬ್ಬಾಸ್ ಅಲಿ, ಅಲಿ ರಜಾಕ್, ಲಾಲಾ ಸಮೀರಾ ಶೇಖ್, ಖಾಸಿಂ, ಅಲಿಮಿರ್ಜಾ, ಜಾಫರ್ ಅಲಿ ಸೈಯದ್ ಹಾಗೂ ಜಾಫರ್ ಸೇರಿದ್ದಾರೆ.

ಕಲಬುರಗಿ ನಗರದಲ್ಲಿ ಸಬ್ ಅರ್ಬನ್ ಪೊಲೀಸರ ಯಶಸ್ವಿ ಕಾರ್ಯಾಚರಣೆಯಲ್ಲಿ ಅಂತರರಾಜ್ಯ ಮಟ್ಟದಲ್ಲಿ ಸಕ್ರಿಯವಾಗಿದ್ದ ಕುಖ್ಯಾತ ಇರಾನಿ ಗ್ಯಾಂಗ್‌ನ ಏಳು ಆರೋಪಿಗಳನ್ನು ಬಂಧಿಸಲಾಗಿದ್ದು, ಒಟ್ಟು 27.30 ಲಕ್ಷ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಜನವರಿ 23, 2026 ರಂದು ಬೆಳಿಗ್ಗೆ 4:30 ಗಂಟೆ ಸುಮಾರಿಗೆ ತಾವರಗೇರಾ ಕ್ರಾಸ್ ಹತ್ತಿರ ಕೆಲವರು ಮಾರಕಾಸ್ತ್ರಗಳನ್ನು ಹಿಡಿದು ಮುಖಕ್ಕೆ ಬಟ್ಟೆ ಕಟ್ಟಿ ವಾಹನ ಸವಾರರನ್ನು ತಡೆದು ದರೋಡೆ ಮಾಡಲು ಯತ್ನಿಸುತ್ತಿದ್ದಾರೆ ಎಂಬ ಖಚಿತ ಮಾಹಿತಿ ಸಬ್ ಅರ್ಬನ್ ಪೊಲೀಸರಿಗೆ ಲಭ್ಯವಾಯಿತು. ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು ದಾಳಿ ನಡೆಸಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾದರು.


ಈ ಕಾರ್ಯಾಚರಣೆ ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ. ಅವರ ಮಾರ್ಗದರ್ಶನದಲ್ಲಿ, ಅಪರಾಧ ಮತ್ತು ಸಂಚಾರ ವಿಭಾಗದ ಉಪ ಪೊಲೀಸ್ ಆಯುಕ್ತ ಪ್ರವೀಣ್ ಎಚ್ ನಾಯಕ್ ಹಾಗೂ ಸಬ್ ಅರ್ಬನ್ ಉಪ ವಿಭಾಗದ ಎಸಿಪಿ ಬಸವೇಶ್ವರ ಅವರ ಮೇಲ್ವಿಚಾರಣೆಯಲ್ಲಿ ನಡೆಯಿತು. ಸಬ್ ಅರ್ಬನ್ ಪೊಲೀಸ್ ಠಾಣೆಯ ಪಿಐ ನಟರಾಜ ಲಾಡೆ ನೇತೃತ್ವದಲ್ಲಿ ಪಿಎಸ್ಐ ಶಶಿಕಲಾ ಮತ್ತು ಸಿಬ್ಬಂದಿ ತಂಡ ದಾಳಿಯಲ್ಲಿ ಭಾಗವಹಿಸಿದ್ದರು.

ಬಂಧಿತ ಆರೋಪಿಗಳನ್ನು ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶ ರಾಜ್ಯಗಳ ವಿವಿಧ ಭಾಗಗಳ ನಿವಾಸಿಗಳೆಂದು ಗುರುತಿಸಲಾಗಿದೆ. ಬಂಧಿತರಲ್ಲಿ ಜಹೀರ್ ಅಬ್ಬಾಸ್ ಅಲಿ, ಅಲಿ ರಜಾಕ್, ಲಾಲಾ ಸಮೀರಾ ಶೇಖ್, ಖಾಸಿಂ, ಅಲಿಮಿರ್ಜಾ, ಜಾಫರ್ ಅಲಿ ಸೈಯದ್ ಹಾಗೂ ಜಾಫರ್ ಸೇರಿದ್ದಾರೆ.

ಪೊಲೀಸರು ಆರೋಪಿಗಳಿಂದ ಕೃತ್ಯಕ್ಕೆ ಬಳಸಿದ ಟಾಟಾ ಹೆಕ್ಸಾ ಕಾರು, ಟಿವಿಎಸ್ ಅಪಾಚಿ ಹಾಗೂ ಹೋಂಡಾ ಹಾರ್ನೆಟ್ ಮೋಟಾರ್ ಸೈಕಲ್‌ಗಳು, ಜೊತೆಗೆ ರಾಡು, ತಳವಾರ, ಖಾರದ ಪುಡಿ ಹಾಗೂ ಕಪ್ಪು ಬಟ್ಟೆಗಳನ್ನು ವಶಪಡಿಸಿಕೊಂಡಿದ್ದಾರೆ.

ವಿಚಾರಣೆ ವೇಳೆ ಆರೋಪಿಗಳು ಬಂಗಾರದ ಆಭರಣ ದೋಚಿದ ವಿಚಾರವನ್ನು ಒಪ್ಪಿಕೊಂಡಿದ್ದು, ಸುಮಾರು 90 ಗ್ರಾಂ ಬಂಗಾರದ ಆಭರಣಗಳು (15.30 ಲಕ್ಷ ಮೌಲ್ಯ) ವಶಪಡಿಸಿಕೊಳ್ಳಲಾಗಿದೆ. ಇದಲ್ಲದೆ ಕೃತ್ಯಕ್ಕೆ ಬಳಸಿದ ವಾಹನಗಳೊಂದಿಗೆ ಒಟ್ಟು 27.30 ಲಕ್ಷ ಮೌಲ್ಯದ ಸ್ವತ್ತುಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

ಬಂಧಿತ ಜಹೀರ್ ಅಬ್ಬಾಸ್ ಅಲಿ ವಿರುದ್ಧ ಉತ್ತರ ಪ್ರದೇಶದ ಸಹನಾಪುರ ಪೊಲೀಸ್ ಠಾಣೆಯಲ್ಲಿ ಈಗಾಗಲೇ ವಂಚನೆ, ಕಳವು ಸೇರಿದಂತೆ ಹಲವು ಪ್ರಕರಣಗಳು ದಾಖಲಾಗಿದ್ದು, ಅವನ ಮಾಹಿತಿ ನೀಡಿದವರಿಗೆ 15,000 ಬಹುಮಾನವೂ ಘೋಷಿಸಲಾಗಿತ್ತು.



ಈ ಗ್ಯಾಂಗ್ ಸದಸ್ಯರ ವಿರುದ್ಧ ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ, ಮಹಾರಾಷ್ಟ್ರ, ತೆಲಂಗಾಣ ಹಾಗೂ ಕರ್ನಾಟಕ ರಾಜ್ಯಗಳಲ್ಲಿ ನಕಲಿ ಪೊಲೀಸ್ ಅಧಿಕಾರಿಗಳಂತೆ ವರ್ತಿಸಿ ವಂಚನೆ, ಸುಲಿಗೆ ಮತ್ತು ದರೋಡೆ ನಡೆಸಿದ ಪ್ರಕರಣಗಳು ದಾಖಲಾಗಿವೆ.

ಪ್ರಸ್ತುತ ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಹೆಚ್ಚಿನ ತನಿಖೆ ಮುಂದುವರೆದಿದೆ.

ಈ ಕುಖ್ಯಾತ ಗ್ಯಾಂಗ್‌ನ್ನು ಪತ್ತೆಹಚ್ಚಿ ಬಂಧಿಸಿದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ. ಅವರು ಶ್ಲಾಘಿಸಿದ್ದಾರೆ.

**ಪೊಲೀಸ್ ಆಯುಕ್ತರ ಕಾರ್ಯಾಲಯ ಕಲಬುರಗಿ ಅವರ ಪತ್ರಿಕಾ ಪ್ರಕಟಣೆ ಹೀಗಿದೆ...**

ಸಬ್ ಅರ್ಬನ್ ಪೊಲೀಸರ ಕಾರ್ಯಾಚರಣೆ. ಅಂತರ ರಾಜ್ಯ ಕುಖ್ಯಾತ ಇರಾನಿ ಗ್ಯಾಂಗ್ ಬಂಧನ 27,30,000 ಮೌಲ್ಯದ ವಸ್ತು ವಶ.

ಸಬ್ ಅರ್ಬನ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದಿನಾಂಕ 23.01.2026ರಂದು ಬೆಳಿಗ್ಗೆ 4:30 ಗಂಟೆಗೆ ತಾವರಗೇರಾ ಕ್ರಾಸ್ ಹತ್ತಿರ ಯಾರು ಆರೆಳು ಜನರು ಕೈಯಲ್ಲಿ ಮಾರಕಾಸ್ತ್ರಗಳನ್ನು ಹಿಡಿದು ಮುಖಕ್ಕೆ ಬಟ್ಟೆ ಕಟ್ಟಿಕೊಂಡು ನಿಂತು ರೋಡಿಗೆ ಹೋಗಿ ಬರುವ ವಾಹನ ಸವಾರರಿಗೆ ತಡೆದು ದರೋಡೆಗೆ ಪ್ರಯತ್ನ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದ ಮೇರೆಗೆ ಕಲಬುರಗಿ ನಗರ ಪೊಲೀಸ್ ಆಯುಕ್ತರಾದ ಡಾ ಶರಣಪ್ಪ ಎಸ್ ಡಿ, ಐಪಿಎಸ್ ಅವರ ಮಾರ್ಗದರ್ಶನದಲ್ಲಿ, ಕಲಬುರಗಿ ನಗರ ಅಪರಾಧ ಮತ್ತು ಸಂಚಾರ ವಿಭಾಗದ ಉಪ ಪೊಲೀಸ್ ಆಯುಕ್ತರಾದ ಪ್ರವೀಣ್ ಎಚ್ ನಾಯಕ್ ಕೆ ಎಸ್ ಪಿ ಎಸ್ ಮತ್ತು ಕಲಬುರಗಿ ನಗರ ಸಬ್ ಅರ್ಬನ್ ಉಪ ವಿಭಾಗದ ಎಸಿಪಿ ಬಸವೇಶ್ವರ ಅವರ ಮಾರ್ಗದರ್ಶನದಲ್ಲಿ, ಕಲಬುರಗಿ ನಗರ ಸಬ್ ಅರ್ಬನ್ ಪೊಲೀಸ್ ಠಾಣೆಯ ಪಿ ಐ ನಟರಾಜ ಲಾಡೆ ನೇತೃತ್ವದಲ್ಲಿ ಪಿಎಸ್ಐ ಶಶಿಕಲಾ ಹಾಗೂ ಸಿಬ್ಬಂದಿಯವರಾದ ಎ ಎಸ್ ಐ ಪುಂಡಲಿಕ ನಾಗರಾಜ ಎಂವಿ ಬೇಗ, ಸಿಪಿಸಿ ಮಂಜುನಾಥ್ ಫಿರೋಜ್ ಮಲ್ಲಿಕಾರ್ಜುನ ಸುಲ್ತಾನ ಅಶೋಕ ಅನಿಲ ಶಶಿಕಾಂತ ಮಹೇಶ ಮತ್ತು ಶಶಿಕಾಂತ ಹಾಗೂ ಬ್ರಹ್ಮಪುರ ಪೊಲೀಸ್ ಠಾಣೆಯ ಸಿಪಿಸಿ ಮೋಸಿನ ಪಟೇಲ್, ರೋಜಾ ಅವರುಗಳನ್ನು

(5ನೇ ಪುಟಕ್ಕೆ)

# ಕಲಬುರಗಿ ನಗರದಲ್ಲಿ ಶಾಂತಿ–ಸುವ್ಯವಸ್ಥೆಗೆ ಕಠಿಣ ಕ್ರಮ:

## ಕಮಿಷನರ್ ಡಾ. ಶರಣಪ್ಪ ಎಸ್.ಡಿ. ನೇತೃತ್ವದಲ್ಲಿ ಪೊಲೀಸ್ ಇಲಾಖೆಯ ದಿಟ್ಟ ಹೆಜ್ಜೆಗಳು



ಕಲಬುರಗಿ: ಉತ್ತರ ಕರ್ನಾಟಕದ ಪ್ರಮುಖ ನಗರವಾಗಿರುವ ಕಲಬುರಗಿ ಮಹಾನಗರವು ಐತಿಹಾಸಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಮಹತ್ವವನ್ನು ಹೊಂದಿದ್ದು, ರಾಜ್ಯದ ಪ್ರಮುಖ ನಗರಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ. ಬಹಮನಿ ಸುಲ್ತಾನರ ಕಾಲದಲ್ಲಿ ರಾಜಧಾನಿಯಾಗಿದ್ದ ಈ ನಗರವು ಇಂದು ಸಹ ತನ್ನ ಐತಿಹಾಸಿಕ ವೈಭವವನ್ನು ಉಳಿಸಿಕೊಂಡಿದೆ. ಕಲಬುರಗಿ ಕೋಟೆ, ಶರಣಬಸವೇಶ್ವರ ದೇವಸ್ಥಾನ, ಹಾಫ್ತ್ ಗುಂಬಜ್, ಲಂಗರ್ ದರ್ಗಾ ಮುಂತಾದ ಪ್ರಸಿದ್ಧ ಸ್ಮಾರಕಗಳು ನಗರದ ವೈಶಿಷ್ಟ್ಯವನ್ನು ಪ್ರತಿಬಿಂಬಿಸುತ್ತವೆ.

ಇದಲ್ಲದೆ, ಶಿಕ್ಷಣ ಕ್ಷೇತ್ರದಲ್ಲಿಯೂ ಕಲಬುರಗಿ ಮುಂದುವರೆದಿದ್ದು, ಕಲಬುರಗಿ ವಿಶ್ವವಿದ್ಯಾಲಯ ಸೇರಿದಂತೆ ಅನೇಕ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳನ್ನು ಒದಗಿಸುತ್ತಿವೆ. ಕೃಷಿ ಮತ್ತು ವಾಣಿಜ್ಯ ಕ್ಷೇತ್ರಗಳೂ ನಗರದ ಆರ್ಥಿಕತೆಗೆ ಬಲ ತುಂಬುತ್ತಿವೆ. ವಿಭಿನ್ನ ಧರ್ಮ, ಭಾಷೆ ಮತ್ತು ಸಂಪ್ರದಾಯಗಳ ಜನರು ಇಲ್ಲಿ ಸಹಬಾಳ್ವೆಯಿಂದ ಜೀವನ ನಡೆಸುತ್ತಿದ್ದು, ಸಾಂಸ್ಕೃತಿಕ ವೈವಿಧ್ಯತೆ ನಗರದ ಸೌಹಾರ್ದತೆಯನ್ನು ಹೆಚ್ಚಿಸುತ್ತದೆ.

ಇಂತಹ ಮಹತ್ವದ ನಗರದಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿಯನ್ನು ಹೊತ್ತಿರುವವರು ಕಲಬುರಗಿ ನಗರ ಪೊಲೀಸ್ ಆಯುಕ್ತರಾದ ಡಾ. ಶರಣಪ್ಪ ಎಸ್.ಡಿ., ಐಪಿಎಸ್. ಅವರು ತಮ್ಮ ಕರ್ತವ್ಯಪರತೆ, ದಕ್ಷತೆ ಮತ್ತು ಕಠಿಣ ನಿರ್ಧಾರಗಳ ಮೂಲಕ ಸಾರ್ವಜನಿಕ ಭದ್ರತೆ ಮತ್ತು ಕಾನೂನು ಪಾಲನೆಗೆ ವಿಶೇಷ ಆದ್ಯತೆ ನೀಡುತ್ತಿದ್ದಾರೆ.

### ಸಾರ್ವಜನಿಕ ಸುರಕ್ಷತೆಗೆ ಆದ್ಯತೆ

ಡಾ. ಶರಣಪ್ಪ ಅವರ ನೇತೃತ್ವದಲ್ಲಿ ಪೊಲೀಸ್ ಇಲಾಖೆ ಹಲವಾರು ಮಹತ್ವದ ಕ್ರಮಗಳನ್ನು ಕೈಗೊಂಡಿದೆ. ಅಪ್ರಾಪ್ತ ವಯಸ್ಕರಿಂದ ಬೈಕ್ ಚಾಲನೆಗೆ ಕಟ್ಟುನಿಟ್ಟಿನ ನಿಷೇಧ ವಿಧಿಸಿ, ನಿಯಮ ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ. ರಸ್ತೆ ಅಪಘಾತಗಳನ್ನು ಕಡಿಮೆಗೊಳಿಸುವ ಉದ್ದೇಶದಿಂದ 2025ರಲ್ಲಿ ಜಾಗೃತಿ ಅಭಿಯಾನಗಳನ್ನು ಪ್ರಾರಂಭಿಸಲಾಗಿದ್ದು, ಇದರ ಪರಿಣಾಮವಾಗಿ ಅಪಘಾತಗಳಲ್ಲಿ ಗಣನೀಯ ಇಳಿಕೆ ಕಂಡುಬಂದಿದೆ.

ಅದರ ಜೊತೆಗೆ, ಡ್ರೋನ್ ತಂತ್ರಜ್ಞಾನವನ್ನು ಬಳಸಿಕೊಂಡು ಸಾರ್ವಜನಿಕ ಸ್ಥಳಗಳಲ್ಲಿ ಭದ್ರತೆಯನ್ನು ಹೆಚ್ಚಿಸುವ ಪ್ರಯತ್ನ ಮಾಡಲಾಗಿದೆ. ಅಗ್ನಿಶಾಮಕ ಕಾರ್ಯಾಚರಣೆಗಳಲ್ಲಿ ಮತ್ತು ಜನಸಂದಣಿ ಪ್ರದೇಶಗಳಲ್ಲಿ ಡ್ರೋನ್ ಬಳಕೆ ಮೂಲಕ ತ್ವರಿತ ಪ್ರತಿಕ್ರಿಯೆ ವ್ಯವಸ್ಥೆಯನ್ನು ಬಲಪಡಿಸಲಾಗಿದೆ.

### ಸಾಮಾಜಿಕ ಏಕತೆಗೆ ಒತ್ತು

“ಏಕತೆಗಾಗಿ ಓಟ” ಕಾರ್ಯಕ್ರಮದ ಮೂಲಕ ಸಮಾಜದಲ್ಲಿ ಸಹೋದರತ್ವ ಮತ್ತು ಏಕತೆಯ ಮನೋಭಾವವನ್ನು ಉತ್ತೇಜಿಸಲು ಶರಣಪ್ಪ ಅವರು ವಿಶೇಷ ಗಮನ ಹರಿಸಿದ್ದಾರೆ. ಈ ರೀತಿಯ ಕಾರ್ಯಕ್ರಮಗಳು ನಗರದಲ್ಲಿ ಶಾಂತಿಯ ವಾತಾವರಣ ನಿರ್ಮಾಣಕ್ಕೆ ಸಹಕಾರಿಯಾಗಿವೆ.

### ಅಪರಾಧ ನಿಯಂತ್ರಣದಲ್ಲಿ ಸಾಧನೆ

ಪೊಲೀಸ್ ಆಯುಕ್ತರ ಮಾರ್ಗದರ್ಶನದಲ್ಲಿ ಹಲವಾರು ಅಪರಾಧ ಪ್ರಕರಣಗಳನ್ನು ಯಶಸ್ವಿಯಾಗಿ ಬಗೆಹರಿಸಲಾಗಿದೆ. 9 ವರ್ಷಗಳ ಹಿಂದೆ ನಡೆದ ಬಿರಪ್ಪ ಪೂಜಾರಿ ಹತ್ಯೆ ಪ್ರಕರಣದ ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸ್ ತಂಡ ಯಶಸ್ವಿಯಾಗಿದೆ. ಇದರಿಂದ ನ್ಯಾಯ ವ್ಯವಸ್ಥೆಯ ಮೇಲೆ ಜನರಲ್ಲಿ ವಿಶ್ವಾಸ ಹೆಚ್ಚಾಗಿದೆ.

### ರೌಡಿಗಳ ವಿರುದ್ಧ ಕಠಿಣ ಕ್ರಮ

ನಗರದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ರೌಡಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗಿದೆ. ಕಳೆದ ಎರಡು ವರ್ಷಗಳಲ್ಲಿ ಸುಮಾರು 28 ರೌಡಿಗಳನ್ನು ಜಿಲ್ಲೆಯಿಂದ ಗಡಿಪಾರು ಮಾಡಲಾಗಿದೆ. ಸಮಾಜಕ್ಕೆ ಅಪಾಯಕಾರಿಯಾಗಿ ಬೆಳೆದಿದ್ದ ಪುಡಿ ರೌಡಿಗಳನ್ನು ನಿಯಂತ್ರಿಸಲು ಈ ಕ್ರಮ ಪರಿಣಾಮಕಾರಿ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇನ್ನೂ ಕೆಲವರನ್ನು ಗಡಿಪಾರು ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಸಮಾಜಘಾತಕ ಶಕ್ತಿಗಳ ವಿರುದ್ಧ ಪೊಲೀಸ್ ಇಲಾಖೆ ಹೋರಾಟ ಮುಂದುವರಿಸುತ್ತಿದೆ.

### ಪ್ರಶಸ್ತಿ ಮತ್ತು ಗೌರವ

ತಮ್ಮ ಸೇವಾ ಮನೋಭಾವ ಮತ್ತು ಕರ್ತವ್ಯಪರತೆಯಿಂದ ಡಾ. ಶರಣಪ್ಪ ಎಸ್.ಡಿ. ಅವರು ರಾಜ್ಯ ಮಟ್ಟದ ಡಿಜಿಪಿ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಇದು ಅವರ ಸೇವೆಯ ಗುರುತಾಗಿ ಪರಿಣಮಿಸಿದೆ.

ಒಟ್ಟಾರೆ, ಡಾ. ಶರಣಪ್ಪ ಎಸ್.ಡಿ. ಅವರ ನೇತೃತ್ವದಲ್ಲಿ ಕಲಬುರಗಿ ನಗರ ಪೊಲೀಸ್ ಇಲಾಖೆ ಶಕ್ತಿಶಾಲಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಕಾನೂನು ಪಾಲನೆ, ಸಾರ್ವಜನಿಕ ಭದ್ರತೆ, ತಂತ್ರಜ್ಞಾನ ಬಳಕೆ ಮತ್ತು ಸಾಮಾಜಿಕ ಏಕತೆಯನ್ನು ಉತ್ತೇಜಿಸುವಲ್ಲಿ ಮಹತ್ವದ ಪಾತ್ರವಹಿಸುತ್ತಿದೆ. ರೌಡಿಗಳಿಗೆ ಸಿಂಹಸ್ವಪ್ನವಾಗಿರುವ ಶರಣಪ್ಪ ಅವರು, ನಗರದ ಶಾಂತಿ ಮತ್ತು ಸುರಕ್ಷತೆಗೆ ದಿಟ್ಟ ಹೆಜ್ಜೆ ಇಟ್ಟಿದ್ದಾರೆ.

ಕಲಬುರಗಿ ನಗರದಲ್ಲಿ ಶಾಂತಿ, ಸುರಕ್ಷತೆ ಮತ್ತು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಪೊಲೀಸ್ ಇಲಾಖೆಯ ಈ ಕಾರ್ಯಾಚರಣೆಗಳು ಮುಂದುವರಿಯುವ ನಿರೀಕ್ಷೆಯಿದೆ.

(4ನೇ ಪುಟದಿಂದ)




ಒಳಗೊಂಡ ತಂಡವು ಆರೋಪಿತರಾದ 1) ಜಹೀರ ಅಬ್ಬಾಸ ಅಲಿ ತಂದೆ ಶೇಖುಬ ಅಲಿ ಸಾ॥ ಶಿವಾಜಿನಗರ ಪರ್ಲಿ ವೈಜನಾಥ ಜಿ॥ ಬೀಡ್ ರಾಜ್ಯ ಮಹಾರಾಷ್ಟ್ರ, 2) ಅಲಿ ರಜಾಕ್ ತಂದೆ ಶೇಖುಬ ಬೇಗ ಸಾ॥ ಶಿವಾಜಿನಗರ ಪರ್ಲಿ ವೈಜನಾಥ ಜಿ॥ ಬೀಡ್ ರಾಜ್ಯ ಮಹಾರಾಷ್ಟ್ರ, 3) ಲಾಲಾ ಸಮೀರಾ ಶೇಖ ತಂದೆ ಜಾಫರ್ ಸಾ॥ಇಂದಿರಾನಗರ ಅಂಬೆವಿಲಿ ಕಲ್ಯಾಣ ಜಿ॥ಥಾಣೆ ರಾಜ್ಯ ಮಹಾರಾಷ್ಟ್ರ, 4) ಖಾಸಿಂ ತಂದೆ ಜೋಜೋ ಜಾಫ್ರಿ ಸಾ॥ಅಮ್ಮನ ನಗರ ರುಸೊಲ್ಲಿ ಕರೊಂಡ ಭೋಪಾಲ ರಾಜ್ಯ ಮಧ್ಯ ಪ್ರದೇಶ, 5) ಅಲಿಮಿರ್ಜಾ ತಂದೆ ದರಬೇಶ ಸಾ॥ ಸಾ॥ ಶಿವಾಜಿನಗರ ಪರ್ಲಿ ವೈಜನಾಥ ಜಿ॥ ಬೀಡ್ ರಾಜ್ಯ ಮಹಾರಾಷ್ಟ್ರ, 6) ಜಾಪಾರ ಅಲಿ ಸೈಯದ ತಂದೆ ಆಸಿಫ್ ಅಲಿ ಸೈಯದ ಸಾ॥ ಪಟೇಲ ಕಾಲೋನಿ ಅಂಬೆವಿಲಿ ಕಲ್ಯಾಣ, ಜಿ॥ ಥಾಣೆ ರಾಜ್ಯ॥ ಮಹಾರಾಷ್ಟ್ರ, 7) ಜಾಫರ ತಂದೆ ಅಜೀಮ್ ಸೈಯದ್ ಸಾ॥ ಅಂಬೆವಿಲಿ ಕಲ್ಯಾಣ, ಜಿ॥ ಥಾಣೆ ರಾಜ್ಯ॥ ಮಹಾರಾಷ್ಟ್ರ ಇವರನ್ನು ವಶಕ್ಕೆ ಪಡೆದು ಕೃತ್ಯಕ್ಕೆ ಉಪಯೋಗಿಸಿದ ಟಾಟಾ ಹೆಕ್ಸಾನ ಕಾರ್ ಒಂದು ಟಿವಿಎಸ್ ಅಪಾಚಿ ಮೋಟಾರ್ ಸೈಕಲ್ ಮತ್ತು ಒಂದು ಹೊಂಡಾ ಹಾರ್ನೆಟ ಮೋಟಾರ್ ಸೈಕಲ್, ರಾಡು, ತಳವಾರ ಖಾರದ ಪುಡಿ ಕಪ್ಪು ಬಟ್ಟೆಗಳನ್ನು ಜಪ್ತಿ ಪಡಿಸಿಕೊಂಡು ಸದರಿ ಆರೋಪಿತರ ವಿರುದ್ಧ ಸಬ್ ಆರ್ಬನ್ ಠಾಣೆಯ ಗುನ್ನೇ ನಂ 21/2026 ಕಲಂ 310(4), 310(5) ಬಿಎನ್‌ಎಸ್ ಮತ್ತು 25(1) (ಎ) ಆರ್ಮ್ಸ್ ಆಕ್ಟ್ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದು ಇರುತ್ತದೆ.

ಸದರಿ ಆರೋಪಿತರಿಗೆ ಹೆಚ್ಚಿನ ವಿಚಾರಣೆ ಕುರಿತು ಪೊಲೀಸ್ ಕಸ್ಟಡಿಗೆ ತೆಗೆದುಕೊಂಡು ವಿಚಾರಣೆ ಮಾಡಿದಾಗ ಬಂಗಾರದ ಆಭರಣಗಳನ್ನು ದೋಚಿರುವುದಾಗಿ ತಪ್ಪು ಒಪ್ಪಿಕೊಂಡಿದ್ದು ಸದರಿ ಆರೋಪಿತರಿಂದ 90 ಗ್ರಾಂ ಬಂಗಾರದ ಆಭರಣಗಳು ಅಂ.ಕಿ. 15,30,000 ರೂ ನೆದ್ದವುಗಳನ್ನು ಮತ್ತು ಕೃತ್ಯಕ್ಕೆ ಉಪಯೋಗಿಸಿದ ಟಾಟಾ ಹೆಕ್ಸಾನ ಕಾರು ಅಂ.ಕಿ. 10,00,000 ರೂ, ಒಂದು ಟಿವಿಎಸ್ ಅಪಾಚಿ 160 ಸಿಸಿ ಮೋಟಾರ್ ಸೈಕಲ್ ಅಂ.ಕಿ. 1,00,000 ರೂ, ಹೋಂಡಾ ಹಾರ್ನೆಟ್ ಮೋಟಾರ್ ಸೈಕಲ್ ಅಂ.ಕಿ. 1,00,000 ರೂ ಒಟ್ಟು ಅಂದಾಜು 27,30,000 ರೂಪಾಯಿ ಮೌಲ್ಯದ ಸ್ವತ್ತುಗಳನ್ನು ಜಪ್ತಿ ಪಡಿಸಿಕೊಳ್ಳಲಾಗಿರುತ್ತದೆ.

ಆರೋಪಿ ಜಹೀರ್ ತಂದೆ ಶೇಖು ಅಲಿ ಈತನ ಮೇಲೆ ಉತ್ತರ ಪ್ರದೇಶ ರಾಜ್ಯದ ಮಂಡಿ ಜಿಲ್ಲಾ ಸಹನಾಪುರ ಪೊಲೀಸ್ ಠಾಣೆ ಗುನ್ನೇ ನಂ. 197/2023 ಕಲಂ 419, 420, 379 ಐಪಿಸಿ ನೆದ್ದರ ಪ್ರಕರಣ ದಾಖಲಾಗಿದ್ದು ಸದರಿಯವನ ಮಾಹಿತಿ ನೀಡಿದವರಿಗೆ 15, 000 ಬಹುಮಾನ ಘೋಷಿಸಿರುತ್ತಾರೆ.

ಸದರಿ ಆರೋಪಿತರಿಂದ ನಾಸಿಕ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಕೊಡುವಾದ ಮೋಟಾರ್ ಸೈಕಲ್ ಅನ್ನು ವಶಪಡಿಸಿಕೊಳ್ಳಲಾಗಿದೆ. ಸದರಿಯವರ ಮೇಲೆ ದೇಶದ ವಿವಿಧ ರಾಜ್ಯಗಳಾದ ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ, ಮಹಾರಾಷ್ಟ್ರ, ತೆಲಂಗಾಣ ಹಾಗೂ ಕರ್ನಾಟಕದ ವಿವಿಧ ಠಾಣೆಗಳಲ್ಲಿ ನಕಲಿ ಪೊಲೀಸ್ ಅಂತ ವಂಚನೆ, ಸುಲಿಗೆ ಹಾಗೂ ದರೋಡೆ ಮಾಡಿದ ಬಗ್ಗೆ ಪ್ರಕರಣಗಳನ್ನು ದಾಖಲಾಗಿರುತ್ತದೆ.

ಸದರಿ ಆರೋಪಿತರ ವಿರುದ್ಧ ದಸ್ತಗಿರಿ ಕ್ರಮ ಕೈಗೊಂಡು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿರುತ್ತದೆ.

ಸದರಿ ಕುಖ್ಯಾತ ದರೋಡೆ ಕೋರ ಇರಾನಿ ಗ್ಯಾಂಗ್ನ ಆರೋಪಿತರನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾದ ಅಧಿಕಾರಿ ಮತ್ತು ಸಿಬ್ಬಂದಿಯವರನ್ನು ಕಲಬುರಗಿ ನಗರ ಆಯುಕ್ತರಾದ ಡಾ. ಶರಣಪ್ಪ ಎಸ್‌ಡಿ ಅವರು ಪ್ರಶಂಶಿಸಿರುತ್ತಾರೆ.

# ಭಾಲ್ಕಿ ಮಾಹಿತಿ ನೀಡದ ಲಖಣಗಾಂವ ರೈತ ಸಂಪರ್ಕ ಕೇಂದ್ರ!

**ಯಾವುದೇ ಸರ್ಕಾರಿ ಇಲಾಖೆಯಿಂದ ಮಾಹಿತಿಯನ್ನು ಕೇಳುವ ಹಕ್ಕು ಇದೆ. 30 ದಿನಗಳ ಒಳಗೆ ಮಾಹಿತಿ ನೀಡುವ ಕಡ್ಡಾಯ. ಮಾಹಿತಿಯನ್ನು ನೀಡದಿದ್ದರೆ ಸಂಬಂಧಿಸಿದ ಅಧಿಕಾರಿಗಳ ಮೇಲೆ ದಂಡ ವಿಧಿಸುವ ವ್ಯವಸ್ಥೆ. ಬಡ ನಾಗರಿಕರಿಗೆ ಅರ್ಜಿ ಶುಲ್ಕದಲ್ಲಿ ಸಡಿಲಿಕೆ ಇದೆ. ಈ ಅಧಿನಿಯಮವು ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ಮಾಹಿತಿ ಆಯೋಗಗಳನ್ನು ಸ್ಥಾಪಿಸಿದೆ. ಕೇಂದ್ರ ಮಾಹಿತಿ ಆಯೋಗ ಮತ್ತು ರಾಜ್ಯ ಮಾಹಿತಿ ಆಯೋಗಗಳು ಈ ಕಾಯ್ದೆಯ ಅನುಷ್ಠಾನವನ್ನು ನೋಡಿಕೊಳ್ಳುತ್ತವೆ. ಮಾಹಿತಿ ಕೇಳಿದ ನಾಗರಿಕರಿಗೆ ಸಮಯಕ್ಕೆ ಸರಿಯಾಗಿ ಮಾಹಿತಿ ದೊರೆಯದಿದ್ದರೆ, ಅವರು ಈ ಆಯೋಗಗಳಿಗೆ ದೂರು ನೀಡಬಹುದು.**

ಮಾಹಿತಿ ಹಕ್ಕು ಅಧಿನಿಯಮ 2005 ಭಾರತದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸಲು ಜಾರಿಗೆ ಬಂದ ಮಹತ್ವದ ಕಾನೂನು. ಪ್ರಜಾಪ್ರಭುತ್ವದಲ್ಲಿ ನಾಗರಿಕರಿಗೆ ಸರ್ಕಾರದ ಕಾರ್ಯಗಳ ಬಗ್ಗೆ ತಿಳಿಯುವ ಹಕ್ಕು ಅತ್ಯಂತ ಮುಖ್ಯ. ಈ ಅಧಿನಿಯಮವು ನಾಗರಿಕರಿಗೆ ಸರ್ಕಾರದ ಇಲಾಖೆಗಳಲ್ಲಿ ಇರುವ ಮಾಹಿತಿಯನ್ನು ಪಡೆಯಲು ಕಾನೂನು ಬದ್ಧ ಹಕ್ಕನ್ನು ನೀಡುತ್ತದೆ.

ಈ ಅಧಿನಿಯಮವು 2005ರಲ್ಲಿ ಜಾರಿಯಾದುದು. ಇದರ ಮುಖ್ಯ ಉದ್ದೇಶ ಸರ್ಕಾರದ ಕಾರ್ಯಪದ್ಧತಿಯಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸುವುದು ಮತ್ತು ಭ್ರಷ್ಟಾಚಾರವನ್ನು ಕಡಿಮೆ ಮಾಡುವುದು. ಈ ಕಾಯ್ದೆಯ ಮೂಲಕ ಯಾವುದೇ ಭಾರತೀಯ ನಾಗರಿಕನು ಸರ್ಕಾರದ ಇಲಾಖೆಗೆ ಅರ್ಜಿ ಸಲ್ಲಿಸಿ ಮಾಹಿತಿ ಪಡೆಯಬಹುದು.

ಯಾವುದೇ ಸರ್ಕಾರಿ ಇಲಾಖೆಯಿಂದ ಮಾಹಿತಿಯನ್ನು ಕೇಳುವ ಹಕ್ಕು ಇದೆ. 30 ದಿನಗಳ ಒಳಗೆ ಮಾಹಿತಿ ನೀಡುವ ಕಡ್ಡಾಯ. ಮಾಹಿತಿಯನ್ನು ನೀಡದಿದ್ದರೆ ಸಂಬಂಧಿಸಿದ ಅಧಿಕಾರಿಗಳ ಮೇಲೆ ದಂಡ ವಿಧಿಸುವ ವ್ಯವಸ್ಥೆ. ಬಡ ನಾಗರಿಕರಿಗೆ ಅರ್ಜಿ ಶುಲ್ಕದಲ್ಲಿ ಸಡಿಲಿಕೆ ಇದೆ.

ಈ ಅಧಿನಿಯಮವು ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ಮಾಹಿತಿ ಆಯೋಗಗಳನ್ನು ಸ್ಥಾಪಿಸಿದೆ. ಕೇಂದ್ರ ಮಾಹಿತಿ ಆಯೋಗ ಮತ್ತು ರಾಜ್ಯ ಮಾಹಿತಿ ಆಯೋಗಗಳು ಈ ಕಾಯ್ದೆಯ ಅನುಷ್ಠಾನವನ್ನು ನೋಡಿಕೊಳ್ಳುತ್ತವೆ. ಮಾಹಿತಿ ಕೇಳಿದ ನಾಗರಿಕರಿಗೆ ಸಮಯಕ್ಕೆ ಸರಿಯಾಗಿ ಮಾಹಿತಿ ದೊರೆಯದಿದ್ದರೆ, ಅವರು ಈ ಆಯೋಗಗಳಿಗೆ ದೂರು ನೀಡಬಹುದು.

ಆದರೆ, ಕೆಲವು ಮಾಹಿತಿಗಳನ್ನು ಈ ಕಾಯ್ದೆಯಡಿ ನೀಡಲಾಗುವುದಿಲ್ಲ. ಉದಾಹರಣೆಗೆ, ರಾಷ್ಟ್ರದ ಭದ್ರತೆ, ರಹಸ್ಯ ಮಾಹಿತಿ, ಮತ್ತು ನ್ಯಾಯಾಲಯದ ವಿಚಾರಣೆಗೆ ಸಂಬಂಧಿಸಿದ ಕೆಲವು ವಿಷಯಗಳು ಹೊರತಾಗಿವೆ. ಇವುಗಳನ್ನು ಹೊರತುಪಡಿಸಿ ಬಹುತೇಕ ಎಲ್ಲಾ ಸರ್ಕಾರಿ ಮಾಹಿತಿಗಳನ್ನು ಪಡೆಯಬಹುದು.

ಮಾಹಿತಿ ಹಕ್ಕು ಅಧಿನಿಯಮವು ಜನಸಾಮಾನ್ಯರಿಗೆ ಶಕ್ತಿ ನೀಡಿದೆ. ಇದು ಸರ್ಕಾರವನ್ನು ಜನರಿಗೆ ಉತ್ತರದಾಯಕವಾಗಿಸಲು ಸಹಾಯ ಮಾಡುತ್ತದೆ. ಈ ಕಾಯ್ದೆಯ ಬಳಕೆ ಮೂಲಕ ಹಲವಾರು ಭ್ರಷ್ಟಾಚಾರ ಪ್ರಕರಣಗಳು ಬೆಳಕಿಗೆ ಬಂದಿವೆ.

ಮಾಹಿತಿ ಹಕ್ಕು ಅಧಿನಿಯಮ 2005 ಪ್ರಜಾಪ್ರಭುತ್ವದ ಬಲವರ್ಧನೆಗೆ ಮಹತ್ವದ ಸಾಧನವಾಗಿದೆ. ನಾಗರಿಕರು ಈ ಹಕ್ಕನ್ನು ಸರಿಯಾಗಿ ಬಳಸಿಕೊಂಡರೆ, ಉತ್ತಮ ಆಡಳಿತ ವ್ಯವಸ್ಥೆ ನಿರ್ಮಾಣವಾಗಬಹುದು. ಆದ್ದರಿಂದ, ಪ್ರತಿಯೊಬ್ಬರೂ ಈ ಅಧಿನಿಯಮದ ಬಗ್ಗೆ ತಿಳಿದುಕೊಂಡು, ಅವಶ್ಯಕತೆ ಇದ್ದಾಗ ಬಳಸಿಕೊಳ್ಳಬೇಕು.

## ಜಂಟಿ ಕೃಷಿ ನಿರ್ದೇಶಕರಿಗೆ ಬರೆದ ಪತ್ರ...

ದಿನಾಂಕ 3.12.2025ರಂದು ಜಂಟಿ ಕೃಷಿ ನಿರ್ದೇಶಕರು, ಕೃಷಿ ಕಾರ್ಯಾಲಯ ಬೀದರ್ ಜಿಲ್ಲಾ ಬೀದರ್ ಇವರಿಗೆ ನೀಲಕಂಠ ತಂದೆ ವಿಠಲರಾವ ಮೇತ್ರೆ ಅವರು ಪತ್ರ ಬರೆಯುತ್ತಾರೆ.

ಆ ಪತ್ರದ ಸಾರಾಂಶ ಹೀಗಿದೆ: ವಿಷಯ ನಾನು ಕೇಳಿದ ಮಾಹಿತಿ ನೀಡುವ ಬಗ್ಗೆ ಅರ್ಜಿ.

ಉಲ್ಲೇಖ:– ಸಹಾಯಕ ಕೃಷಿ ನಿರ್ದೇಶಕರು ಭಾಲ್ಕಿ ರವರಿಗೆ ಮಾಹಿತಿ ನೀಡುವಂತೆ ನಾನು ನೀಡಿದ ಅರ್ಜಿ ದಿನಾಂಕ 3.11.2025

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಾನು ನೀಲಕಂಠ ತಂದೆ ವಿಠಲರಾವ ಮೈತ್ರೆ ಮು॥ ಕೋಂಗಳಿ, ಬಾಲ್ಕಿ ತಾಲೂಕು, ಬೀದರ್ ಜಿಲ್ಲೆ ನಿವಾಸಿಯಾಗಿದ್ದು ನಾನು ದಿನಾಂಕ 3.11.2025 ರಂದು 2024–25 ಹಾಗೂ 2025–26 ಸಾಲಿನಲ್ಲಿ ರೈತ ಸಂಪರ್ಕ ಕೇಂದ್ರ ಲಖಣಗಾಂವ ನಲ್ಲಿ ಬರುವ ಎಲ್ಲಾ ಗ್ರಾಮಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಒಳಗೊಂಡ ರೈತರಿಗೆ ರಿಯಾಯಿತಿ ದರದಲ್ಲಿ (ಸೋಯಾ ಅವರೆ) ಬೀಜದ ದರ ಪಟ್ಟಿ ಬೀಜ ವಿತರಣೆ ಮಾಡಿದ ದಾಖಲಾತಿ ಪುಸ್ತಕ, ಆನ್ಲೈನ್ ನಲ್ಲಿ ಬೀಜ ವಿತರಣೆ ಮಾಡಿದ ಬಿಲ್ ಪ್ರತಿ, ಬೀಜ ವಿತರಣಾ ರಿಜಿಸ್ಟರ್ ಮತ್ತು ಬೀಜ ವಿತರಿಸಿದ ಅಧಿಕಾರಿಗಳ ವಿವರ ಕುರಿತು ಇಲಾಖೆ ಮಾರ್ಗಸೂಚಿ ಸೇರಿ ಪ್ರತಿಯೊಂದು ಜೆರಾಕ್ಸ್ ಮೇಲೆ ದೃಢೀಕರಣದೊಂದಿಗೆ ಮಾಹಿತಿ ಕೇಳಲಾಗಿತ್ತು. ಆದರೆ ಮಾಹಿತಿ ಕೇಳಿ 4 ತಿಂಗಳು ಗತಿಸಿದರು ಸಹ ಯಾವುದೇ ಮಾಹಿತಿ ನೀಡಿರುವುದಿಲ್ಲ.

ಆದ್ದರಿಂದ ನಾನು ಕೇಳಿದ ಮಾಹಿತಿಗಳನ್ನು ತಾವು ತಕ್ಷಣದಲ್ಲಿ ನನಗೆ ಒದಗಿಸಬೇಕೆಂದು ತಮ್ಮಲ್ಲಿ ಕಳಕಳಿಯ ವಿನಂತಿ.

### ಮಾಹಿತಿ ಕೇಳಿದ್ದು ಇದು.

ಬೀದರ್ ಜಿಲ್ಲೆ ಭಾಲ್ಕಿ ತಾಲೂಕಿನ ಲಖಣಗಾಂವದಲ್ಲಿನ ರೈತ ಸಂಪರ್ಕ ಕೇಂದ್ರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ರಿಯಾಯಿತಿ ದರದಲ್ಲಿ ನೀಡುವ ಬೀಜಗಳ (ಸೋಯಾ ಅವರೆ) ಗಳಲ್ಲಿ ಅವ್ಯವಹಾರ ಹಾಗೂ ಭ್ರಷ್ಟಾಚಾರ ಆಗಿರುವ ಬಗ್ಗೆ ಸಾರ್ವಜನಿಕವಾಗಿ ಆರೋಪಗಳು ಕೇಳಿಬಂದಾಗ ಅದರ ಬಗ್ಗೆ ಮಾಹಿತಿ ಪಡೆಯಲು ಭಾಲ್ಕಿ ತಾಲೂಕು ಮು॥ ಕೊಂಗಳಿ ಗ್ರಾಮದ ನೀಲಕಂಠ ತಂದೆ ವಿಠಲ ರಾವ ಮೇತ್ರೆ ಅವರು ಭಾಲ್ಕಿ ತಾಲೂಕು, ಲಖಣಗಾಂವ ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ ಅವರಿಗೆ ಮಾಹಿತಿ ಹಕ್ಕು ಕಾಯ್ದೆ ಅಡಿ ಅರ್ಜಿ ಸಲ್ಲಿಸಿದರು.

ಅರ್ಜಿಯಲ್ಲಿ 2024–25 ಹಾಗೂ 2025–26ನೇ ಸಾಲಿನಲ್ಲಿ ರೈತ ಸಂಪರ್ಕ ಕೇಂದ್ರ ಲಖಣಗಾಂವಕ್ಕೆ ಬರುವ ಎಲ್ಲಾ ಗ್ರಾಮಗಳ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತರಿಗೆ ರಿಯಾಯಿತಿ ದರದಲ್ಲಿ ನೀಡಿದ (ಸೋಯಾ ಅವರೆ) ಬೀಜದ ದರ ಪಟ್ಟಿ, ಬೀಜ ವಿತರಣೆ ಮಾಡಿದ ದಾಖಲಾತಿ ಪುಸ್ತಕ, ಆನ್ಲೈನ್ ನಲ್ಲಿ ಬೀಜ ವಿತರಣೆ ಮಾಡಿದ ಬಿಲ್ ಪ್ರತಿ, ಬೀಜ ವಿತರಣಾ ರಿಜಿಸ್ಟರ್ ಹಾಗೂ ಹಣ ಪಾವತಿಸಿದ (ರೈತರು) ಬಿಲ್ ಪ್ರತಿ ಇದೆಲ್ಲವನ್ನೂ ಜೆರಾಕ್ಸ್ ಮೇಲೆ ದೃಢೀಕರಣದೊಂದಿಗೆ ಮಾಹಿತಿ ನೀಡಬೇಕು ಎಂದು ಕೋರಿದರು.

ಆದರೆ ಇಲ್ಲಿನ ಸಹಾಯಕ ಕೃಷಿ ಅಧಿಕಾರಿ ಯಾವುದೇ ಮಾಹಿತಿ ಒದಗಿಸದೇ ತಾತ್ಸಾರ ಮಾಡಿದ. ಬಹುಶಃ ಇದರಲ್ಲಿ ಅಕ್ರಮ ಆಗಿರುವುದರಿಂದಲೇ ಮಾಹಿತಿ ನೀಡಲು ಆತ ಹಿಂದೇಟು ಹಾಕಿರುವಂತಿದೆ. ಮುಖ್ಯವಾಗಿ ಮಾಹಿತಿ ಸೋರಿಕೆಯಾದರೆ ತಮ್ಮ ಅಕ್ರಮಗಳು ಬಯಲಿಗೆ ಬರುತ್ತವೆ ಎಂದೇ ಆತ ಮಾಹಿತಿ ನೀಡಿಲ್ಲ.

### ಕೃಷಿ ನಿರ್ದೇಶಕರ ಬಳಿಯೂ ಮಾಹಿತಿ ಕೇಳಲಾಯಿತು ...

ಯಾವಾಗ ಲಖಣಗಾಂವ ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ ಅರ್ಜಿ ಸಲ್ಲಿಸಿ 2 ತಿಂಗಳಾದರೂ ಮಾಹಿತಿ ಒದಗಿಸಲಿಲ್ಲವೋ ಆಗ ಅರ್ಜಿದಾರ ನೀಲಕಂಠ ತಂದೆ ವಿಠಲರಾವ ಮೇತ್ರೆ ಅವರು ದಿನಾಂಕ: 3.11.2025ರಂದು ಬೀದರ್ ಜಿಲ್ಲೆ, ಭಾಲ್ಕಿ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರಿಗೆ ಮಾಹಿತಿ ಒದಗಿಸಿ ಕೊಡುವಂತೆ ಪತ್ರ ಬರೆಯುತ್ತಾರೆ.

ದಿನಾಂಕ: 21.08.2025 ರಂದು ಸಹಾಯಕ ಕೃಷಿ ಅಧಿಕಾರಿ/ಕೃಷಿ ಅಧಿಕಾರಿ ಇವರಿಗೆ 2024–25 ಹಾಗೂ 2025 26 ಸಾಲಿನಲ್ಲಿ ರೈತ ಸಂಪರ್ಕ ಕೇಂದ್ರ ಲಖಣಗಾಂವ ನಲ್ಲಿ ಬರುವ ಎಲ್ಲಾ ಗ್ರಾಮಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಒಳಗೊಂಡ ರೈತರಿಗೆ ರಿಯಾಯಿತಿ ದರದಲ್ಲಿ (ಸೋಯಾ ಅವರೆ) ಬೀಜದ ದರ ಪಟ್ಟಿ ಬೀಜ ವಿತರಣೆ ಮಾಡಿದ ದಾಖಲಾತಿ ಪುಸ್ತಕ, ಆನ್ಲೈನ್ ನಲ್ಲಿ ಬೀಜ ವಿತರಣೆ ಮಾಡಿದ ಬಿಲ್ ಪ್ರತಿ, ಬೀಜ ವಿತರಣಾ ರಿಜಿಸ್ಟರ್ ಮತ್ತು ಬೀಜ ವಿತರಿಸಿದ ಅಧಿಕಾರಿಗಳ ವಿವರ ಕುರಿತು ಇಲಾಖೆ ಮಾರ್ಗಸೂಚಿ ಸೇರಿ ಪ್ರತಿಯೊಂದು ಜೆರಾಕ್ಸ್ ಮೇಲೆ ದೃಢೀಕರಣದೊಂದಿಗೆ ಮಾಹಿತಿ ಒದಗಿಸಿಕೊಡಿ ಎಂದು ಕೇಳಲಾಗಿತ್ತು. ಆದರೆ ಅವರು ಮಾಹಿತಿ ಕೇಳಿ ಎರಡು ತಿಂಗಳು ಕಳೆದರೂ ಮಾಹಿತಿ ನೀಡದೆ ಮೀನಾಮೇಷ ಎಣಿಸುತ್ತಿದ್ದಾರೆ. ಆದ್ದರಿಂದ ನೀವೇ ಮಾಹಿತಿಯನ್ನು ಒದಗಿಸಬೇಕೆಂದು ಅದರಲ್ಲಿ ಮನವಿ ಮಾಡಿದ್ದರು.

### ಸಹಾಯಕ ಕೃಷಿ ನಿರ್ದೇಶಕರ ಪತ್ರಕ್ಕೂ ಡೋಂಟ್ ಕೇರ್!

ನೀಲಕಂಠ ಅವರು ತಮ್ಮ ಕಚೇರಿಗೆ ಬರೆದ ಪತ್ರವನ್ನು ಗಮನಿಸಿದ ಭಾಲ್ಕಿ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ತಾಂತ್ರಿಕ ಅಧಿಕಾರಿಯು ದಿನಾಂಕ: 03.11.2025 (ಅದೇ ದಿನ) ಲಖಣಗಾಂವ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಅವರಿಗೆ ಪತ್ರವನ್ನು ಬರೆಯುತ್ತಾರೆ. ನೀಲಕಂಠ ತಂದೆ ವಿಠಲರಾವ ಮೇತ್ರಿ ಮು॥ಕೊಂಗಳಿ, ತಾಲೂಕು ಬಾಲ್ಕಿ, ಜಿಲ್ಲೆ ಬೀದರ್ ರವರು ಮಾಹಿತಿ ಹಕ್ಕು ಅದಿನಿಯಮ 2005 ಅರ್ಜಿಯ ಮೂಲಕ 2024–25 ಮತ್ತು 2025–26 ಸಾಲಿನಲ್ಲಿ ರೈತ ಸಂಪರ್ಕ ಕೇಂದ್ರ ಲಖಣಗಾಂವ ವ್ಯಾಪ್ತಿಯ ಗ್ರಾಮಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ರಿಯಾಯಿತಿ ದರದಲ್ಲಿ ವಿತರಣೆ ಮಾಡಿದ ಬಿತ್ತನೆ ಬೀಜಗಳ ದರಪಟ್ಟಿ ಬೀಜ ವಿತರಣೆ ಮಾಡಿದ ದಾಖಲಾತಿ ಪುಸ್ತಕ, ಆನ್ಲೈನ್ ಬೀಜ ವಿತರಣೆ ಮಾಡಿದ ಬಿಲ್ ಪ್ರತಿ, ಬೀಜ ವಿತರಣಾ ರಿಜಿಸ್ಟರ್ ಮತ್ತು ಬೀಜ ವಿತರಿಸಿದ ಅಧಿಕಾರಿಗಳ ವಿವರ ಕುರಿತು ಮತ್ತು ಬೀಜ ವಿತರಣೆ ಕುರಿತು ಇಲಾಖೆ ಮಾರ್ಗಸೂಚಿ ಇತ್ಯಾದಿಗಳನ್ನು ದೃಢೀಕರಿಸಿ ನೀಡುವಂತೆ ದಿನಾಂಕ:21.8.2025 ರಂದು ಅಂಚೆ ಮೂಲಕ ನಿಮಗೆ ಅರ್ಜಿ ಸಲ್ಲಿಸಿರುತ್ತಾರೆ. ಆದರೆ ಕಾರಣಾಂತರಗಳಿಂದ ಮಾಹಿತಿ ನೀಡುವಲ್ಲಿ ನಿಮ್ಮಿಂದ ವಿಳಂಬವಾಗಿದೆ. ಅವರು ಕೇಳಿದ ಮಾಹಿತಿಗಳೆಲ್ಲವೂ ತಮ್ಮ ರೈತ ಸಂಪರ್ಕ ಕೇಂದ್ರದಲ್ಲಿ ಲಭ್ಯವಿರುತ್ತದೆ. ಹಾಗಾಗಿ ಅರ್ಜಿದಾರರು ಕೇಳಿರುವ ಮಾಹಿತಿಯನ್ನು ಯಾವುದೇ ಶುಲ್ಕ ಪಡೆಯದೆ ಉಚಿತವಾಗಿ ಅದರಲ್ಲೂ ಈ ಪತ್ರ ಸ್ವೀಕರಿಸಿದ 15 ದಿನಗಳೊಳಗೆ ನೀಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸುತ್ತಾ ಅರ್ಜಿಯನ್ನು ಮಾಹಿತಿ ಹಕ್ಕು ಅಧಿನಿಯಮ 2005 ನಿಯಮ 6/ 3 ಅಡಿಯಲ್ಲಿ ಲಖಣಗಾಂವ ರೈತ ಸಂಪರ್ಕ ಕೇಂದ್ರಕ್ಕೆ ವರ್ಗಾಯಿಸಿ ಪತ್ರ ಬರೆದಿದ್ದರು.

ವಿಶೇಷ ಎಂದರೆ ಅದರಲ್ಲಿ ಮಾಹಿತಿ ನೀಡುವಲ್ಲಿ ವಿಳಂಬಕ್ಕೆ ಆಸ್ಪದ ನೀಡಬಾರದೆಂದು ಸ್ಪಷ್ಟವಾಗಿ ಅವರು ತಿಳಿಸಿದ್ದರು.

ಜೊತೆಗೆ ಲಖಣಗಾಂವ ರೈತ ಸಂಪರ್ಕ ಕೇಂದ್ರಕ್ಕೆ ಬರೆದ ಪತ್ರದ ಪ್ರತಿಯನ್ನು ಉಪ ಕೃಷಿ ನಿರ್ದೇಶಕರು ಬಸವಕಲ್ಯಾಣ ಹಾಗೂ ನೀಲಕಂಠ ಅವರಿಗೆ ಕಳುಹಿಸಿದ್ದರು.

ಆದರೆ ಲಖಣಗಾಂವ ರೈತ ಸಂಪರ್ಕ ಕೇಂದ್ರದ ಮೊಂಡಾದ ಸಹಾಯಕ ಕೃಷಿ ಅಧಿಕಾರಿ ಅವರ ಪತ್ರಕ್ಕೂ ಬೆಲೆ ನೀಡದೆ ಮಾಹಿತಿಯನ್ನು ನೀಡದೆ ಹೋಗಿದ್ದಾರೆ.

(7ನೇ ಪುಟಕ್ಕೆ)

# ರೈಲು ಟಿಕೆಟ್ ರದ್ದತಿ ರೀಫಂಡ್‌ಗೆ ಹೊಸ ನಿಯಮ ಜಾರಿ

ರೈಲ್ವೆ ಇಲಾಖೆ ಹೊಸ ಮರುಪಾವತಿ ಸ್ಲ್ಯಾಬ್‌ಗಳನ್ನು ಪ್ರಕಟಿಸಿದ್ದು, ಹೊಸ ನಿಯಮ ಏಪ್ರಿಲ್ 1 ಮತ್ತು 15ರ ನಡುವೆ ಜಾರಿಗೆ ಬರಲಿದೆ. ರೈಲು ನಿರ್ಗಮಿಸುವ 8 ಗಂಟೆ ಮೊದಲು ಟಿಕೆಟ್ ರದ್ದುಗೊಳಿಸಿದರೆ ಮಾತ್ರ ಹಣ ರಿಫಂಡ್ ಆಗುತ್ತದೆ. ರೈಲು ಹೊರಡಲು ಕೊನೆಯ 8 ಗಂಟೆಯ ನಂತರ ಟಿಕೆಟ್ ರದ್ದು ಮಾಡಿದರೆ ಯಾವುದೇ ರಿಫಂಡ್ ಇರುವುದಿಲ್ಲ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.


ರೈಲ್ವೆ ಇಲಾಖೆ ಹೊಸ ಮರುಪಾವತಿ ಸ್ಲ್ಯಾಬ್‌ಗಳನ್ನು ಪ್ರಕಟಿಸಿದ್ದು, ಈ ಹೊಸ ನಿಯಮ ಈ ವರ್ಷ ಏಪ್ರಿಲ್ 1 ಮತ್ತು 15ರ ನಡುವೆ ಜಾರಿಗೆ ಬರಲಿದೆ. ಪ್ರಸ್ತುತ ಈ ಸ್ಲ್ಯಾಬ್ 4 ಗಂಟೆಗೆ ಅಂದರೆ ರೈಲು ಹೊರಡುವ ನಾಲ್ಕು ಗಂಟೆಗಳ ಮೊದಲು ಟಿಕೆಟ್ ರದ್ದುಗೊಳಿಸಿದರೆ ಮಾತ್ರ ರಿಫಂಡ್ ಅವಕಾಶ ಇತ್ತು.

ಇತರ ಮರುಪಾವತಿ ಸ್ಲ್ಯಾಬ್‌ಗಳ ಪರಿಷ್ಕರಣೆ: 24ರಿಂದ 8 ಗಂಟೆಗಳ ನಡುವೆ ರದ್ದುಗೊಳಿಸಿದರೆ, ಟಿಕೆಟ್ ವೆಚ್ಚದಿಂದ ಶೇ.50ರಷ್ಟು ಕಡಿತಗೊಳಿಸಲಾಗುತ್ತದೆ. ಇದು ಪ್ರಸ್ತುತ 12ರಿಂದ ನಾಲ್ಕು ಗಂಟೆಗಳಿಗಿದೆ.

ಅದೇ ರೀತಿ, ನಿರ್ಗಮನಕ್ಕೆ 72ರಿಂದ 24 ಗಂಟೆಗಳ ಮೊದಲು ಟಿಕೆಟ್ ರದ್ದುಗೊಳಿಸಿದರೆ ರೈಲ್ವೆ ಟಿಕೆಟ್ ವೆಚ್ಚದ ಶೇ.25ರಷ್ಟು ಕಡಿತಗೊಳಿಸಲಾಗುತ್ತದೆ. ರೈಲು ಹೊರಡುವ 72 ಗಂಟೆಗಳಿಗಿಂತ ಮೊದಲು ಟಿಕೆಟ್ ಮಾಡಿದರೆ ಪ್ರತಿ ಪ್ರಯಾಣಿಕರಿಗೆ ಸ್ಥಿರ ರದ್ದತಿ ಶುಲ್ಕ ಹೊರತುಪಡಿಸಿ ಪೂರ್ಣ ಮರುಪಾವತಿಯನ್ನು ನೀಡಲಾಗುತ್ತದೆ.

ಅಸ್ತಿತ್ವದಲ್ಲಿರುವ ನೀತಿಯಡಿಯಲ್ಲಿ, 48 ರಿಂದ 12 ಗಂಟೆಗಳ ನಡುವೆ ಮಾಡಿದ ರದ್ದತಿಗೆ ಟಿಕೆಟ್ ವೆಚ್ಚದ ಶೇ.25ರಷ್ಟು ಕಡಿತಗೊಳಿಸಲಾಗುತ್ತದೆ. ಆದರೆ 48 ಗಂಟೆಗಳಿಗಿಂತ ಮುಂಚಿತವಾಗಿ ಮಾಡಿದ ರದ್ದತಿಗೆ ಪೂರ್ಣ ಮರುಪಾವತಿ ನೀಡಲಾಗುತ್ತಿದೆ. ಕಾಳಸಂತೆಯಲ್ಲಿ ಹಾಗೂ ಏಜೆಂಟ್‌ಗಳಿ ಂದ ಕೊನೆಯ ಕ್ಷಣದ ಟಿಕೆಟ್‌ಗಳ ಮಾರಾಟವನ್ನು ತಡೆಯಲು ಮರುಪಾ ವತಿ ನಿಯಮವನ್ನು ಮಾರ್ಪಡಿಸಲಾಗುತ್ತಿದೆ ಎಂದು ವೈಷ್ಣವ್ ಹೇಳಿದರು.

ಹೊಸ ಮರುಪಾವತಿ ನಿಯಮವು ಈ ವರ್ಷದ ಜನವರಿಯ ನಂತರ ಪ್ರಾರಂಭಿಸಲಾದ ವಂದೇ ಭಾರತ್ ಸ್ಲೀಪರ್ ಮತ್ತು ಅಮೃತ್ ಭಾರತ್ II ರೈಲುಗಳಲ್ಲಿ ಈಗಾಗಲೇ ಜಾರಿಯಲ್ಲಿದೆ. ರೈಲ್ವೆ ಪ್ರಯಾಣಿಕರ (ಟಿಕೆಟ್ ರದ್ದತಿ ಮತ್ತು ದರ ಮರುಪಾವತಿ) ನಿಯಮಗಳು, 2015 ಅನ್ನು ತಿದ್ದುಪಡಿ ಮಾಡಿದ ನಂತರ 2026ರ ಜನವರಿ 16ರಂದು ಹೊರಡಿಸಲಾದ ಅಧಿಸೂಚನೆಯ ಮೂಲಕ ಸಚಿವಾಲಯ ಇದನ್ನು ಮೊದಲು ಘೋಷಿಸಿತು ಎಂದು ಮಾಹಿತಿ ನೀಡಿದರು.




ಕೌಂಟರ್‌ನಲ್ಲಿ ಟಿಕೆಟ್‌ಗಳನ್ನು ಖರೀದಿಸಿದ ಪ್ರಯಾಣಿಕರಿಗೆ ನಿರ್ಗಮನಕ್ಕೆ 30 ನಿಮಿಷಗಳ ಮೊದಲು ಪ್ರಯಾಣ ವರ್ಗವನ್ನು ಅಪ್‌ಗ್ರೇಡ್ ಮಾಡಲು ಅನುಮತಿಸಲಾಗುವುದು ಎಂದು ವೈಷ್ಣವ್ ಹೇಳಿದರು. ಇದಕ್ಕೂ ಮೊದಲು, ಪ್ರಯಾಣಿಕರು ರೈಲಿನ ಮೊದಲ ಚಾರ್ಟ್‌ಗೆ ಮೊದಲು ಮಾತ್ರ ಪ್ರಯಾಣ ವರ್ಗವನ್ನು ಅಪ್‌ಗ್ರೇಡ್ ಮಾಡಬಹುದಿತ್ತು.

"ಮೊದಲ ಚಾರ್ಟ್ ರೈಲು ಹೊರಡುವ ಕನಿಷ್ಠ ಎಂಟು ಗಂಟೆಗಳ ಮೊದಲು ಮತ್ತು ಎರಡನೇ ಚಾರ್ಟ್ 15 ರಿಂದ 30 ನಿಮಿಷಗಳ ನಡುವೆ ಬಿಡುಗಡೆ ಮಾಡಲಾಗುತ್ತದೆ. ಪ್ರಯಾಣಿಕರು ಈಗ ರೈಲು ಹೊರಡುವ 30 ನಿಮಿಷಗಳ ಮೊದಲು ತಮ್ಮ ಪ್ರಯಾಣ ವರ್ಗವನ್ನು ಅಪ್‌ಗ್ರೇಡ್ ಮಾಡಬಹುದು. ಈ ಸೌಲಭ್ಯವು ಕೌಂಟರ್ ಟಿಕೆಟ್ ಹೊಂದಿರುವವರಿಗೆ ಮಾತ್ರ ಲಭ್ಯ. ಆನ್‌ಲೈನ್ ಟಿಕೆಟ್ ಖರೀದಿದಾರರಿಗೆ ವರ್ಗ ಅಪ್‌ಗ್ರೇಡ್ ಮಾಡಲು ಅವಕಾಶವಿಲ್ಲ" ಎಂದು ರೈಲ್ವೆ ಅಧಿಕಾರಿಯೊಬ್ಬರು ಹೇಳಿದರು. ಪ್ರಯಾಣಿಕರಿಗೆ ರೈಲು ನಿಗದಿತ ನಿರ್ಗಮನಕ್ಕೆ 30 ನಿಮಿಷಗಳ ಮೊದಲು ತಮ್ಮ ಬೋರ್ಡಿಂಗ್ ಪಾಯಿಂಟ್ ಅನ್ನು ಬದಲಾಯಿಸುವ ಸ್ವಾತಂತ್ರ್ಯವನ್ನು ನೀಡಲಾಗುವುದು ಎಂದು ವೈಷ್ಣವ್ ಹೇಳಿದರು. ಪ್ರಸ್ತುತ, ಮೊದಲ ಚಾರ್ಟ್ ಸಿದ್ಧಪಡಿಸುವ ಮೊದಲು ಮಾತ್ರ ಬೋರ್ಡಿಂಗ್ ಪಾಯಿಂಟ್ ಬದಲಾವಣೆಗೆ ಅವಕಾಶವಿದೆ.

ಒಬ್ಬ ಪ್ರಯಾಣಿಕ ನಿಲ್ದಾಣ A ಮತ್ತು Z ನಡುವೆ ದೃಢೀಕೃತ ಟಿಕೆಟ್ ಹೊಂದಿದ್ದರೆ, ತಮ್ಮ ಯೋಜನೆಯಲ್ಲಿನ ಹಠಾತ್ ಬದಲಾ ವಣೆಯಿಂದಾಗಿ, ಅವನು ನಿಲ್ದಾಣ Aಯಿಂದ Bಗೆ ಬೋರ್ಡಿಂಗ್ ಪಾಯಿಂಟ್ ಬದಲಾಯಿಸಲು ಬಯಸಿದರೆ, ಹೊಸ ಸುಧಾರಣೆ ಯಲ್ಲಿ, ಪ್ರಯಾಣಿಕ ರೈಲು ಮೂಲ ನಿಲ್ದಾಣ ಯಿಂದ ಹೊರಡುವ 30 ನಿಮಿಷಗಳ ಮೊದಲು ತನ್ನ ಬೋರ್ಡಿಂಗ್ ಪಾಯಿಂಟ್ :ಗೆ ಡಿಜಿಟಲ್ ಆಗಿ ನವೀಕರಿಸಲು ಸಾಧ್ಯವಾವಿದೆ ಎಂದು ವೈಷ್ಣವ್ ಹೇಳಿದರು. ಬೋರ್ಡಿಂಗ್ ಪಾಯಿಂಟ್ ಬದಲಾವಣೆಯು ಟಿಕೆಟ್ ವೆಚ್ಚದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಏಜೆಂಟ್‌ಗಳು ಮತ್ತು ದಲ್ಲಾಳಿಗಳಿಂದ ಟಿಕೆಟ್‌ಗಳನ್ನು ಸಂಗ್ರಹಿಸುವುದನ್ನು ತಡೆಯಲು, ತತ್ಕಾಲ್ ಬುಕಿಂಗ್ ವ್ಯವಸ್ಥೆ, ಆಧಾರ್ ಆಧಾರಿತ OTP, ಮೊದಲ 30 ನಿಮಿಷಗಳ ಕಾಲ ಏಜೆಂಟ್‌ಗಳ ಮೇಲೆ ಬುಕಿಂಗ್ ನಿರ್ಬಂಧ ಮತ್ತು ಅಸಲಿ ಬಳಕೆದಾರರನ್ನು ಫಿಲ್ಟರ್ ಮಾಡಲು ಆ್ಯಂಟಿ–ಬಾಟ್ ಪರಿಹಾರದ ನಿಯೋಜನೆ ಸೇರಿದಂತೆ ವಿವಿಧ ಬದಲಾವಣೆಗಳನ್ನು ಮಾಡಲಾಗಿದೆ. ಇಲ್ಲಿಯವರೆಗೆ 3 ಕೋಟಿ ಅನುಮಾನಾಸ್ಪದ ಬಳಕೆದಾರ ಐಡಿಗಳನ್ನು ನಿಷ್ಕ್ರಿಯಗೊಳಿಸಲಾಗಿದೆ ಎಂದು ವೈಷ್ಣವ್ ಹೇಳಿದರು. ಉಪ್ಪು ಮತ್ತು ಆಟೋ ಸಾಗಣೆಯಲ್ಲಿ ಸುಧಾರಣೆಗಳನ್ನು ಘೋಷಿಸಿದ್ದು, ತುಕ್ಕು ಹಿಡಿಯದ ವೈಶಿಷ್ಟ್ಯವಿರುವ ವಿಶೇಷ ಕಂಟೇನರ್‌ಗಳು ಮತ್ತು ಆಟೋ ಸಾಗಣೆದಾರರಿಗೆ ವಿಶೇಷ ವ್ಯಾಗನ್‌ಗಳನ್ನು ಪರಿಚಯಿಸಿದೆ.

# ಭಾಲ್ಕಿ ಸಹಾಯಕ ಕೃಷಿ ನಿರ್ದೇಶಕರು ಲಖಣಗಾಂವ ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿಗೆ ಬರೆದ ಪತ್ರ

ಬೀದರ್ ಜಿಲ್ಲೆ ಭಾಲ್ಕಿ ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಿಂದ ದಿನಾಂಕ: 03.11.2025 ರಂದು ಲಖಣಗಾಂವ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಅವರಿಗೆ ಪತ್ರವನ್ನು ಬರೆಯುತ್ತಾರೆ.

ಪತ್ರದ ಸಾರಾಂಶ ಹೀಗಿದೆ: ವಿಷಯ ಮಾಹಿತಿ ಹಕ್ಕು ಅಧಿನಿಯಮ 2005 ಅಡಿಯಲ್ಲಿ ಮಾಹಿತಿ ಒದಗಿಸುವ ಕುರಿತು.

ಉಲ್ಲೇಖ ನೀಲಕಂಠ ತಂದೆ ವಿಠಲರಾವ ಮೇತ್ರಿ ಮು॥ಕೊಂಗಳಿ ತಾಲೂಕು ಬಾಲ್ಕಿ ಜಿಲ್ಲೆ ಬೀದರ್ ರವರ ಅರ್ಜಿ ದಿನಾಂಕ 3.11.2025

ಈ ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳನ್ನುಯ ನೀಲಕಂಠ ತಂದೆ ವಿಠಲರಾವ ಮೇತ್ರಿ ಮು॥ಕೊಂಗಳಿ ತಾಲೂಕು ಬಾಲ್ಕಿ ಜಿಲ್ಲೆ ಬೀದರ್ ರವರು ಉಲ್ಲೇಖ ಒಂದರ ಮಾಹಿತಿ ಹಕ್ಕು ಅದಿನಿಯಮ 2005 ಅರ್ಜಿಯ ಮೂಲಕ 2024 25 ಮತ್ತು 2025 26 ಸಾಲಿನಲ್ಲಿ ರೈತ ಸಂಪರ್ಕ ಕೇಂದ್ರ ಲಖಣಗಾಂವ ವ್ಯಾಪ್ತಿಯ ಗ್ರಾಮಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ರಿಯಾಯಿತಿ ದರದಲ್ಲಿ ವಿತರಣೆ ಮಾಡಿದ ಬಿತ್ತನೆ ಬೀಜಗಳ ದರಪಟ್ಟಿ ಬೀಜ ವಿತರಣೆ ಮಾಡಿದ ದಾಖಲಾತಿ ಪುಸ್ತಕ, ಆನ್ಲೈನ್ ಬಿಜಾ ವಿತರಣೆ ಮಾಡಿದ ಬಿಲ್ ಪ್ರತಿ, ಬೀಜ ವಿತರಣಾ ರಿಜಿಸ್ಟರ್ ಮತ್ತು ಬೀಜ ವಿತರಿಸಿದ ಅಧಿಕಾರಿಗಳ ವಿವರ ಕುರಿತು ಮತ್ತು ಬೀಜ ವಿತರಣೆ ಕುರಿತು ಇಲಾಖೆ ಮಾರ್ಗಸೂಚಿ ಇತ್ಯಾದಿಗಳನ್ನು ದೃಢೀಕರಿಸಿ ನೀಡುವಂತೆ ಕೋರಿರುತ್ತಾರೆ. (21.8.2025 ರಂದು ಅಂಚೆ ಮೂಲಕ ಅರ್ಜಿ ಸಲ್ಲಿಸಿರುತ್ತಾರೆ. ಆದರೆ ಕಾರಣಾಂತರಗಳಿಂದ ಮಾಹಿತಿ ನೀಡುವಲ್ಲಿ ತಮ್ಮಿಂದ ವಿಳಂಬವಾಗಿದೆ) ಅವರು ಕೇಳಿದ ಮಾಹಿತಿಗಳೆಲ್ಲವೂ ತಮ್ಮ ರೈತ ಸಂಪರ್ಕ ಕೇಂದ್ರದಲ್ಲಿ ಲಭ್ಯವಿರುತ್ತದೆ. ಹಾಗಾಗಿ ಉಲ್ಲೇಖಿತ ಅರ್ಜಿದಾರರು ಕೇಳಿರುವ ಮಾಹಿತಿಯನ್ನು ಯಾವುದೇ ಶುಲ್ಕ ಪಡೆಯದೆ ಉಚಿತವಾಗಿ (ಈ ಪತ್ರ ಸ್ವೀಕರಿಸಿದ 15 ದಿನಗಳೊಳಗೆ) ನೀಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸುತ್ತಾ ಉಲ್ಲೇಖಿತ ಅರ್ಜಿಯನ್ನು ಮಾಹಿತಿ ಹಕ್ಕು ಅಧಿನಿಯಮ 2005 ನಿಯಮ 6/ 3 ಅಡಿಯಲ್ಲಿ ತಮಗೆ ವರ್ಗಾಯಿಸಿದೆ.

(ಮಾಹಿತಿ ನೀಡುವಲ್ಲಿ ವಿಳಂಬಕ್ಕೆ ಆಸ್ಪದ ನೀಡಬಾರದೆಂದು ತಿಳಿಯುವುದು.)

ಪ್ರತಿಯನ್ನು ಉಪ ಕೃಷಿ ನಿರ್ದೇಶಕರು ಬಸವಕಲ್ಯಾಣ ಹಾಗೂ ನೀಲಕಂಠ ಅವರಿಗೆ ಕಳುಹಿಸಿದೆ ಎಂದು ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ತಾಂತ್ರಿಕ ಅಧಿಕಾರಿ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಬಾಲ್ಕಿ ಅವರು ಪತ್ರದಲ್ಲಿ ಸೂಚಿಸಿದ್ದಾರೆ.

(6ನೇ ಪುಟದಿಂದ)

**ಜಂಟಿ ಕೃಷಿ ನಿರ್ದೇಶಕರಿಗೆ ಪತ್ರ!**

ಲಖಣಗಾಂವ ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ ನೀಲಕಂಠ ತಂದೆ ವಿಠಲರಾವ ಮೇತ್ರಿ ಅವರು ಮಾಹಿತಿ ಹಕ್ಕಿನಡಿ ಕೇಳಿದ ಮಾಹಿತಿಯನ್ನು ಯಾವಾಗ ನೀಡಲು ಮುಂದಾಗಲಿಲ್ಲವೋ ಹಾಗೂ ಸಹಾಯಕ ಕೃಷಿ ನಿರ್ದೇಶಕರ ಪತ್ರಕ್ಕೂ ಬೆಲೆ ನೀಡದೇ ಹೋದರೋ ಆಗ ಅವರು ಅನಿವಾರ್ಯವಾಗಿ ಬೀದರ್ ಜಿಲ್ಲಾ, ಕೃಷಿ ಕಾರ್ಯಾಲಯದ ಜಂಟಿ ಕೃಷಿ ನಿರ್ದೇಶಕರಿಗೆ ದಿನಾಂಕ:3.12.2025ರಂದು ಪತ್ರ ಬರೆಯುತ್ತಾರೆ.

ಸಹಾಯಕ ಕೃಷಿ ನಿರ್ದೇಶಕರು ಭಾಲ್ಕಿ ರವರಿಗೆ ಮಾಹಿತಿ ನೀಡುವಂತೆ ದಿನಾಂಕ: 3.11.2025 ರಂದು ಕೋರಲಾಗಿತ್ತು.

ಆದರೆ ಮಾಹಿತಿ ಕೇಳಿ 4 ತಿಂಗಳು ಗತಿಸಿದರು ಸಹ ಯಾವುದೇ ಮಾಹಿತಿ ನೀಡಿರುವುದಿಲ್ಲ.

ಆದ್ದರಿಂದ ನಾನು ಕೇಳಿದ ಮಾಹಿತಿಗಳನ್ನು ತಾವು ತಕ್ಷಣದಲ್ಲಿ ನನಗೆ ಒದಗಿಸಬೇಕೆಂದು ತಮ್ಮಲ್ಲಿ ಕಳಕಳಿಯ ವಿನಂತಿ ಎಂದು ಪತ್ರವನ್ನು ಬರೆದಿದ್ದಾರೆ. ಆದರೆ ಬೀದರ್ ಜಿಲ್ಲೆ ಜಂಟಿ ಕೃಷಿ ನಿರ್ದೇಶಕರು ಇದಕ್ಕೆ ಯಾವುದೇ ರೀತಿಯ ಸ್ಪಂದನೆ ಮಾಡಿಲ್ಲ. ಇದರಿಂದ ಕೇಳಿದ ಮಾಹಿತಿ ಸಿಗದೇ ಅನ್ಯಾಯವಾಗಿದೆ. ಜೊತೆಗೆ ಬಾರೀ ಅವ್ಯವಹಾರ ಆಗಿರುವುದು ಮೈಟಿ ನೀಡದೆ ಇರುವುದರಿಂದಲೇ ತಿಳಿಯುತ್ತದೆ.

# ಭಾಲಿ ಧನ್ನೂರು(ಹೆಚ್) ಮಾದರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಂತೋಷಕುಮಾರ್ ಪಾಟೀಲ

**ಧನ್ನೂರು (ಹೆಚ್) ಗ್ರಾಮ ಪಂಚಾಯಿತಿ ಅಭಿವೃದ್ಧಿಯಲ್ಲಿ ಸಾಗಿ, ಮಾದರಿ ಪಂಚಾಯಿತಿ ಆಗಲು ಕಾರಣ ಇಲ್ಲಿನ ಅಭಿವೃದ್ಧಿ ಅಧಿಕಾರಿ ಸಂತೋಷಕುಮಾರ್ ಪಾಟೀಲ ಎಂಬ ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿ. ಒಬ್ಬ ಅಧಿಕಾರಿ ದಕ್ಷರು, ಕ್ರಿಯಾಶೀಲರು ಉತ್ಸಾಹಿಗಳು ಎಲ್ಲಕ್ಕಿಂತ ಹೆಚ್ಚಾಗಿ ಪಾರದರ್ಶಕ ಆಡಳಿತಕ್ಕೆ ಒತ್ತುಕೊಟ್ಟವರು ಆದರೆ ಅವರಿಗೆ ಸರ್ಕಾರ ಹೆಚ್ಚಿನ ಜವಾಬ್ದಾರಿಗಳನ್ನು ವಹಿಸುತ್ತದೆ. ಅದರಂತೆ ಪಿಡಿಓ ಸಂತೋಷಕುಮಾರ್ ಪಾಟೀಲ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರ ಉತ್ತಮ ಕಾರ್ಯ ನಿರ್ವಹಣೆಯನ್ನು ಕಂಡು ಜನ ಮೆಚ್ಚುಗೆ ಸೂಚಿಸಿದ್ದಾರೆ. ಸಂತೋಷಕುಮಾರ್ ಪಾಟೀಲ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಆಗಿ ತಮ್ಮ ಜವಾಬ್ದಾರಿ ಅರಿತುಕೊಂಡು ಕೆಲಸ ಮಾಡುವ ಮೂಲಕ ಗ್ರಾಮೀಣ ಭಾಗದ ಮೂಲಭೂತ ಸಮಸ್ಯೆಗಳ ನಿವಾರಣೆ ಮಾಡುವ ಜೊತೆಗೆ ಅಭಿವೃದ್ಧಿಗೆ ಹೊಸ ಭಾಷ್ಯ ಬರೆದಿದ್ದಾರೆ.**



ಬೀದರ್ ಜಿಲ್ಲೆ, ಭಾಲ್ಕಿ ಹಾಗೂ ಬೀದರ್ ತಾಲೂಕಿನ ಗ್ರಾಮೀಣ ಅಭಿವೃದ್ಧಿ ಕ್ಷೇತ್ರದಲ್ಲಿ ತಮ್ಮ ಸಮರ್ಪಿತ ಸೇವೆಯಿಂದ




ಗಮನ ಸೆಳೆದಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಓ) ಸಂತೋಷಕುಮಾರ್ ವಿಜಯಕುಮಾರ್ ಪಾಟೀಲ. ಅವರು ಸಾರ್ವಜನಿಕ ಸೇವೆಯಲ್ಲಿ ಆದರ್ಶ ವ್ಯಕ್ತಿತ್ವವಾಗಿ ಹೊರಹೊಮ್ಮಿದ್ದಾರೆ.

1 ಜೂನ್ 1973 ರಂದು ತಾಯಿ ಸರಸ್ವತಿ ಹಾಗೂ ತಂದೆ ವಿಜಯಕುಮಾರ್ ದಂಪತಿಗೆ ಮನ್ನಳ್ಳಿ ಗ್ರಾಮದಲ್ಲಿ ಜನಿಸಿದ ಸಂತೋಷಕುಮಾರ್ ಅವರು ತಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಮನ್ನಳ್ಳಿ ಗ್ರಾಮದ ಸರಕಾರಿ ಶಾಲೆಗಳಲ್ಲಿ ಪೂರ್ಣಗೊಳಿಸಿದರು. ನಂತರ ಬೀದರ್‌ನ ಇಂಡಿಪೆಂಡೆಂಟ್ ಕಾಲೇಜಿನಲ್ಲಿ ಪಿಯುಸಿ ಹಾಗೂ ಕರ್ನಾಟಕ ಕಾಲೇಜಿನಲ್ಲಿ ಪದವಿ ವ್ಯಾಸಂಗ ಮಾಡುತ್ತಿರುವಾಗಲೇ ಸರ್ಕಾರಿ ಸೇವೆಗೆ ಪ್ರವೇಶಿಸಿದರು.

16 ಆಗಸ್ಟ್ 1993 ರಂದು ಬೀದರ್ ತಾಲೂಕಿನ ಚಿಟ್ಟಾ ಮಂಡಳ ಪಂಚಾಯತದಲ್ಲಿ ತಮ್ಮ ಸೇವಾ ಜೀವನ ಆರಂಭಿಸಿದ ಅವರು, 1997ರಲ್ಲಿ ನಾಗೋರಾ ಗ್ರಾಮ ಪಂಚಾಯತದಲ್ಲಿ ಕರ ವಸೂಲಿಗಾರರಾಗಿ ಕಾರ್ಯನಿರ್ವಹಿಸಿದರು. ತಮ್ಮ ಪರಿಶ್ರಮ ಮತ್ತು ನಿಷ್ಠೆಯಿಂದ 27 ಜುಲೈ 2012ರಂದು ಮನ್ನಳ್ಳಿ ಗ್ರಾಮ ಪಂಚಾಯತಕ್ಕೆ ಲೆಕ್ಕ ಸಹಾಯಕರಾಗಿ ಬಡ್ತಿ ಪಡೆದರು.

ವೈಯಕ್ತಿಕ ಜೀವನದಲ್ಲಿ, 1 ಜೂನ್ 2001ರಂದು ಭಾಲ್ಕಿ ತಾಲೂಕಿನ ಕುಂಟೆಸಿರ್ಸಿ ಗ್ರಾಮದ ಕಾವೇರಿ ಅವರೊಂದಿಗೆ ವೈವಾಹಿಕ ಜೀವನಕ್ಕೆ ಕಾಲಿಟ್ಟರು.

ಸೇವಾ ಕ್ಷೇತ್ರದಲ್ಲಿ ಮುಂದುವರೆದ ಅವರು, 28 ಮಾರ್ಚ್ 2023ರಂದು ಬರುರ ಗ್ರಾಮ ಪಂಚಾಯತಕ್ಕೆ ಗ್ರೇಡ್–1 ಕಾರ್ಯದರ್ಶಿಯಾಗಿ ಬಡ್ತಿ ಪಡೆದು, ಪ್ರಭಾರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಮೂರು ತಿಂಗಳು ಸೇವೆ ಸಲ್ಲಿಸಿದರು. ನಂತರ 23 ಡಿಸೆಂಬರ್ 2024ರಿಂದ ಭಾಲ್ಕಿ ತಾಲೂಕಿನ ಧನ್ನೂರು (ಹೆಚ್) ಗ್ರಾಮ ಪಂಚಾಯತದಲ್ಲಿ ಪ್ರಭಾರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಧನ್ನೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನೀರು ನಿರ್ವಹಣೆ, ಚರಂಡಿ ಸ್ವಚ್ಛತೆ, ಬೀದಿ ದೀಪಗಳ ನಿರ್ವಹಣೆ ಸೇರಿದಂತೆ ಮೂಲಭೂತ ಸೌಲಭ್ಯಗಳಲ್ಲಿ ಯಾವುದೇ ತಕರಾರು ಇಲ್ಲದಂತೆ ಸಮರ್ಪಕ ವ್ಯವಸ್ಥೆ ಮಾಡಿದ್ದಾರೆ. ಗ್ರಾಮಸ್ಥರ ಸಮಸ್ಯೆಗಳಿಗೆ ಸ್ಪಂದಿಸಿ ತಕ್ಷಣ ಪರಿಹಾರ ಒದಗಿಸುವಲ್ಲಿ ಅವರು ಮುಂಚೂಣಿಯಲ್ಲಿದ್ದಾರೆ.

ಇದಲ್ಲದೆ, ಗ್ರಾಮ ಗ್ರಂಥಾಲಯವನ್ನು ಅಭಿವೃದ್ಧಿಪಡಿಸಿ ಸುಮಾರು 25 ಮಕ್ಕಳಿಗೆ ಉಚಿತ ಕಂಪ್ಯೂಟರ್ ತರಬೇತಿ ನೀಡುತ್ತಿರುವುದು ವಿಶೇಷ. ದಿನನಿತ್ಯ



18–20 ಮಕ್ಕಳು ತರಗತಿಗಳಿಗೆ ಹಾಜರಾಗು ತ್ತಿದ್ದು, ಅವರಿಗೆ ಪ್ರಮಾಣಪತ್ರಗಳನ್ನೂ ನೀಡಲಾಗುತ್ತಿದೆ. ಜೊತೆಗೆ, 15–20 ಓದುಗರು ಪ್ರತಿದಿನ ಗ್ರಂಥಾಲಯಕ್ಕೆ ಭೇಟಿ ನೀಡುತ್ತಿದ್ದಾರೆ. ಎಲ್‌ಕೆಜಿ ಮತ್ತು ಯುಕೆಜಿ ಮಕ್ಕಳಿಗೂ ಯೂಟ್ಯೂಬ್ ಮೂಲಕ ಮೂಲಭೂತ ತರಬೇತಿ ನೀಡುತ್ತಿರುವುದು ಗಮನಾರ್ಹವಾಗಿದೆ.

ಗ್ರಂಥಾಲಯವನ್ನು ಸ್ವಚ್ಛವಾಗಿ ಹಾಗೂ ಸೌಲಭ್ಯಯುತವಾಗಿ ನಿರ್ವ ಹಿಸಲಾಗಿದ್ದು, ಮೇಲಧಿಕಾರಿಗಳಿಂದ ಮೆಚ್ಚುಗೆ ಗಳಿಸಿದೆ. ಕಾಯಕ ಗ್ರಾಮ ಚಾಲನಾ ಕಾರ್ಯಕ್ರಮ, ವಿಶೇಷ ಗ್ರಾಮ ಸಭೆ ಹಾಗೂ ಮಕ್ಕಳ ಸಭೆಗಳಿಗೆ ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್ ಅಧಿಕಾರಿಗಳು ಚಾಲನೆ ನೀಡಿರುವುದು ಗ್ರಾಮಾಭಿವೃದ್ಧಿಗೆ ಹೊಸ ದಿಕ್ಕನ್ನು ನೀಡಿದೆ.


ತಮ್ಮ ಕೆಳಹಂತದ ಸಿಬ್ಬಂದಿಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವ ಸಂತೋಷಕುಮಾರ್ ಪಾಟೀಲ ಅವರು, ಸಂಘಟಿತ ಕಾರ್ಯಪದ್ಧತಿಯ ಮೂಲಕ ಪಂಚಾಯತ್ ಆಡಳಿತದಲ್ಲಿ ಮಾದರಿಯಾಗಿದ್ದಾರೆ. ಅವರ ಕಾರ್ಯಕ್ಕೆ ಮಾರ್ಗದರ್ಶನ ನೀಡುತ್ತಿರುವ ಆಡಳಿತಾಧಿಕಾರಿ ಶಿಕ್ಷಣ ಹಾಗೂ ಕ್ಷೇತ್ರ ವ್ಯವಸ್ಥಾಪಕರಾದ ಶಿವಕುಮಾರ್ ಘುಲಾರಿ ಅವರ ಸಹಕಾರವೂ ಶ್ಲಾಘನೀಯವಾಗಿದೆ.

ಒಟ್ಟಿನಲ್ಲಿ, ಗ್ರಾಮೀಣ ಅಭಿವೃದ್ಧಿ, ಶಿಕ್ಷಣ ಹಾಗೂ ಸಾರ್ವಜನಿಕ ಸೇವೆಯಲ್ಲಿ ಶ್ರದ್ಧೆ ಮತ್ತು ಪ್ರಾಮಾಣಿಕತೆಯೊಂದಿಗೆ ಕಾರ್ಯನಿರ್ವಹಿಸುತ್ತಿರುವ ಸಂತೋಷಕುಮಾರ್ ಪಾಟೀಲ ಅವರು ಇತರರಿಗೆ ಮಾದರಿಯಾಗಿದ್ದಾರೆ.

## ಉತ್ತಮ ಕಾರ್ಯನಿರ್ವಹಣೆಗೆ ಪಿಡಿಓ ಸಂತೋಷಕುಮಾರ್ ಪಾಟೀಲಗೆ ಹೇಳಲೇಬೇಕು ಹ್ಯಾಟ್ಸಾಫ್.....

ಧನ್ನೂರು (ಹೆಚ್) ಗ್ರಾಮ ಪಂಚಾಯಿತಿ ಅಭಿವೃದ್ಧಿಯಲ್ಲಿ ಸಾಗಿ, ಮಾದರಿ ಪಂಚಾಯಿತಿ ಆಗಲು ಕಾರಣ ಇಲ್ಲಿನ ಅಭಿವೃದ್ಧಿ ಅಧಿಕಾರಿ ಸಂತೋಷಕುಮಾರ್ ಪಾಟೀಲ ಎಂಬ ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿ.

ಒಬ್ಬ ಅಧಿಕಾರಿ ದಕ್ಷರು, ಕ್ರಿಯಾಶೀಲರು ಉತ್ಸಾಹಿಗಳು



ಎಲ್ಲಕ್ಕಿಂತ ಹೆಚ್ಚಾಗಿ ಪಾರದರ್ಶಕ ಆಡಳಿತಕ್ಕೆ ಒತ್ತುಕೊಟ್ಟವರು ಆದರೆ ಅವರಿಗೆ ಸರ್ಕಾರ ಹೆಚ್ಚಿನ ಜವಾಬ್ದಾರಿಗಳನ್ನು ವಹಿಸುತ್ತದೆ. ಅದರಂತೆ ಪಿಡಿಓ ಸಂತೋಷಕುಮಾರ್ ಪಾಟೀಲ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರ ಉತ್ತಮ ಕಾರ್ಯ ನಿರ್ವಹಣೆಯನ್ನು ಕಂಡು ಜನ ಮೆಚ್ಚುಗೆ ಸೂಚಿಸಿದ್ದಾರೆ.

ಸಂತೋಷಕುಮಾರ್ ಪಾಟೀಲ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಆಗಿ ತಮ್ಮ ಜವಾಬ್ದಾರಿ ಅರಿತುಕೊಂಡು ಕೆಲಸ ಮಾಡುವ ಮೂಲಕ ಗ್ರಾಮೀಣ ಭಾಗದ ಮೂಲಭೂತ ಸಮಸ್ಯೆಗಳ ನಿವಾರಣೆ ಮಾಡುವ ಜೊತೆಗೆ ಅಭಿವೃದ್ಧಿಗೆ ಹೊಸ ಭಾಷ್ಯ ಬರೆದಿದ್ದಾರೆ.

ಸಮಯಕ್ಕೆ ಸರಿಯಾಗಿ ಕಚೇರಿಗೆ ಆಗಮಿಸುತ್ತಾರೆ. ಆ ದಿನದ ಕೆಲಸ ಕಾರ್ಯಗಳನ್ನು ಅಂದೇ ಪರಿಶೀಲನೆ ಮಾಡುತ್ತಾರೆ.

(13ನೇ ಪುಟಕ್ಕೆ)

# ಬೀದರ : ನಿಜ ಪತ್ರಕರ್ತರಿಗೆ ಬೆಲೆ ಇಲ್ಲ... ಪ್ರಶಸ್ತಿ ಗೌರವಗಳು ಸಿಗುತ್ತಿಲ್ಲ...!

ಪತ್ರಿಕಾ ಲೋಕವು ಸಮಾಜದ ಕಣ್ಣು ಹಾಗೂ ಕಿವಿಯಂತೆ ಕಾರ್ಯನಿರ್ವಹಿಸುತ್ತದೆ. ದೇಶದಲ್ಲಿ ನಡೆಯುವ ಘಟನೆಗಳು, ರಾಜಕೀಯ ಬೆಳವಣಿಗೆಗಳು, ಸಾಮಾಜಿಕ ಸಮಸ್ಯೆಗಳು, ಆರ್ಥಿಕ ಪರಿಸ್ಥಿತಿಗಳು ಇತ್ಯಾದಿ ವಿಷಯಗಳನ್ನು ಜನರಿಗೆ ತಿಳಿಸುವಲ್ಲಿ ಪತ್ರಿಕೆಗಳು ಮಹತ್ವದ ಪಾತ್ರವಹಿಸುತ್ತವೆ. ಈ ಹಿನ್ನೆಲೆಯಲ್ಲಿ ಪತ್ರಿಕಾ ಧರ್ಮ ಮತ್ತು ಪತ್ರಕರ್ತರ ಜವಾಬ್ದಾರಿಗಳು ಅತ್ಯಂತ ಮಹತ್ವದ್ದಾಗಿವೆ.

ಪತ್ರಿಕಾ ಧರ್ಮ ಎಂದರೆ ಸತ್ಯವನ್ನು ನಿಷ್ಠೆಯಿಂದ, ನಿರಪೇಕ್ಷವಾಗಿ ಮತ್ತು ಹೊಣೆಗಾರಿಕೆಯಿಂದ ಜನರಿಗೆ ತಲುಪಿಸುವ ಕರ್ತವ್ಯ. ಯಾವುದೇ ಸುದ್ದಿ ಪ್ರಕಟಿಸುವಾಗ ಅದು ನಿಜವಾಗಿದೆಯೇ ಎಂದು ಪರಿಶೀಲಿಸುವುದು, ಯಾರಿಗೂ ಅನ್ಯಾಯವಾಗದಂತೆ ವರದಿ ಮಾಡುವುದು ಪತ್ರಿಕಾ ಧರ್ಮದ ಪ್ರಮುಖ ಅಂಶಗಳಾಗಿವೆ. ಸುಳ್ಳು ಸುದ್ದಿಗಳು ಅಥವಾ ಅಪವಾದಗಳು ಸಮಾಜದಲ್ಲಿ ಗೊಂದಲ ಮತ್ತು ಅಶಾಂತಿಯನ್ನು ಉಂಟುಮಾಡಬಹುದು. ಆದ್ದರಿಂದ ಪತ್ರಕರ್ತರು ಸದಾ ಸತ್ಯನಿಷ್ಠರಾಗಿರಬೇಕು.

ಪತ್ರಕರ್ತರು ಸಮಾಜದ ಸೇವಕರಾಗಿ ಪರಿಗಣಿಸಲ್ಪಡುತ್ತಾರೆ. ಅವರು ತಮ್ಮ ಕೆಲಸದ ಮೂಲಕ ಜನರಿಗೆ ಮಾಹಿತಿ ನೀಡುವುದಷ್ಟೇ ಅಲ್ಲದೆ, ಸಮಾಜದಲ್ಲಿ ನಡೆಯುವ ಅನ್ಯಾಯಗಳನ್ನು ಬಹಿರಂಗಪಡಿಸುವ ಜವಾಬ್ದಾರಿಯನ್ನೂ ಹೊತ್ತಿದ್ದಾರೆ. ಭ್ರಷ್ಟಾಚಾರ, ಅನ್ಯಾಯ, ಅಕ್ರಮಗಳು ಇತ್ಯಾದಿಗಳನ್ನು ಬಹಿರಂಗಪಡಿಸುವ ಮೂಲಕ ಸಮಾಜದಲ್ಲಿ ನ್ಯಾಯ ಸ್ಥಾಪನೆಗೆ ಸಹಕರಿಸುತ್ತಾರೆ. ಈ ಕಾರಣದಿಂದಲೇ ಪತ್ರಕರ್ತರನ್ನು "ನಾಲ್ಕನೇ ಅಂಗ" ಎಂದು ಕರೆಯಲಾಗುತ್ತದೆ.

ಪತ್ರಕರ್ತರ ಕಾರ್ಯದಲ್ಲಿ ನಿರಪೇಕ್ಷತೆ ಅತ್ಯಂತ ಮುಖ್ಯ. ಅವರು ಯಾವುದೇ ರಾಜಕೀಯ ಪಕ್ಷ, ಧರ್ಮ ಅಥವಾ ವ್ಯಕ್ತಿಯ ಪರವಾಗಿ ತಿರುಗಿಬಿಡದೆ, ಸತ್ಯದ ಪರವಾಗಿ ನಿಲ್ಲಬೇಕು. ಜೊತೆಗೆ ಜನರ ಗೌಪ್ಯತೆ, ಮಾನವ ಹಕ್ಕುಗಳನ್ನು ಗೌರವಿಸುವುದು ಕೂಡ ಅಗತ್ಯ. ಸಂವೇದನಾಶೀಲ ವಿಷಯಗಳನ್ನು ವರದಿ ಮಾಡುವಾಗ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು.

ಇಂದಿನ ಡಿಜಿಟಲ್ ಯುಗದಲ್ಲಿ ಸಾಮಾಜಿಕ ಮಾಧ್ಯಮಗಳ ಪ್ರಭಾವ ಹೆಚ್ಚಾಗಿದೆ. ಇದರಿಂದ ಸುಳ್ಳು ಸುದ್ದಿಗಳ ಹರಡುವಿಕೆ ಕೂಡ ವೇಗವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಪತ್ರಕರ್ತರ ಪಾತ್ರ ಇನ್ನಷ್ಟು ಮಹತ್ವ ಪಡೆದಿದೆ. ಅವರು ನಿಖರವಾದ ಮಾಹಿತಿಯನ್ನು ಪರಿಶೀಲಿಸಿ ಜನರಿಗೆ ಸರಿಯಾದ ಸುದ್ದಿ ನೀಡಬೇಕು.

ಸಾರಾಂಶವಾಗಿ, ಪತ್ರಿಕಾ ಧರ್ಮವು ಸತ್ಯ, ನೈತಿಕತೆ ಮತ್ತು ಹೊಣೆಗಾರಿಕೆಯ ಮೇಲೆ ಆಧಾರಿತವಾಗಿದೆ. ಪತ್ರಕರ್ತರು ಈ ಮೌಲ್ಯಗಳನ್ನು ಪಾಲಿಸಿಕೊಂಡು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಿದರೆ ಸಮಾಜದಲ್ಲಿ ಶಾಂತಿ, ನ್ಯಾಯ ಮತ್ತು ಅಭಿವೃದ್ಧಿ ಸಾಧಿಸಲು ಸಾಧ್ಯವಾಗುತ್ತದೆ.

ಪತ್ರಕರ್ತರು ಪತ್ರಿಕಾ ಧರ್ಮ ಪಾಲಿಸಿ ಪತ್ರಕರ್ತರಾಗಿ ಜವಾಬ್ದಾರಿ ಅರಿತು ಕೆಲಸ ಮಾಡಿದಾಗ ಸ್ವಸ್ಥ ಸಮಾಜ ನಿರ್ಮಾಣ ಮಾಡಲು ಸಾಧ್ಯ. ಆದರೆ ಇವತ್ತಿನ ದಿವಸದಲ್ಲಿ ಪತ್ರಿಕೋದ್ಯಮ ಅನ್ನುವುದು ಸಹ ಕೆಟ್ಟಿದೆ ಅನ್ನುವ ಆರೋಪಗಳು ಸಮಾಜದಲ್ಲಿಯೇ ಕೇಳಿಬರುತ್ತಿದೆ.

ಪತ್ರಕರ್ತರು ರಾಜಕೀಯ ಮಾಡುತ್ತಾ ಸ್ವಾರ್ಥದಲ್ಲಿ ಒಂದು ಕಡೆಯಲ್ಲಿ ಸುದ್ದಿ ಮಾಡುತ್ತಾ ಬಕೆಟು ಹಿಡಿಯುತ್ತಾ ವಾಸ್ತವ ಸುದ್ದಿಗಿಂತ ಅತೀ ರಂಜನಿಯ ಸುದ್ದಿಗಳನ್ನು ಬಿತ್ತರಿಸುತ್ತಾ ಬಂದಿವೆ ಅನ್ನುವ ದೂರುಗಳನ್ನು ಜನಸಾಮಾನ್ಯರೇ ಮಾಡುತ್ತಾ ಬಂದಿದ್ದಾರೆ.

ಆದರೆ ಎಲ್ಲರೂ ಹಾಗಲ್ಲ. ಒಳ್ಳೆಯ ನಿಷ್ಠಾವಂತ, ಪ್ರಾಮಾಣಿಕ, ಬದ್ಧತೆ ಮತ್ತು ನೈತಿಕತೆ ಉಳ್ಳ ಪತ್ರಕರ್ತರು ಇದ್ದಾರೆ. ನಿರ್ಭಯವಾಗಿ, ನಿಷ್ಪಕ್ಷಪಾತವಾಗಿ ಕೆಲಸ ಮಾಡುವ ಪತ್ರಕರ್ತರು ಮತ್ತು ಸಂಪಾದಕರು ಇರುವುದರಿಂದಲೇ ಇನ್ನಷ್ಟು ಜನಸಾಮಾನ್ಯರಿಗೆ ಪತ್ರಿಕಾಧರ್ಮದ ಮೇಲೆ ನಂಬಿಕೆ ಇರುವಂತೆ ಆಗಿದೆ.

ಸಾಕಷ್ಟು ಜನ ಪತ್ರಕರ್ತರು ರಾಜಕೀಯದಲ್ಲಿ ಇರುತ್ತಾರೆ. ಒಂದು ಪಕ್ಷದಲ್ಲಿ ಗುರುತಿಸಿಕೊಳ್ಳುತ್ತಾರೆ. ತಾವು ಗುರುತಿಸಿಕೊಂಡ ಪಕ್ಷ ಅಧಿಕಾರಕ್ಕೆ ಬಂದರೆ ಸಿಗಬಹುದಾದ ಎಲ್ಲಾ ರೀತಿಯ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಾರೆ, ತಾವು ಆ ಪಕ್ಷದ ಕಾರ್ಯಕರ್ತರ ರೀತಿಯಲ್ಲಿ ಕೆಲಸ ಮಾಡುತ್ತಾರೆ. ಇನ್ನು ತಾವು ಪತ್ರಕರ್ತರು ಅಂತ ಪತ್ರಿಕಾ ಕೆಲಸವನ್ನು ಮಾಡಲು ಮುಂದಾಗುತ್ತಾರೆ. ಅಲ್ಲಿ ನಿರ್ಭಯವಾದ ನಿಷ್ಪಕ್ಷಪಾತವಾದ




ವರದಿ ಮಾಡದೆ, ಕೇವಲ ತೋರ್ಪಡಿಕೆಯ ಒನ್ ಸೈಡೆಡ್ ಸುದ್ದಿಗಳನ್ನು ಮಾಡುತ್ತಾರೆ.

ಬೀದರ್ ಜಿಲ್ಲೆಯಲ್ಲಿ ಸಾಕಷ್ಟು ಪತ್ರಕರ್ತರು ವಿವಿಧ ರಾಜಕೀಯ ಪಕ್ಷಗಳಲ್ಲಿ ಗುರುತಿಸಿಕೊಂಡು ರಾಜಕೀಯ ಮಾಡುತ್ತಾ ಬಂದಿದ್ದಾರೆ. ರಾಜಕಾರಣಿಗಳ ಮನೆಗಳಿಗೆ ಹೋದರೆ ಪತ್ರಕರ್ತರು ರಾಜಕಾರಣಿಗಳಾಗುತ್ತಾರೆ. ಇನ್ನು ಹೊರಗಡೆ ಬಂದರೆ ಪತ್ರಕರ್ತರಾಗಿ ಕೆಲಸ ಮಾಡುತ್ತಾರೆ. ಜಿಲ್ಲೆಯಲ್ಲಿ ಇಂತಹ ಪತ್ರಕರ್ತರಿಗೆ ಬೆಲೆ ಇದೆ!

ಪತ್ರಿಕಾ ಧರ್ಮವನ್ನು ಪಾಲಿಸುತ್ತಾ ಪತ್ರಿಕೋದ್ಯಮಕ್ಕೆ ಬೆಲೆ ನೀಡುತ್ತಾ, ನೂರಕ್ಕೆ ಶೇಕಡ 90ರಷ್ಟು ನಿಷ್ಪಕ್ಷಪಾತವಾದ ವಾಸ್ತವಕ್ಕೆ ಹತ್ತಿರವಿರುವ ಸುದ್ದಿಗಳನ್ನು ಬಿತ್ತರಿಸುತ್ತಾ ಬಂದಿರುವ ನಿಜವಾದ ಪತ್ರಕರ್ತರಿಗೆ ಹಾಗೂ ಪತ್ರಿಕೆಯ ಸಂಪಾದಕರಿಗೆ ಮೂರು ಕಾಸಿನ ಬೆಲೆ ಇಲ್ಲದಂತೆ ಆಗಿ ಹೋಗಿದೆ.

ಸುಮಾರು ಹದಿನೈದು ವರ್ಷಗಳಿಂದ ಒಂದು ಪತ್ರಿಕೆಯನ್ನು ನಡೆಸುತ್ತಾ, ಅಲ್ಲಿ ಸಾಧ್ಯವಾದಷ್ಟು ಸಮಾಜಕ್ಕೆ ಪೂರಕವಾದ ಅಂತಹ ಸುದ್ದಿಗಳನ್ನು ತರುತ್ತ ಬಂದಿದ್ದರು ಸಹ ಯಾವುದೇ ರೀತಿಯ ಗೌರವ, ಸನ್ಮಾನ ಮನ್ನಣೆ ಸಿಗುತ್ತಿಲ್ಲ.

ಪತ್ರಿಕೆಗಳನ್ನು ಅಥವಾ ಯುಟ್ಯೂಬ್ ಚಾನೆಲ್ ಗಳನ್ನು ಆರಂಭಿಸಿ ಎರಡು ಮೂರು ವರ್ಷಗಳು ಆಗಿದ್ದಂತಹವರಿಗೆ ಸಮಾಜದಲ್ಲಿ ಗೌರವ ಸನ್ಮಾನ ಅಭಿನಂದನೆ ಸಿಗುತ್ತಿದೆ. ಯಾಕೆಂದರೆ ಅವರು ರಾಜಕಾರಣಿಗಳಿಗೆ ಹಾಗೂ ಹಿರಿಯ ಅಧಿಕಾರಿಗಳಿಗೆ ಬಕೆಟು ಹಿಡಿಯುತ್ತಾ ಚಮಚಾಗಿರಿ ಮಾಡುತ್ತಾ ಬಂದಿದ್ದಾರೆ.

ಪ್ರತಿ ವರ್ಷ ಆಗಸ್ಟ್ 15 ಹಾಗೂ ಜನವರಿ 26ರಂದು ಪತ್ರಿಕೋದ್ಯಮದಲ್ಲಿ ಪ್ರಾಮಾಣಿಕ ಸೇವೆ ಮಾಡಿದಂತಹ ನಿಜವಾದ ಪತ್ರಕರ್ತರನ್ನು ಗುರುತಿಸಿ ಅವರನ್ನು ಜಿಲ್ಲಾಡಳಿತದಿಂದ ಸನ್ಮಾನಿಸುವ, ಅಭಿನಂದಿಸುವ ಕೆಲಸ ಆಗುತ್ತದೆ. ಅದಕ್ಕಾಗಿ ಜಿಲ್ಲಾಧಿಕಾರಿಗಳ ಜಿಲ್ಲಾ ಪಂಚಾಯಿತಿ ಸಿಇಓ ಹಾಗೂ ಇತರ ಕೆಲವು ಅಧಿಕಾರಿಗಳ ನೇತೃತ್ವದಲ್ಲಿ ಒಂದು ಸಮಿತಿ ಇರುತ್ತದೆ. ಅವರು ಜಿಲ್ಲೆಯಲ್ಲಿ ಯಾರೂ ನಿಷ್ಪಕ್ಷಪಾತವಾಗಿ ಸಮಾಜಕ್ಕೆ ಯೋಗ್ಯವಾದ ವರದಿ ಮಾಡಿದ್ದಾರೆ ಯಾರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ ಅನ್ನುವುದನ್ನು ಗುರುತಿಸಿ ಅಂತಹವರಿಗೆ ಪ್ರಶಸ್ತಿ ನೀಡಬೇಕು.

ಆದರೆ ಪತ್ರಕರ್ತರನ್ನು ಉದ್ಧಾರ ಮಾಡುತ್ತೇವೆ ಎಂದು ರಚಿತವಾಗಿರುವ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ಇತರ ಪತ್ರಕರ್ತರ ಸಂಘಗಳು ಅಧಿಕಾರಿಗಳ ಸಮಿತಿಗೆ ತಮಗೆ ಬೇಕಾದ ಪತ್ರಕರ್ತರ ಹೆಸರುಗಳನ್ನು ಕಳುಹಿಸಿ ಅಂತಹವರಿಗೆ ಗೌರವ ಸನ್ಮಾನ ಸಿಗುವಂತೆ ನೋಡಿಕೊಳ್ಳುತ್ತಿದ್ದಾರೆ. ಸಮಿತಿಯೇ ಗುರುತಿಸಬೇಕಾದ ಕೆಲಸವನ್ನು ಸಂಘಗಳು ಮಾಡುತ್ತಿರುವುದರಿಂದ, ಅರ್ಹತೆ ಇಲ್ಲದವರಿಗೂ ಪ್ರಶಸ್ತಿ ಸನ್ಮಾನ ಗೌರವ ಸಿಗುವಂತೆ ಆಗಿ ಹೋಗಿದೆ. ನಿಜ ಹೇಳಬೇಕು ಎಂದರೆ ಸನ್ಮಾನಕ್ಕೆ ಬೆಲೆ ಇಲ್ಲವಾಗಿದೆ.

ಹಲವಾರು ವರ್ಷಗಳಿಂದ ನಿರ್ಭೀತಿಯಿಂದ ಸುದ್ದಿಗಳನ್ನು ಮಾಡುತ್ತಾ ಬಂದರೂ, ಒಂದು ಪತ್ರಿಕೆಯನ್ನು ನಡೆಸುತ್ತಾ ಇದ್ದರೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಮೆಂಬರ್ ಶಿಪ್ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ.

ಇನ್ನೂ ರಾಜಕಾರಣ ಮಾಡುತ್ತಾರೆ ಜೊತೆಗೆ ಉತ್ತಮ ಪತ್ರಕರ್ತರಿಗೆ ಮೆಂಬರ್ಶಿಪ್ ನೀಡದೇ ವಂಚನೆ ಮಾಡುತ್ತಾರೆ. ಇದೊಂದು ರೀತಿಯಲ್ಲಿ ಪತ್ರಿಕಾ ಧರ್ಮದಲ್ಲಿ ಆತ್ಮವಂಚನೆ ಎಂದರೆ ತಪ್ಪಲ್ಲ!

ಪತ್ರಿಕಾ ಧರ್ಮದಲ್ಲಿ ಇವತ್ತು ತಾರತಮ್ಯ ಎಸಗಲಾಗುತ್ತಿದೆ. ಪತ್ರಿಕೋದ್ಯಮವನ್ನು ಅಣಕಿಸುವಂತೆ ಪ್ರಾಮಾಣಿಕ, ನಿಜ ಪತ್ರಕರ್ತರಿಗೆ ವಂಚನೆ ಮಾಡಿ ಹಾಗೂ ನಾಲ್ಕಕ್ಷರ ಬರೆಯಲು ಬಾರದ ಅಡ್ನಾಡಿಗಳು ಇವತ್ತು ಪತ್ರಿಕಾ ಲೋಕದಲ್ಲಿ ಕೆಲಸ ಮಾಡುತ್ತಾ, ಪ್ರಶಸ್ತಿ ಸನ್ಮಾನಗಳಿಗೆ ಪಾತ್ರರಾಗುತ್ತಿದ್ದಾರೆ.

ಸಾಮಾನ್ಯವಾಗಿ ಪತ್ರಿಕೆಯಲಿದ್ದವರು ರಾಜಕೀಯದಲ್ಲಿ ಇರಬಾರದು. ಆದರೆ ರಾಜ್ಯದಲ್ಲಿ ಅಷ್ಟೇ ಅಲ್ಲ ಬೀದರ್ ಜಿಲ್ಲೆಯಲ್ಲೂ ಸಹ ಹಲವಾರು ಪತ್ರಕರ್ತರು ರಾಜಕೀಯದಲ್ಲಿಯೂ ಗುರುತಿಸಿಕೊಂಡು ಪತ್ರಕರ್ತರಾಗಿಯೂ ತೊಡಗಿಸಿಕೊಂಡು ಪತ್ರಿಕಾ ಧರ್ಮಕ್ಕೆ ದ್ರೋಹ ಎಸಗುತ್ತಿದ್ದಾರೆ. ಇದನ್ನು ಕಂಡಾಗ ಇವರನ್ನು ಹೇಳುವವರು ಕೇಳೋರು ಯಾರು ಇಲ್ಲ ಅನ್ನುವುದು ಸ್ಪಷ್ಟವಾಗುತ್ತದೆ.

ನೇರವಾಗಿ ಬರೆಯುವಂತಹ ಪ್ರಾಮಾಣಿಕ ಪತ್ರಕರ್ತನನ್ನು ಸಮಾಜ ಕೂಡ ರಾಜಕಾರಣಿಗಳು ಕೂಡ ಅಧಿಕಾರಿಗಳು ಕೂಡ ಪರಿಗಣಿಸುವುದಿಲ್ಲ. ಇದ್ದದ್ದನ್ನು ಇದ್ದಂತೆ ಬೆಳಕು ಚೆಲ್ಲುವಂತಹ, ಯಾವುದಕ್ಕೂ ಜಗ್ಗು ಹೊಡೆಯದೆ ಕೆಲಸ ಮಾಡುವ ಪತ್ರಕರ್ತರನ್ನು ಮತ್ತು ಸಂಪಾದಕರನ್ನು ಪರಿಗಣಿಸದೆ ತಾತ್ಸಾರ ಮಾಡುವಂತಹ ವಿಕೃತ ಮನೋಭಾವ ಇವತ್ತು ಸಮಾಜದಲ್ಲಿ ಬೇರೂರಿದೆ.

ಯಾರು ಚಮಚ ಗಿರಿ ಮಾಡುತ್ತಾರೋ, ಯಾರೂ ಒಬ್ಬರ ಪರವಾಗಿ ಬರೆಯುತ್ತಾರೋ, ರಾಜಕಾರಣದಲ್ಲಿ ಗುರುತಿಸಿಕೊಳ್ಳುತ್ತಾರೋ ಅಂತವರನ್ನು ಡಾಕ್ಟರೇಟ್, ಜಿಲ್ಲಾ ಮಟ್ಟದ ಸ್ವಾತಂತ್ರ್ಯ ದಿನಾಚರಣೆ ಗಣರಾಜ್ಯೋತ್ಸವದ ಸಂದರ್ಭಗಳಲ್ಲಿ ಪ್ರಶಸ್ತಿಗಳನ್ನು ನೀಡಿ ಗೌರವಿಸುತ್ತಾರೆ. ಇದರಿಂದ ನಿಜ ಪತ್ರಕರ್ತರಿಗೆ ಮೂರು ಕಾಸಿನ ಬೆಲೆ ಇಲ್ಲದಂತೆ ಹಾಗೆ ಹೋಗಿದೆ. ಸಮಾಜದ ಅಂಕುಡೊಂಕುಗಳನ್ನು ತಿದ್ದುತ್ತಾ ಎಲ್ಲಾ ರಂಗಗಳ ಮೇಲಿನ ಸುದ್ದಿಗಳನ್ನು ಬೆಳಕು ಚೆಲ್ಲುತ್ತಾ ಬಂದವರನ್ನು ಗುರುತಿಸದೆ ಹೋಗಿದ್ದಾರೆ. ರಾಜಕೀಯ ಮಂದಿ ಕೂಡ ನಿಜವಾದ ಪತ್ರಕರ್ತರಿಗಿಂತ ಅಂತಹ ಪತ್ರಕರ್ತರಿಗೆ ಮನ್ನಣೆ ಕೊಡುತ್ತಾರೆ ನಿಜವಾದ ಪತ್ರ ಕರ್ತರಿಗೆ ಅನ್ಯಾಯದ ಧೋರಣೆ ಮಾಡುತ್ತಾರೆ.

ಬೀದರ್ ಜಿಲ್ಲೆಯಲ್ಲಿ ಹಲವಾರು ವರ್ಷಗಳಿಂದ ಒಂದೇ ಹಾದಿಯಲ್ಲಿ ಪತ್ರಿಕಾ ಧರ್ಮಕ್ಕೆ ಬದ್ಧವಾಗಿ ಕೆಲಸ ಮಾಡುವ ನಿಜ ಪತ್ರಕರ್ತರನ್ನು ಕಡೆಗಣಿಸಿ, ಪತ್ರಿಕಾಧರ್ಮ ಪಾಲಿಸದ ಅನ್ಯಾಯ ಮಾಡುವ ಪತ್ರಿಕರ್ತರನ್ನು ಬೆಂಬಲಿಸುತ್ತಾ ಬಂದಿರುವುದು ನಿಜಕ್ಕೂ ನಾಚಿಕೆಗೇಡಿನ ಸಂಗತಿ. ಇದು ಬದಲಾಗಬೇಕು ಪ್ರಾಮಾಣಿಕ ಪತ್ರಕರ್ತರಿಗೂ ಬೆಲೆ ಸಿಗಬೇಕು ಗೌರವ ಸಿಗಬೇಕು. ಆಗ ಸ್ವಸ್ಥ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ.

# ಹುಮನಾಬಾದ್ ಶೆಡೋಳ ಗ್ರಾಮ ಪಂಚಾಯಿತಿಯಲ್ಲಿ ಭ್ರಷ್ಟಾಚಾರದ ಸುಳಿವು?

## ಮಾಹಿತಿ ಹಕ್ಕು ಕೇಳಿದರೆ ಉತ್ತರವೇ ಇಲ್ಲ!



ಬೀದರ್ ಜಿಲ್ಲೆಯ ಗ್ರಾಮ ಪಂಚಾಯಿತಿಗಳಲ್ಲಿ ಭ್ರಷ್ಟಾಚಾರ, ಅವ್ಯವಹಾರಗಳು ಹೆಚ್ಚುತ್ತಿರುವ ಕುರಿತು ಹಲವು ಆರೋಪಗಳು ಕೇಳಿಬರುತ್ತಿರುವ ಹಿನ್ನೆಲೆ, ಹುಮನಾಬಾದ್ ತಾಲ್ಲೂಕಿನ ಶೆಡೋಳ ಗ್ರಾಮ ಪಂಚಾಯಿತಿ ಇದೀಗ ಗಂಭೀರ ಆರೋಪಗಳ ಕೇಂದ್ರಬಿಂದುವಾಗಿದೆ. ಗ್ರಾಮೀಣ ಅಭಿವೃದ್ಧಿಗೆ ಮೀಸಲಾದ ಹಣದ ಬಳಕೆಯಲ್ಲಿ ಪಾರದರ್ಶಕತೆ ಕೊರತೆ, ಮಾಹಿತಿ ಹಕ್ಕು ಕಾಯ್ದೆಯ ನಿರ್ಲಕ್ಷ್ಯ ಮತ್ತು ಅಧಿಕಾರಿಗಳ ನಿರ್ಲಿಪ್ತತೆ ಸ್ಥಳೀಯರಲ್ಲಿ ಅಸಮಾಧಾನ ಹುಟ್ಟಿಸಿದೆ.

ಗ್ರಾಮ ಪಂಚಾಯಿತಿಗಳು ಗ್ರಾಮೀಣ ಪ್ರದೇಶಗಳ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ಪ್ರಮುಖ ಪಾತ್ರವಹಿಸಬೇಕು. ಆದರೆ ಶೆಡೋಳ ಪಂಚಾಯಿತಿಯಲ್ಲಿ ಕುಡಿಯುವ ನೀರು, ರಸ್ತೆ, ಚರಂಡಿ, ಸ್ವಚ್ಛತೆ, ಬೀದಿ ದೀಪಗಳಂತಹ ಮೂಲಭೂತ ಅಗತ್ಯಗಳ ಅಭಿವೃದ್ಧಿಗೆ ಮೀಸಲಾದ ಅನುದಾನ ಸರಿಯಾಗಿ ಬಳಕೆಯಾಗಿಲ್ಲ ಎಂಬ ಆರೋಪಗಳು ಕೇಳಿಬರುತ್ತಿವೆ. ನಕಲಿ ಬಿಲ್‌ಗಳ ಮೂಲಕ ಹಣ ದುರುಪಯೋಗ, ಕಾಗದದಲ್ಲಿ ಮಾತ್ರ ಕಾಮಗಾರಿಗಳ ಪೂರ್ಣಗೊಳ????, ಅಧಿಕಾರಿಗಳು?ಗುತ್ತಿಗೆದಾರರ ಸಂಧಾನ ಇತ್ಯಾದಿ ಗಂಭೀರ ಆರೋಪಗಳು ಸ್ಥಳೀಯರಿಂದ ಕೇಳಿಬರುತ್ತಿವೆ.

### ಮಾಹಿತಿ ಹಕ್ಕು ಕಾಯ್ದೆಗೆ ತಾತ್ಸಾರ?

ಬೀದರ್ ಕೋಟೆ ಕನ್ನಡ ವಾರಪತ್ರಿಕೆಯ ಜಿಲ್ಲಾ ವರದಿಗಾರರಾದ ಸಿ.ಪಿ. ಕಾನಡೆ ಅವರು 15ನೇ ಹಣಕಾಸು ಆಯೋಗದ ಅನುದಾನದ ವಿವರಗಳನ್ನು ಮಾಹಿತಿ ಹಕ್ಕು ಕಾಯ್ದೆಯಡಿ ಕೇಳಿದ್ದರು. 01–05–2022 ರಿಂದ 23–10–2025ರವರೆಗೆ ಪಂಚಾಯಿತಿಗೆ ಬಂದಿರುವ ಅನುದಾನ, ಕ್ರಿಯಾ ಯೋಜನೆಗಳು, ಅಳತೆ ಪುಸ್ತಕಗಳು ಹಾಗೂ ಬ್ಯಾಂಕ್ ಸ್ಟೇಟ್ಮೆಂಟ್ ನೀಡುವಂತೆ ಅವರು ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿಯನ್ನು ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿಗಳ ಮೂಲಕ ಪಂಚಾಯಿತಿಗೆ ಕಳುಹಿಸಲಾಯಿತು. ಉಪ ಕಾರ್ಯದರ್ಶಿಗಳು ಸ್ಪಷ್ಟ ಸೂಚನೆ ನೀಡಿದರೂ, ಶೆಡೋಳ ಪಂಚಾಯಿತಿ ಅಧಿಕಾರಿಗಳು ಯಾವುದೇ ಮಾಹಿತಿಯನ್ನು ನೀಡದೆ ಮೌನ ವಹಿಸಿದ್ದಾರೆ. ಈ ಬೆಳವಣಿಗೆ ಮಾಹಿತಿ ಹಕ್ಕು ಕಾಯ್ದೆಯ ಉಲ್ಲಂಘನೆಯಾಗಿ ಪರಿಗಣಿಸಲಾಗುತ್ತಿದೆ.

### ಪತ್ರಕರ್ತರಿಗೆ ಮಾಹಿತಿ ಇಲ್ಲದಿದ್ದರೆ ಸಾಮಾನ್ಯರಿಗೆ ಹೇಗೆ?

ಪತ್ರಕರ್ತರಿಗೆಲೇ ಮಾಹಿತಿ ನೀಡಲು ಹಿಂದೆ ಸರಿಯುತ್ತಿರುವ ಪಂಚಾಯಿತಿ ಅಧಿಕಾರಿಗಳು, ಸಾಮಾನ್ಯ ನಾಗರಿಕರಿಗೆ ಮಾಹಿತಿ ನೀಡುವ ಪರಿಸ್ಥಿತಿ ಏನಿರಬಹುದು ಎಂಬ ಪ್ರಶ್ನೆ ಉದ್ಭವಿಸಿದೆ. ಪಿಡಿಒ ಮತ್ತು ಪಂಚಾಯಿತಿ ಕಾರ್ಯದರ್ಶಿಯವರ ನಡೆ ಸಾರ್ವಜನಿಕರಲ್ಲಿ ಅನುಮಾನ ಹೆಚ್ಚಿಸಿದೆ.

### “ಡಿಎಸ್ ಮಾತಿಗೂ ಬೆಲೆ ಇಲ್ಲವೇ?”

ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿಯವರ ಸೂಚನೆಗೂ ಮನ್ನಣೆ ನೀಡದಿರುವುದು ಆಡಳಿತಾತ್ಮಕ ಶಿಸ್ತು ಕುಸಿತದ ಸೂಚಕವಾಗಿದೆ. ಹಿರಿಯ ಅಧಿಕಾರಿಗಳ ಮಾತನ್ನೇ ಲೆಕ್ಕಿಸದಿದ್ದರೆ, ಕೆಳಮಟ್ಟದ ಆಡಳಿತದಲ್ಲಿ ಜವಾಬ್ದಾರಿತನ ಹೇಗೆ ಉಳಿಯುತ್ತದೆ ಎಂಬ ಪ್ರಶ್ನೆ ಮೂಡುತ್ತಿದೆ.

### ಸ್ಥಳೀಯರ ಆಗ್ರಹ ತನಿಖೆ ಅಗತ್ಯ

ಶೆಡೋಳ ಗ್ರಾಮ ಪಂಚಾಯಿತಿಯಲ್ಲಿ ನಡೆದಿರುವ ಅವ್ಯವಹಾರಗಳ ಕುರಿತು ಸಂಪೂರ್ಣ ತನಿಖೆ ನಡೆಸಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಗಿರೀಶ್ ಬದೋಲೆ ಅವರು ತಕ್ಷಣ ಮಧ್ಯಪ್ರವೇಶಿಸಿ, ಅಕ್ರಮಗಳಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

### ಪರಿಶೀಲನೆಗೆ ಒಳಪಡುವ 15ನೇ ಹಣಕಾಸು ಯೋಜನೆ

15ನೇ ಹಣಕಾಸು ಆಯೋಗ (2020–2025) ಗ್ರಾಮ ಪಂಚಾಯಿತಿಗಳಿಗೆ ನೇರ ಅನುದಾನ ನೀಡುವ ಮೂಲಕ ಗ್ರಾಮೀಣ ಅಭಿವೃದ್ಧಿಗೆ ಬಲ ನೀಡುವ ಪ್ರಮುಖ ಯೋಜನೆಯಾಗಿದೆ. ಕುಡಿಯುವ ನೀರು, ಸ್ವಚ್ಛತೆ, ರಸ್ತೆ, ಆರೋಗ್ಯ, ಶಿಕ್ಷಣ ಮುಂತಾದ ಮೂಲಭೂತ ಕ್ಷೇತ್ರಗಳಲ್ಲಿ ಈ ಅನುದಾನ ಬಳಸಬೇಕು.

### ಈ ಯೋಜನೆಯ ಮುಖ್ಯ ಉದ್ದೇಶಗಳು:

ಪಾರದರ್ಶಕತೆ ಮತ್ತು ಜವಾಬ್ದಾರಿತನ

ಗ್ರಾಮಸಭೆಗಳ ಮೂಲಕ ನಿರ್ಧಾರ ಪ್ರಕ್ರಿಯೆ

ಸ್ಥಳೀಯ ಅಗತ್ಯಗಳಿಗೆ ತಕ್ಕ ಅಭಿವೃದ್ಧಿ

ಉದ್ಯೋಗ ಸೃಷ್ಟಿ ಮತ್ತು ಜೀವನಮಟ್ಟ ಸುಧಾರಣೆ

ಆದರೆ ಶೆಡೋಳ ಪಂಚಾಯಿತಿಯಲ್ಲಿ ಈ ಅನುದಾನದ ಬಳಕೆಯ ಬಗ್ಗೆ ಮಾಹಿತಿ ಸಿಗದಿರುವುದು ಅನುಮಾನಗಳಿಗೆ ಕಾರಣವಾಗಿದೆ.

ಶೆಡೋಳ ಗ್ರಾಮ ಪಂಚಾಯಿತಿಯಲ್ಲಿ 15ನೇ ಹಣಕಾಸು ಯೋಜನೆಯ ಅನುದಾನ ಬಳಕೆಯಲ್ಲಿ ಗಂಭೀರ ಅಕ್ರಮಗಳು ನಡೆದಿರುವ ಶಂಕೆ ವ್ಯಕ್ತವಾಗುತ್ತಿದೆ. ಮಾಹಿತಿ ಹಕ್ಕು ಕಾಯ್ದೆಯಡಿ ಕೇಳಿದ ಮಾಹಿತಿಯನ್ನು ನೀಡದಿರುವುದು ಈ ಅನುಮಾನವನ್ನು ಮತ್ತಷ್ಟು ಗಟ್ಟಿಗೊಳಿಸಿದೆ.

ಗ್ರಾಮೀಣಾಭಿವೃದ್ಧಿಗೆ ಮೀಸಲಾದ ಅನುದಾನ ದುರುಪಯೋಗವಾಗುತ್ತಿರುವುದು ಸತ್ಯವಾಗಿದ್ದರೆ, ಇದು ಕೇವಲ ಒಂದು ಪಂಚಾಯಿತಿಯ ಸಮಸ್ಯೆಯಾಗಿರದೇ, ವ್ಯವಸ್ಥಾತ್ಮಕ ದೋಷದ ಸೂಚನೆಯಾಗಿರಬಹುದು. ಆದ್ದರಿಂದ ಉನ್ನತ ಮಟ್ಟದ ತನಿಖೆ ನಡೆಸಿ, ಪಾರದರ್ಶಕ ಆಡಳಿತವನ್ನು ಖಚಿತಪಡಿಸುವುದು ಅವಶ್ಯಕವಾಗಿದೆ.

### CEO ಅವರೇ ನೀವೇ ಕ್ರಮ ಕೈಗೊಳ್ಳಿ

ಬೀದರ್ ಜಿಲ್ಲೆ ರಾಜ್ಯದ ಗಡಿಯಲ್ಲಿದ್ದು, ಇಲ್ಲಿನ ಗ್ರಾಮ ಪಂಚಾಯಿತಿಗಳಲ್ಲಿ ಇತ್ತೀಚಿನ ದಿನಗಳಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರವೇ ನಡೆಯುತ್ತಿದೆ. ಅದಕ್ಕೊಂದು ಉದಾಹರಣೆ ಹುಮನಾಬಾದ್ ತಾಲ್ಲೂಕು, ಶೆಡೋಳ ಗ್ರಾಮ ಪಂಚಾಯಿತಿ.

ಈ ಪಂಚಾಯಿತಿಯ ಕಾಮಗಾರಿಗಳಲ್ಲಿ ಅಕ್ರಮ, ಭ್ರಷ್ಟಾಚಾರ ನಡೆದಿದೆ ಎಂದು ಸ್ಥಳೀಯ ಜನ ಆರೋಪಿಸುತ್ತಿದ್ದಾರೆ.

ಈ ಪಂಚಾಯಿತಿಯಲ್ಲಿ ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿಗಳನ್ನು ಕೇಳಿದರೆ, ಇಲ್ಲಿನ ಅಧಿಕಾರಿ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಾಹಿತಿಗಳನ್ನು ಕೊಡಲು ಮೀನಾಮೇಷ ಎಣಿಸುತ್ತಿದ್ದಾರೆ!

ಬಹುಶಃ ಶೆಡೋಳ ಗ್ರಾಮ ಪಂಚಾಯಿತಿಯಲ್ಲಿ ಅಕ್ರಮ, ಭ್ರಷ್ಟಾಚಾರ ನಡೆದಿರಬಹುದು. ಆ ಮಾಹಿತಿ ಹೊರ ಪ್ರಪಂಚಕ್ಕೆ ಗೊತ್ತಾಗುತ್ತದೆ ಅನ್ನುವುದರಿಂದಲೇ ಮಾಹಿತಿಗಳನ್ನು ಕೊಡದೆ ಸತಾಯಿಸುತ್ತಿದ್ದಾರೆ ಅನ್ನುವ ಅನುಮಾನ ದಟ್ಟವಾಗುತ್ತಿದೆ.



ಶೆಡೋಳ ಪಂಚಾಯಿತಿ ಪಿಡಿಒ, ಕಾರ್ಯದರ್ಶಿ ಮಾಹಿತಿ ಹಕ್ಕು ಕಾಯ್ದೆಗೆ ಅವಮಾನ ಮಾಡಿದ್ದಾರೆ. ಇನ್ನು ಇಲ್ಲಿನ ಅಧಿಕಾರಿಶಾಹಿಗಳನ್ನು ಹೇಳೋರು, ಕೇಳೋರು ಇಲ್ಲದಂತಾಗಿದೆ. ಬೀದರ್ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ. ಗಿರೀಶ್ ಬದೋಲೆ ಈ ಕೂಡಲೇ ಶೆಡೋಳ ಗ್ರಾಮಪಂಚಾಯಿತಿಯಲ್ಲಿನ ಅಕ್ರಮಗಳ ಬಗ್ಗೆ ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಸಬೇಕು ಎನ್ನುತ್ತಿದ್ದಾರೆ ಪಂಚಾಯಿತಿ ವ್ಯಾಪ್ತಿಯ ಜನ.

ಬೀದರ್ ಕೋಟೆ ಕನ್ನಡ ವಾರಪತ್ರಿಕೆ ಬೀದರ್ ಜಿಲ್ಲಾ ವರದಿಗಾರರಾದ ಸಿ.ಪಿ.ಕಾನಡೆ ಅವರು ದಿನಾಂಕ: 28–10–2025 ರಂದು ಶೆಡೋಳ ಪಂಚಾಯಿತಿ ನೇರವಾಗಿ ಮಾಹಿತಿ ಕೇಳದೆ ಬದಲಾಗಿ ಬೀದರ್ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿಗಳ ಮೂಲಕ ಮಾಹಿತಿ ಹಕ್ಕು ಕಾಯ್ದೆ ಅಡಿ ಮಾಹಿತಿ ಕೇಳಿರುತ್ತಾರೆ.

ಅವರು ಬೀದರ್ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿಗಳ ಬಳಿ ಕೇಳಿದ ಮಾಹಿತಿ ಈ ರೀತಿ ಇರುತ್ತದೆ. ಹುಮನಾಬಾದ ತಾಲ್ಲೂಕಿನ ಶೆಡೋಳ ಗ್ರಾಮ ಪಂಚಾಯಿತಿ ಕೇಂದ್ರಕ್ಕೆ 15ನೇ ಹಣಕಾಸು ಯೋಜನೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ (ದಿನಾಂಕ: 01–05–2022 ರಿಂದ ದಿನಾಂಕ: 23–10–2025 ರವರೆಗೆ) ಬಂದಿರುವ ಪ್ರತಿ ಕಂತಿನ ಅನುದಾನದ ಕ್ರಿಯಾ ಯೋಜನೆಗಳು, ಅಳತೆ ಪುಸ್ತಕ, ಬ್ಯಾಂಕ್ ಸ್ಟೇಟ್ಮೆಂಟ್ ದೃಢೀಕರಿಸಿ ಕೊಡುವುದು.

ಉಪ ಕಾರ್ಯದರ್ಶಿಗಳು ಅವರು ಕೇಳಿರುವ ಮಾಹಿತಿ ಒದಗಿಸಿ ಎಂದು ಪಂಚಾಯಿತಿಯವರಿಗೆ ಪತ್ರ ಬರೆದು ಸೂಚಿಸಿದ್ದಾರೆ. ಆದರೆ ಅವರ ಮಾತಿಗೂ ಮನ್ನಣೆ ನೀಡದೆ ಪಂಚಾಯಿತಿಯಿಂದ ಯಾವುದೇ ರೀತಿಯ ಮಾಹಿತಿಯನ್ನು ಸಹ ಸಿ. ಪಿ ಕಾನಡೆ ಅವರಿಗೆ ನೀಡುವುದಿಲ್ಲ. ಪತ್ರಕರ್ತರಿಗೆ ಮಾಹಿತಿ ನೀಡದ ಇವರು ಇನ್ನು ಜನಸಾಮಾನ್ಯರಿಗೆ ಯಾವ ಮಟ್ಟಿಗೆ ಮಾಹಿತಿ ನೀಡುತ್ತಾರೆಯೋ ಹೇಳಿ?

ಹೀಗಿರುವಾಗ ಸಿಇಓ ಗಿರೀಶ್ ಬದೋಲೆ ಅವರು ಖಡಕ್ ಆಗಬೇಕು, ದಕ್ಷತೆಯಿಂದ ಯಾವ ಅಧಿಕಾರಿಗಳು ಮಾತು ಕೇಳುತ್ತಿಲ್ಲವೋ, ಅವ್ಯವಹಾರದಲ್ಲಿ ಅಕ್ರಮದಲ್ಲಿ ಭಾಗಿಯಾಗಿದ್ದಾರೋ ಅಂತಹ ಅಧಿಕಾರಿಗಳ ವಿರುದ್ಧ ಮುಲಾಜಿಲ್ಲದ ಶಿಸ್ತುಕ್ರಮ ಕೈಗೊಳ್ಳಬೇಕು.

ಈಗಾಗಲೇ ಬೀದರ್ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಭ್ರಷ್ಟಾಚಾರ ಹಾಗೂ ಅಕ್ರಮ ಅನ್ನುವುದು ಸಾಕಷ್ಟು ದೊಡ್ಡ ಮಟ್ಟದಲ್ಲಿ ನಡೆಯುತ್ತಿದೆ. ಅದನ್ನು ತಡೆಯುವಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರು ಮುಂದಾಗಬೇಕು.

---

ಹುಮನಾಬಾದ್ ತಾಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿಯಾಗಿ ದೀಪಿಕಾ ನಾಯ್ಕರ್ ಇದ್ದಾರೆ. ಇವರು ಅದ್ಯಾವ ಮಟ್ಟಿಗೆ ಕೆಲಸ ಮಾಡುತ್ತಿದ್ದಾರೋ ಗೊತ್ತಿಲ್ಲ. ಇವರ ಕೈ ಕೆಳಗೆ ಬರುವ ಗ್ರಾಮ ಪಂಚಾಯಿತಿಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಹೇಳಿದ ಮಾತು ಕೇಳುತ್ತಿಲ್ಲ, ಮಾಹಿತಿಯನ್ನು ಒದಗಿಸುತ್ತಿಲ್ಲ. ಹೀಗಿರುವಾಗ ಅವರ ಮೇಲೆ ಶಿಸ್ತುಕ್ರಮ ಕೈಗೊಂಡು ಕಾನೂನು ರೀತಿಯ ಶಿಕ್ಷೆ ನೀಡುವುದು ಬಿಟ್ಟು ಅವರ ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ ಅನ್ನುವ ಅನುಮಾನಗಳನ್ನು ತಾಲೂಕಿನ ಜನ ವ್ಯಕ್ತಪಡಿಸುತ್ತಾರೆ

### ಶಾಸಕ ಸಿದ್ದುಪಾಟೀಲ್ ಗಮನಿಸಲಿ..

ಹುಮನಾಬಾದ್ ವಿಧಾನಸಭಾ ಕ್ಷೇತ್ರದ ಶಾಸಕರಾದ ಸಿದ್ದು ಪಾಟೀಲ್ ಅವರು ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಯ ಬೇಜವಾಬ್ದಾರಿತನ, ತಾಲೂಕಿನ ಗ್ರಾಮ ಪಂಚಾಯಿತಿಗಳ ಪಿಡಿಒ ಮತ್ತು ಕಾರ್ಯದರ್ಶಿಗಳ ಸೋಂಬೇರಿತನ ಹಾಗೂ ಮಾಹಿತಿ ಒದಗಿಸದೆ ತಾರತಮ್ಯ ಮಾಡುತ್ತಿರುವುದನ್ನು ಗಂಭೀರವಾಗಿ ತೆಗೆದುಕೊಂಡು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಮ್ಮುಖದಲ್ಲಿ ಸಭೆ ನಡೆಸಿ, ತಪ್ಪಿತಸ್ಥರಿಗೆ ಶಿಕ್ಷೆ ಕೊಡುವ ಹಾಗೂ ಮಾಹಿತಿ ನೀಡಿದ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ ಗಮನ ಹರಿಸಬೇಕಿದೆ.

ಶಾಸಕರು ಈ ಬಗ್ಗೆ ಎಚ್ಚರಿಕೆ ವಹಿಸಿದೆ ಹೋದರೆ ಮುಂದಿನ ದಿನಗಳಲ್ಲಿ ಈ ಅಧಿಕಾರಿಗಳಿಂದಲೇ ನಿಮಗೆ ಕೆಟ್ಟ ಹೆಸರು ಖಂಡಿತ ಅನ್ನುತ್ತಾರೆ ಹುಮಾನಾಬಾದ್ ಕ್ಷೇತ್ರದ ಜನ.

# ಮಾಹಿತಿ ಕೇಳಿದರೆ ಮಾಹಿತಿ ನೀಡದ ಭಾಲ್ಕಿ ತಾಲ್ಲೂಕಿನ ಕೋಸಂ ಗ್ರಾ.ಪಂ!?

ಮಾಹಿತಿ ಹಕ್ಕು ಕಾಯಿದೆ–2005 ಎಂಬುದು ಭಾರತದ ಸಂಸತ್ತಿನ ಒಂದು ಕಾಯಿದೆಯಾಗಿದೆ. ಇದು ಭಾರತದಲ್ಲಿ ಮಾಹಿತಿಯ ಸ್ವಾತಂತ್ರ್ಯದ ಶಾಸನದ ಒಂದು ರಾಷ್ಟ್ರೀಯ ಮಟ್ಟದ ಕಾರ್ಯಗತಗೊಳಿಸುವಿಕೆಯಾಗಿದ್ದು, "ಮಾಹಿತಿ ಹಕ್ಕಿನ ಕಾರ್ಯಸಾಧ್ಯ ಆಡಳಿತ ಪದ್ಧತಿಯನ್ನು ನಾಗರಿಕರಿಗಾಗಿ ಸಜ್ಜುಗೊಳಿಸುವುದಕ್ಕೆ" ಸಂಬಂಧಿಸಿದ ಉದ್ದೇಶವು ಇದರ ಹಿಂದೆ ಅಡಗಿದೆ. ಕಾಯಿದೆಯ ನಿಬಂಧನೆಗಳ ಅಡಿಯಲ್ಲಿ, ಯಾವುದೇ ನಾಗರಿಕನು "ಸಾರ್ವಜನಿಕ ಪ್ರಾಧಿಕಾರ"ವೊಂದರಿಂದ ಮಾಹಿತಿಗಾಗಿ ಮನವಿ ಮಾಡಿಕೊಳ್ಳಬಹುದು.



ನಾಗರಿಕರುಗಳಿಗಾಗಿ ಯಾವುದೇ ಸಾರ್ವಜನಿಕ ಪ್ರಾಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಪಾರದರ್ಶಕತೆ ಹಾಗೂ ಉತ್ತರದಾಯಿತ್ವವನ್ನು ಪ್ರೋತ್ಸಾಹಿಸುವುದಕ್ಕಾಗಿ, ಸಾರ್ವಜನಿಕ ಪ್ರಾಧಿಕಾರಗಳ ಅಡಿಯಲ್ಲಿನ ಮಾಹಿತಿಯನ್ನು ಸುಲಭವಾಗಿ ಪಡೆಯುವುದನ್ನು ಪ್ರೋತ್ಸಾಹಿಸುವ ಉದ್ದೇಶದಿಂದ, ನಾಗರಿಕರಿಗೆ ಮಾಹಿತಿಗಾಗಿ ಹಕ್ಕಿನ ಕಾರ್ಯತ: ಪ್ರಚಲಿತ ಪದ್ಧತಿಯನ್ನು ಸ್ಥಾಪಿಸುವ ಉದ್ದೇಶದಿಂದ "ಮಾಹಿತಿಗಾಗಿ ಹಕ್ಕು ಅಧಿನಿಯಮ 2005"ನ್ನು ಭಾರತ ಸರ್ಕಾರವು ಕಾಯಿದೆಯ ಮೂಲಕ ಜಾರಿಗೆ ತಂದಿತು.

ಯಾವುದೇ ಸಾರ್ವಜನಿಕ ಪ್ರಾಧಿಕಾರದಿಂದ ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಮಾಹಿತಿಯನ್ನು ತಿಳಿದುಕೊಳ್ಳುವಲ್ಲಿ/ಪಡೆದುಕೊಳ್ಳುವಲ್ಲಿ ಮಾಹಿತಿಗಾಗಿ ಹಕ್ಕು ಅನುವು ಮಾಡುತ್ತದೆ ಹಾಗೂ ಇದು ಕಾಮಗಾರಿಗಳು/ಕೆಲಸಕಾರ್ಯಗಳು, ದಾಖಲೆಗಳು, ಟಿಪ್ಪಣಿಗಳನ್ನು ತೆಗೆದುಕೊಂಡಿರುವುದು, ಪ್ರತಿಗಳು ಅಥವಾ ದಾಖಲೆ/ದಸ್ತಾವೇಜುಗಳ ಪ್ರಮಾಣೀಕೃತ ಪ್ರತಿಗಳು ಹಾಗೂ ಸಾಮಗ್ರಿಗಳ ಪ್ರಮಾಣೀಕೃತ ಮಾದರಿಗಳ ಪರಿಶೀಲನೆ ಹಾಗೂ ವಿದ್ಯುನ್ಮಾನೀಯ ಮಾದರಿಯಲ್ಲಿ ಸಂಗ್ರಹಿಸಲ್ಪಟ್ಟಿರುವ ಮಾಹಿತಿಯನ್ನು ಪಡೆದುಕೊಳ್ಳುವುದು, ಇವುಗಳನ್ನೂ ಒಳಗೊಂಡಿದೆ.

ಯಾವುದೇ ನಾಗರಿಕರು, ಲಿಖಿತ ರೂಪದಲ್ಲಿ ಅಥವಾ ವಿದ್ಯುನ್ಮಾನೀಯವಾಗಿ ಆಂಗ್ಲ /ಹಿಂದಿ/ಪ್ರಾದೇಶಿಕ ಸರ್ಕಾರಿ/ಅಧಿಕೃತ ಆಡಳಿತ ಭಾಷೆಯಲ್ಲಿ ನಿರ್ದಿಷ್ಟ ದರದ ಶುಲ್ಕಗಳನ್ನು ಪಾವತಿಸುವುದರೊಂದಿಗೆ ಅರ್ಜಿಯನ್ನು ಸಲ್ಲಿಸುವ ಮೂಲಕ ಮಾಹಿತಿಗಾಗಿ ಕೋರಿಕೆಯನ್ನು ಸಲ್ಲಿಸಬಹುದು

ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರವೂ ವಿವಿಧ ಹಂತಗಳಲ್ಲಿ ಒರ್ವ ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನು ನಾಮ ನಿರ್ದೇಶನ ಮಾಡುವುದು. ಆ ರೀತಿ ನಾಮನಿರ್ದೇಶನಗೊಂಡವರು ಸಾರ್ವಜನಿಕರಿಂದ ಮಾಹಿತಿಗಾಗಿ ಕೋರಿಕೆಗಳನ್ನು ಸ್ವೀಕರಿಸುವರು. ಎಲ್ಲಾ ಆಡಳಿತಾತ್ಮಕ ಘಟಕಗಳು/ಕಚೇರಿಗಳಲ್ಲಿನ ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಸಾರ್ವಜನಿಕರಿಗೆ ಅಗತ್ಯ ಮಾಹಿತಿಯನ್ನು ಒದಗಿಸುವುದಕ್ಕಾಗಿ ವ್ಯವಸ್ಥೆಯನ್ನು ಮಾಡುವರು.

ಮಾಹಿತಿಗಾಗಿ ಸಲ್ಲಿಸಲಾದ ಅರ್ಜಿಗಳಿಗೆ/ಕೋರಿಕೆಗಳಿಗೆ 30 ದಿನಗಳ ಒಳಗೆ ಮಾಹಿತಿಯನ್ನು ಒದಗಿಸುವ ಮೂಲಕ ಅಥವಾ ಕೋರಿಕೆಯನ್ನು ತಿರಸ್ಕರಿಸುವ ಮೂಲಕ ವಿಲೇವಾರಿಗೊಳಿಸತಕ್ಕದ್ದು.

### ಮಾಹಿತಿ ಕೇಳಿದರೆ ಮಾಹಿತಿ ನೀಡರು..!?

ಗ್ರಾಮೀಣ ಭಾಗದಲ್ಲಿ ಮೂಲಭೂತ ಸಮಸ್ಯೆಗಳನ್ನು ನಿವಾರಿಸಿ, ಅಭಿವೃದ್ಧಿಯ ಭಾಷ್ಯ ಬರೆಯುವ ಉದ್ದೇಶದಿಂದ ರಚನೆಯಾದ ಗ್ರಾಮ ಪಂಚಾಯಿತಿ ಆಡಳಿತದಲ್ಲಿ ಅವ್ಯವಹಾರಗಳು, ವಂಚನೆಗಳು, ಅಕ್ರಮಗಳು ಎಗ್ಗಿಲ್ಲದೆ ನಡೆಯುತ್ತಿವೆ. ಅದರಲ್ಲೂ ಇತ್ತೀಚಿನ ದಿನಗಳಲ್ಲಿ ಗ್ರಾಮ ಪಂಚಾಯಿತಿಗಳಿಗೆ ವಿವಿಧ ಹಂತಗಳಲ್ಲಿ ಆದಾಯ ಹೆಚ್ಚು ಹರಿದು ಬರತೊಡಗಿದಂತೆ ಭ್ರಷ್ಟಾಚಾರ ಮಿತಿ ಮೀರಿದೆ. ಅಲ್ಲಿನ ಆಡಳಿತ ವರ್ಗ, ಗ್ರಾಮ ಪಂಚಾಯಿತಿ ಜನಪ್ರತಿನಿಧಿಗಳು, ಮೇಲಧಿಕಾರಿಗಳು, ಇಂಜಿನಿಯರ್ ಗಳು ಹಾಗೂ ಗುತ್ತಿಗೆದಾರರು ಇದರಲ್ಲಿ ಪಾಲುದಾರರಾಗಿದ್ದಾರೆ.

ಅಧಿಕಾರ ವಿಕೇಂದ್ರೀಕರಣದ ಮೊದಲ ಸ್ತರವಾದ ಗ್ರಾಮ ಪಂಚಾಯತಿಗಳಲ್ಲಿ ಅಧಿಕಾರಿಗಳು, ಸಿಬ್ಬಂದಿ ವರ್ಗ ಮತ್ತು ಕೆಲ ಜನಪ್ರತಿನಿಧಿಗಳು ಸಖತ್ತಾಗಿ ಉಣ್ಣುತ್ತಾ, ತೆಗುತ್ತಾ, 'ಸಿಕ್ಕಿದ್ದು ಸೀರುಂಡೆ' ಅಂತ ಕಿಸೆ ತುಂಬಿಕೊಳ್ಳುತ್ತಾ ಪಂಚಾಯತಿಗಳನ್ನು ಬರ್ಬಾದ್ ಮಾಡುತ್ತಿದ್ದಾರೆ!

ಪಂಚಾಯತಿಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಹೆಸರಿನಲ್ಲಿ ಸಾಕಷ್ಟು ಅನುದಾನ ಬರುತ್ತದೆ. ಅದನ್ನು ಸದುಪಯೋಗಪಡಿಸಿಕೊಂಡು ಕುಡಿಯುವ ನೀರು, ಬೀದಿ ದೀಪ, ರಸ್ತೆ, ಚರಂಡಿ ಇನ್ನಿತರ ಮೂಲಭೂತ ಸೌಲಭ್ಯಗಳನ್ನು ಪೂರೈಸಬೇಕಾದ ಅಧಿಕಾರಿ ವರ್ಗ ಅನುದಾನದ ಹೆಸರಲ್ಲಿ ಬರುವ ಹಣವನ್ನು ಕಬಳಿಸುತ್ತಾ, ನಕಲಿ ಬಿಲ್ ಮೂಲಕ ವಂಚಿಸುತ್ತಾ, ಅಕ್ರಮವಾಗಿ ಹಣವನ್ನು ಲಪಟಾಯಿಸುತ್ತಿದ್ದಾರೆ ಎಂಬ ಆರೋಪಗಳು ಬೀದರ್ ಜಿಲ್ಲೆಯ ಉದ್ದಕ್ಕೂ ಹಲವು ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ಕೇಳಿ ಬರುತ್ತಿದೆ.

ಪಂಚಾಯಿತಿಗಳಲ್ಲಿ ವಿವಿಧ ಯೋಜನೆಗಳಲ್ಲಿ ಬರುವ ಕೋಟ್ಯಾಂತರ ರೂಪಾಯಿ ಹಣವನ್ನು ಲೂಟಿ ಮಾಡುವುದು ಸಾಮಾನ್ಯವಾಗಿದೆ. ಆದರೆ ಕೇವಲ ಅಮಾನತ್ತು ಮಾಡುತ್ತಾ, ಮತ್ತೆ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಕೆಲಸಗಳಾಗುತ್ತಿವೆ.

ಪಂಚಾಯತಿಗಳ ಅಧಿಕಾರಿಗಳ ಬೇಜವಾಬ್ದಾರಿತನದಿಂದ, ಅಭಿವೃದ್ಧಿ ಕಾರ್ಯಗಳಲ್ಲಿ ಕುಂಠಿತವಾಗಿ ಇಡೀ ರಾಜ್ಯದಲ್ಲಿಯೇ ಪಂಚಾಯತಿಗಳು ಭ್ರಷ್ಟಾಚಾರದಲ್ಲಿ ತುಂಬಿ ಹೋಗಿವೆ.

ಅಕ್ರಮ, ಹಣ ದುರುಪಯೋಗ, ನಕಲಿ ಕಾಮಗಾರಿ, ಭ್ರಷ್ಟಾಚಾರ, ಲಂಚಗುಳಿತನ ಗ್ರಾಮ ಪಂಚಾಯತಿಗಳಲ್ಲಿ ಡೆಂಗ್ಯೂ ಸೋಂಕಿಗಿಂತ ಭಯಾನಕವಾಗಿ ಹರಡಿ ನಿಂತಿದ್ದು, ಸದ್ಯಕ್ಕೆ ವಾಸಿಯಾಗುವ ಯಾವ ಲಕ್ಷಣಗಳು ಕಾಣಿಸುತ್ತಿಲ್ಲ. ಅದಕ್ಕೆ ದೊಡ್ಡ ಶಸ್ತ್ರಚಿಕಿತ್ಸೆ ಆಗಬೇಕಿದೆ.

ಬೀದರ್ ಜಿಲ್ಲೆ ರಾಜ್ಯದ ಗಡಿಯಲ್ಲಿದ್ದು, ಇಲ್ಲಿನ ಗ್ರಾಮ ಪಂಚಾಯಿತಿಗಳಲ್ಲಿ ಇತ್ತೀಚಿನ ದಿನಗಳಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರವೇ ನಡೆಯುತ್ತಿದೆ. ಅದಕ್ಕೊಂದು ಉದಾಹರಣೆ ಭಾಲ್ಕಿ ತಾಲ್ಲೂಕು ಕೋಸಂ ಗ್ರಾಮ ಪಂಚಾಯಿತಿ. ಇಲ್ಲಿ ಕಾಮಗಾರಿಗಳಲ್ಲಿ ಅಕ್ರಮ, ಭ್ರಷ್ಟಾಚಾರ ನಡೆದಿದೆ ಎಂದು ಸ್ಥಳೀಯ ಜನ ಆರೋಪಿಸುತ್ತಿದ್ದಾರೆ.

ಈ ಪಂಚಾಯಿತಿಯಲ್ಲಿ ಕೆಲವು ಮಾಹಿತಿಗಳನ್ನು ಮಾಹಿತಿ ಹಕ್ಕು ಕಾಯ್ದೆಯಡಿ ದಿನಾಂಕ:25/02/2026 ರಂದು ಬೀದರ್ ಕೋಟೆ ವಾರ ಪತ್ರಿಕೆ ವರದಿಗಾರರಾದ ಸಿ.ಪಿ.ಕಾನಡೆ ಅವರು ಕೋಸಂ ಗ್ರಾಮ ಪಂಚಾಯತಿ ಸಾರ್ವಜನಿಕ ಮಾಹಿತಿ ಅಧಿಕಾರಿ ಅವರ ಹತ್ತಿರ ಮಾಹಿತಿ ಕೇಳಿದರು. ಆದರೆ ಇಲ್ಲಿನ ಮಾಹಿತಿ ಹಕ್ಕು ಅಧಿಕಾರಿಯು ಸುಮಾರು ತಿಂಗಳು ಕಳೆದರು ಮಾಹಿತಿಗಳನ್ನು ಕೊಡದೆ ಹೋಗಿದ್ದರು.

ಸಿ.ಪಿ.ಕಾನಡೆ ಅವರು ಕೇಳಿದ ಮಾಹಿತಿ ಈ ರೀತಿ ಇರುತ್ತದೆ. 15ನೇ ಹಣಕಾಸು ಯೋಜನೆ 15–10–2025 ರಿಂದ 25–02–2026 ರ ವರೆಗೆ ಅನುದಾನದ ಕ್ರಿಯಾ ಯೋಜನೆಗಳ ಪ್ರೊಷಿಡಿಂಗ್, ಅಂದಾಜು ಪ್ರತಿ, ಸಿಸಿ ಬಿಲ್ಲಗಳು, ಅಳತೆ ಪುಸ್ತಕದ ಪ್ರತಿ, ಕಾಮಗಾರಿಯ ಜಿಪಿಎಸ್ ಫೋಟೋ, ಬ್ಯಾಂಕ್ ಸ್ಟೇಟ್ ಮೆಂಟ್, ಆಡಿಟ್ ರಿಪೋರ್ಟ್, ಖರ್ಚುವೆಚ್ಚದ ಪ್ರತಿಯೊಂದು ಮಾಹಿತಿ ಧೃಡಿಕರಣದೊಂದಿಗೆ ಒದಗಿಸಿ ಎಂದು.

ಕೋಸಂ ಗ್ರಾಮ ಪಂಚಾಯತಗೆ ಮಾಹಿತಿ ಕೇಳಿ ತಿಂಗಳು ಕಳೆದರು ಯಾವುದೇ ತರಹ ಮಾಹಿತಿ ಅಥವಾ ಹಿಂಬರಹವನ್ನು ನೀಡದೆ ಹೋಗಿದ್ದಾರೆ. ಆದರೆ ಇಲ್ಲಿ ಪತ್ರಿಕೆ ವರದಿಗಾರರಾದ ಸಿ.ಪಿ ಕಾನಡೆ ಅವರು ಮಾಹಿತಿಯನ್ನು ಕೇಳಿದ್ದು ಅಭಿವೃದ್ಧಿ ಅಧಿಕಾರಿ ಅವರ ಹತ್ತಿರವೇ. ಆದರೆ ಅವರು ಮಾಹಿತಿ ಕೊಡಲು ಮೀನಾ ಮೇಷ ಮಾಡಿದಾಗ ಅನಿವಾರ್ಯವಾಗಿ ಭಾಲ್ಕಿ ತಾಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಅವರ ಹತ್ತಿರ ದಿನಾಂಕ: 26–03–2026 ರಂದು ಮೇಲ್ಮನವಿ ಹೋಗಿರುತ್ತಾರೆ.

ಭಾಲ್ಕಿ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿಯಾಗಲಿ, ಕೋಸಂ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯಾಗಲಿ ಕೇಳಿದ ಮಾಹಿತಿಯನ್ನು ಕೊಡಲು ಯಾಕೋ ಬದ್ಧತೆ ತೋರುತ್ತಿಲ್ಲ.

ಮಾಹಿತಿಗಳು ಸೂಕ್ತವಾಗಿ, ಪ್ರಾಮಾಣಿಕವಾಗಿ ಹಾಗೂ ಪಾರದರ್ಶಕವಾಗಿದ್ದರೆ ಯಾವುದೇ ಭಯ ಇಲ್ಲದೆ ನಿಷ್ಪಕ್ಷಪಾತವಾಗಿ ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿಗಳನ್ನು ಕೇಳಿದ 30 ದಿನಗಳ ಒಳಗಾಗಿ ಮಾಹಿತಿದಾರರಿಗೆ ಮಾಹಿತಿ ಹಕ್ಕು ಅಧಿಕಾರಿಯು ಮಾಹಿತಿ ನೀಡಬೇಕಿತ್ತು. ಆದರೆ24–03–2026 ರಂದು ದಿನಾಂಕ ನಮೂದಿಸಿ 25–03–2026 ರಂದು ಹಿಂಬರ ರಜಿಸ್ಟ್ರಿ ಮಾಡಿರುತ್ತಾರೆ ನನಗೆ 28–03–2026 ರಂದು ಮುಟ್ಟುತ್ತೆ ಹಿಂಬರಹಕ್ಕೆ ಒಂದು ತಿಂಗಳು ಬೇಕಾಯತು ಮಾಹಿತಿ ಒದಗಿಸಲು 6ತಿಂಗಳು ಬೇಕಾ?

ಆದರೆ ಕೋಸಂ ಗ್ರಾಮ ಪಂಚಾಯಿತಿಯಲ್ಲಿ ಅಕ್ರಮಗಳು, ಭ್ರಷ್ಟಾಚಾರ ನಡೆದಿರಬಹುದು. ಆ ಮಾಹಿತಿ ಹೊರ ಪ್ರಪಂಚಕ್ಕೆ ಗೊತ್ತಾಗುತ್ತದೆ ಅನ್ನುವ ದುರುದ್ದೇಶದಿಂದ ಇಲ್ಲಿನ ಮಾಹಿತಿ ಹಕ್ಕು ಅಧಿಕಾರಿಯು, ಮಾಹಿತಿಗಳನ್ನು ಕೊಡದೇ ಸತಾಯಿಸುತ್ತಿದ್ದಾರೆ!

### ಕೋಸಂ ಗ್ರಾಮ ಪಂಚಾಯಿತಿಯಲ್ಲಿ ಭ್ರಷ್ಟಾಚಾರ ನಡೆದಿರುವ ಶಂಕೆ ಕಂಡು ಬರುತ್ತಿದೆ.

ಸಿ.ಪಿ.ಕಾನಡೆ ಅವರು ಕೋಸಂ) ಪಂಚಾಯಿತಿ ಪಿಡಿಒ ಅವರ ಬಳಿ ಮಾಹಿತಿ ಕೇಳಲಾಗಿತ್ತು. ಮಾಹಿತಿ ನೀಡಲು ಮುಂದಾಗದೇ ಮಾಹಿತಿ ಹಕ್ಕು ಕಾಯ್ದೆಗೆ ಅವಮಾನ ಮಾಡಿದ್ದಾರೆ.

ಇದೆಲ್ಲಾ ಕಂಡಾಗ ಇಲ್ಲಿನ ಅಧಿಕಾರಿಶಾಹಿಗಳನ್ನು ಹೇಳೋರು, ಕೇಳೋರು ಇಲ್ಲದಂತಾಗಿದೆ. ಬೀದರ್ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಡಾ. ಗಿರೀಶ್ ಬದೋಲೆ ಅವರು ಈಗಾಗಲೇ ತಮ್ಮ ದಕ್ಷ ಆಡಳಿತ ಹಾಗೂ ಪಾರದರ್ಶಕ ಆಡಳಿತದಿಂದ ಹೆಸರಾಗಿದ್ದಾರೆ.

ಹಲವು ಗ್ರಾಮ ಪಂಚಾಯಿತಿಗಳ ಭ್ರಷ್ಟ ಅಧಿಕಾರಿಗಳ ಹೆಡೆಮುರಿ ಕಟ್ಟುವ ಕೆಲಸ ಮಾಡುತ್ತಿದ್ದಾರೆ. ಅದರಂತೆ ಈ ಕೂಡಲೇ ಕೋಸಂ ಗ್ರಾಮ ಪಂಚಾಯಿತಿಯಲ್ಲಿನ ಅಕ್ರಮ, ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಸಬೇಕು.

## ಸಿಇಓ ಅವರು ಕಾನೂನು ಕ್ರಮ ಕೈಗೊಳ್ಳಲಿ...

ಮಾಹಿತಿ ಕೇಳಿ ಅರ್ಜಿ ಸಲ್ಲಿಸಿ ತಿಂಗಳು ಕಳೆದರೂ ಅವರಿಗೆ ಸೂಕ್ತ ಮಾಹಿತಿಯನ್ನು ಒದಗಿಸದೆ ಇರುವ ಕೋಸಂ ಪಂಚಾಯಿತಿಯಲ್ಲಿ ಭ್ರಷ್ಟಾಚಾರ, ಅಕ್ರಮ ನಡೆದಿರುವ ಸಂಶಯ ಎದ್ದು ಕಾಣುತ್ತದೆ.

ಪತ್ರಿಕಾ ವರದಿಗಾರರೇ ಮಾಹಿತಿ ಕೇಳಿದರು ನೀಡದ ಕೋಸಂ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸಾಮಾನ್ಯ ಜನರು ಮಾಹಿತಿ ಕೇಳಿದರೆ ನೀಡುತ್ತಾರೆಯೇ ಅನ್ನುವ ಅನುಮಾನ ಮೂಡುತ್ತದೆ.


ನಿಯಮಗಳ ಪ್ರಕಾರ 30 ದಿನಗಳ ಒಳಗಾಗಿ ಮಾಹಿತಿ ಒದಗಿಸಬೇಕು ಅಥವಾ ಹಿಂಬರಹ ನೀಡಬೇಕು. ಯಾವುದನ್ನು ಇಲ್ಲಿನ ಮಾಹಿತಿ ಅಧಿಕಾರಿ ಮಾಡಿಲ್ಲ. ಈಗಿರುವಾಗ ಬೀದರ್ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಗಿರೀಶ್ ಬದೋಲೆ ಅವರು ಮಾಹಿತಿ ನೀಡದ ಅಧಿಕಾರಿಯ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಬೇಕು. ಜೊತೆಗೆ ಈ ಮಾಹಿತಿಯನ್ನು ಒದಗಿಸಲು ಮೀನಾ ಮೇಷ ಎಣಿಸುತ್ತಿರುವ ಸಂಬಂಧ ಇಲಾಖೆಯಿಂದ ತನಿಖೆ ಮಾಡಿಸಬೇಕು. ಆಗ ಭ್ರಷ್ಟಾಚಾರ ಮತ್ತು ಅಕ್ರಮದ ಬಂಡವಾಳ ಬಯಲಾಗುತ್ತದೆ.

ಹಿರಿಯ ಅಧಿಕಾರಿಗಳು ಆದವರು ಯಾವುದೇ ರೀತಿಯ ಕ್ರಮ ಕೈಗೊಳ್ಳದೆ ಹೋದರೆ, ಗ್ರಾಮ ಪಂಚಾಯಿತಿಗಳಲ್ಲಿನ ಅಧಿಕಾರಿಗಳನ್ನು ಹೇಳುವವರು ಕೇಳುವವರು ಇಲ್ಲದಂತಾಗುತ್ತದೆ ಹಾಗೂ ಭ್ರಷ್ಟಾಚಾರಕ್ಕೆ ಆಸ್ಪದ ಕೊಟ್ಟಂತಾಗುತ್ತದೆ. ಆದ್ದರಿಂದ ಈ ಕೂಡಲೇ ಕ್ರಮ ಕೈಗೊಳ್ಳಬೇಕಾಗಿದೆ.


ಕೋಸಂ ಗ್ರಾಮ ಪಂಚಾಯಿತಿಯಲ್ಲಿ ಸಾಕಷ್ಟು ಅಕ್ರಮಗಳು ನಡೆದಿರುವ ಆರೋಪಗಳು ಸಾರ್ವಜನಿಕವಾಗಿ ಕೇಳಿಬಂದಿವೆ.

# ಬೀದರ್ ದುರ್ವಾಸನೆ ಬೀರುತ್ತಿದೆ ಮಹಾನಗರ ಪಾಲಿಕೆ!

ಬೀದರ್ ನಗರ ಪಾಲಿಕೆ ಅದ್ಯಾವ ಘಳಿಗೆಯಲ್ಲಿ ಮಹಾನಗರ ಪಾಲಿಕೆ ಆಗಿ ವಿಸ್ತಾರಗೊಂಡಿತೋ, ಇಲ್ಲಿನ ಸಮಸ್ಯೆಗಳು ಕೂಡ ಅಷ್ಟೇ ಪ್ರಮಾಣದಲ್ಲಿ ಹೆಚ್ಚಾದವು. ಇಲ್ಲಿನ ಆಡಳಿತ ವ್ಯವಸ್ಥೆ ಕೂಡ ಸಂಪೂರ್ಣ ಕುಸಿದು ಹೋಗಿದೆ. ಅಭಿವೃದ್ಧಿ ಅನ್ನುವುದು ಮರೀಚಿಕೆಯಾಗಿದೆ. ಒಳಚರಂಡಿ, ಬೀದಿ ದೀಪಗಳು, ರಸ್ತೆ, ಕಸ ವಿಲೇವಾರಿ ಹೀಗೆ ಅಗತ್ಯ ಮೂಲಭೂತ ಸಮಸ್ಯೆಗಳು ತಾಂಡವವಾಡುತ್ತಿದೆ. ಇಲ್ಲಿನ ಪೌರಾಯುಕ್ತ ಮುಕುಲ್ ಜೈನ್ ಸಾಹೇಬರು ಯುದ್ಧ ಸೋತವರಂತೆ ಕೈ ಕಟ್ಟಿ ಕೂತಿದ್ದಾರೆ.



ಈ ಬಗ್ಗೆ ಅವರು ಪತ್ರಿಕೆಯವರಿಗೆ ಮಾಹಿತಿ ನೀಡಿದಾಗ, ಸಂಪಾದಕರಾದ ಅನಿಲ್ ಕುಮಾರ್ ಕಮಠಾಣೆ ಅವರು ರಾಜಕುಮಾರ ಕಮಠಾಣೆ ಅವರನ್ನು ಕರೆದುಕೊಂಡು ನೇರವಾಗಿ ಮಹಾನಗರ ಪಾಲಿಕೆ ಆಯುಕ್ತರಾದ ಮುಕುಲ್ ಜೈನ್ ಅವರನ್ನು ಭೇಟಿ ಮಾಡಿ, ಅವರಿಗೆ ದೂರು ಹಾಗೂ ಮನವಿ ಪತ್ರವನ್ನು ಸಲ್ಲಿಸಲಾಯಿತು.



ಮಹಾನಗರ ಪಾಲಿಕೆ ಕಮಿಷನರ್ ಮುಕುಲ್ ಜೈನ್ ಅವರಷ್ಟೇ ಅಲ್ಲದೆ, ಮಹಾನಗರ ಪಾಲಿಕೆಯ ಎಇಇ ಅವರನ್ನು ಭೇಟಿ ಮಾಡಿ ಅವರಿಗೂ ಸಹ ಮನವಿ ನೀಡಲಾಯಿತು. ಅವರು ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ, ಮತ್ತೊಬ್ಬರಿಗೆ ಬರುತ್ತದೆ. ನಾನು ಅವರ ಗಮನಕ್ಕೆ ತಂದು ಪರಿಹಾರ ಮಾಡಿಕೊಡುತ್ತೇನೆ ಎಂದು ಹೇಳಿದರು.

ಈ ನಾಲೆ ಅಭಿವೃದ್ಧಿ ಅಥವಾ ಒಳಚರಂಡಿ ನಿರ್ವಹಣೆ

**ಬೀದರ್ ನಗರವನ್ನು ಪ್ರತಿನಿಧಿಸುವ ರಾಜ್ಯ ಸರ್ಕಾರದಲ್ಲಿ ಪೌರಾಡಳಿತ ಇಲಾಖೆ ಸಚಿವರು ಆಗಿರುವ ವ್ಯಾಪ್ತಿಯಲ್ಲಿಯೇ ಒಳಚರಂಡಿಗಳು ಕಟ್ಟಿಕೊಂಡು ದುರ್ವಾಸನೆ ಬೀರುವ ಮಟ್ಟಿಗೆ ಬಂದಿವೆ. ಕಮಿಷನರ್ ಅವರಿಗೆ ಭೇಟಿ ಮಾಡಿ ದೂರು ಕೊಟ್ಟರು ಪ್ರಯೋಜನ ಆಗುತ್ತಿಲ್ಲ. ಇಲಿ ಕೆಲಸ ಮಾಡುವ ಎಇಇ ಹಾಗೂ ಇತರ ಅಧಿಕಾರಿ ಮತ್ತು ಸಿಬ್ಬಂದಿಗಳು ಹೇಳುವವರು ಕೇಳುವವರಿಲ್ಲದೆ ಹೋಗಿದ್ದಾರೆ. ಒಬ್ಬರ ಮೇಲೆ ಒಬ್ಬರು ಹೇಳಿಕೊಂಡು ಕೆಲಸ ತಪ್ಪಿಸಿಕೊಂಡು ಜನರಿಗೆ ಸಮಸ್ಯೆ ತಂದೊಡ್ಡಿದ್ದಾರೆ. ಬೀದರ್ ಮಹಾನಗರ ಪಾಲಿಕೆಯಲ್ಲಿ ಆಡಳಿತ ಹಳಿ ತಪ್ಪಿದೆ. ಕಮಿಷನರ್ ಮುಕುಲ್ ಜೈನ್ ಕೂಡ ಕೆಲಸ ಮಾಡದೆ ಕೈ ಕಟ್ಟಿ ಕೂತಿದ್ದಾರೆ. ಈಗಿರುವಾಗ ಒಬ್ಬ ಸಚಿವರಾಗಿ ನಗರಾಡಳಿತ ಇಲಾಖೆಯ ಗಮನಕ್ಕೆ ತಂದು, ಇದನ್ನೆಲ್ಲ ಸರಿಪಡಿಸಿ ಮಹಾನಗರ ಪಾಲಿಕೆಯ ಜನ ನೆಮ್ಮದಿಯಿಂದ ಜೀವಿಸುವಂತೆ ಮಾಡಲಿ ಎನ್ನುತ್ತಿದ್ದಾರೆ.**

ಬೀದರ್ ಮಹಾನಗರ ಪಾಲಿಕೆ ಆಯುಕ್ತರಾಗಿ ಬಂದ ಕಾಲದಲ್ಲಿ ಅಗಸ ಹೊಸದರಲ್ಲಿ ಎತ್ತಿ ಎತ್ತಿ ಒಗೆದ ಅನ್ನುವ ರೀತಿಯಲ್ಲಿ ಕೆಲಸ ಮಾಡಿದರು. ಈಗ ಕೈಲಾಗದೆ ಹುದ್ದೆ, ಕಾರು, ಬಂಗಲೆ ಅನುಭವಿಸಿಕೊಂಡು ಕೂತಿದ್ದಾರೆ ಹೊರತು ನಯಾ ಪೈಸದ ಅಭಿವೃದ್ಧಿ ಮಾಡಿದ್ದು ಕಂಡಿಲ್ಲ.




ಮಹಾನಗರ ಪಾಲಿಕೆಯಲ್ಲಿ ಕೆಲಸ ಮಾಡುವ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಹೇಳುವವರು ಕೇಳುವವರು ಇಲ್ಲದೆ ತಮಗೆ ಇಷ್ಟ ಬಂದ ರೀತಿಯಲ್ಲಿ ವರ್ತನೆ ಮಾಡುತ್ತಾ ಬಂದಿದ್ದಾರೆ. ಸಮಸ್ಯೆಗಳನ್ನು ನಿವಾರಿಸುವ ಬದಲು ಅಧಿಕಾರಿಗಳು, ತಿಂಗಳು ಸಂಬಳ ಎಣಿಸಿಕೊಂಡು ಜೇಬಿಗೆ ಇಟ್ಟುಕೊಂಡು ಬಂದಪುಟ್ಟ ಹೋದ ಪುಟ್ಟ ಅಂತ ಬಂದು ಹೋಗುತ್ತಿದ್ದಾರೆ ಅವರದು ಜನರ ಸಮಸ್ಯೆಗಳನ್ನು ಆಲಿಸಿ ಅದನ್ನು ನಿವಾರಿಸುವ ಕೆಲಸವನ್ನು ಮಾಡುತ್ತಿಲ್ಲ ಎಂದು ಬೀದರ್ ನಗರದ ಜನರೇ ಆರೋಪ ಮಾಡುತ್ತಿದ್ದಾರೆ.

ಬೇಜವಾಬ್ದಾರಿ ಅಧಿಕಾರಿಗಳು...!

ಬೀದರ್ ಮಹಾನಗರ ಪಾಲಿಕೆಯ ಪೌರಾಯುಕ್ತ ಮುಕುಲ್ ಜೈನ್ ಮತ್ತು ಆತನ ಕೈಕೆಳಗೆ ಕೆಲಸ ಮಾಡುವ ಅಧಿಕಾರಿಗಳು ಎಷ್ಟರಮಟ್ಟಿಗೆ ಬದ್ಧತೆ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿದ್ದಾರೆ ಅನ್ನುವುದಕ್ಕೆ ನಿದರ್ಶನ ಇಲ್ಲಿದೆ ನೋಡಿ.

ಬೀದರ ನಗರದ ಹಾರೂರಗೇರಿ ಕಮಾನ, ಅಂಬೇಡ್ಕರ ಕಾಲೋನಿಯ ವೈಜಿನಾಥ ಕಮಠಾಣೆ ಮನೆ ಕ್ರಾಸ್ ಹತ್ತಿರ ಒಳಚರಂಡಿ ಕಟ್ಟಿಕೊಂಡು ನೀರು ಮುಂದೆ ಸಾಗದೆ ವಾಸನೆ ಬೀರುತ್ತಾ, ಸೊಳ್ಳೆಗಳ ಉತ್ಪಾದನೆಯ ತಾಣವಾಗಿ ಮಾರ್ಪಟ್ಟು, ದಾರಿಹೋಕರಿಗೆ ಸೊಳ್ಳೆಗಳು ಕಚ್ಚುತ್ತಾ, ಜನಸಾಮಾನ್ಯರು ಸಮಸ್ಯೆ ಅನುಭವಿಸುವಂತಾಗಿದೆ.

ಚರಂಡಿ ನಾಲೆ ಕಟ್ಟಿಕೊಂಡು ದುರ್ವಾಸನೆ ಬೀರುತ್ತಾ, ಜನರಿಗೆ ತೊಂದರೆ ಆಗಿರುವ ಬಗ್ಗೆ ಸ್ವತ: ರಾಜಕುಮಾರ ಕಮಠಾಣೆ ಅವರು ಸುಮಾರು ಜುಲೈ 2025 ರಲ್ಲಿ ಪಾಲಿಕೆಗೆ ಹೋಗಿ ದೂರು ನೀಡಿದ್ದಾರೆ. ಆದರೆ ಯಾವುದೇ ಅಧಿಕಾರಿಗಳು ಹೋಗಿ ಪರಿಶೀಲಿಸಿ ಕ್ರಮ ಕೈಗೊಳ್ಳುವ ಕನಿಷ್ಠ ಸೌಜನ್ಯ ತೋರಿಲ್ಲ.

ಸಂಪಾದಕರೇ ಸಾರ್ವಜನಿಕರ ಜೊತೆ ಹೋಗಿ ನೇರವಾಗಿ ಆಯುಕ್ತರನ್ನೆ ಭೇಟಿ ಮಾಡಿ, ಸಮಸ್ಯೆಯನ್ನು ಹೇಳಿ ಪರಿಹರಿಸಿಕೊಡಲು ಮನವಿ ಮಾಡಿದರು. ಆ ವೇಳೆ ಮನವಿ ಸ್ವೀಕರಿಸಿದ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ನಾನು ಹೇಳಿ ಅದನ್ನು ಪರಿಹರಿಸಿಕೊಡುತ್ತೇನೆ ಎಂದು ಭರವಸೆ ಹೇಳಿ ಕಳುಹಿಸಿದರು.

ಆದರೆ ಅವರು ಹೇಳಿದ ಭರವಸೆ ಸುಳ್ಳು ಅನ್ನುವುದು ಈಗ ತಿಳಿದಿದೆ. ಯಾಕೆಂದರೆ ಯಾವುದೇ ಅಧಿಕಾರಿಯು ಬಂದು ಭೇಟಿ ನೀಡಿ ಸಮಸ್ಯೆಯನ್ನು ಪರಿಹರಿಸುವ ಕೆಲಸ ಮಾಡಿಲ್ಲ.





ಮಹಾನಗರ ಪಾಲಿಕೆಯ ಎಇಇ ಅವರ ಸೂಪರ್ತಿಗೆ ಬರುತ್ತದಂತೆ. ಅದರಲ್ಲಿ ಒಬ್ಬ ಎಇಇ ನಾಗನಾಥ ಬಿರಾದಾರ, ಮತ್ತೊಬ್ಬರು ರವೀಂದ್ರ ಕಾಂಬಳೆ. ಆದರೆ ಇಬ್ಬರೂ ಸಹ ಬಂದು ಪರಿಶೀಲಿಸಿ, ನಾಲೆಯನ್ನು ಸಚಿ ಮಾಡಿಸುವ ಕೆಲಸ ಮಾಡಿಲ್ಲ. ದುರಂತ ಎಂದರೆ ಅವರ ಮೇಲೆ ಇವರು ಇವರ ಮೇಲೆ ಅವರು ಹೇಳಿಕೊಂಡು ಕಾಲಹರಣ ಮಾಡುತ್ತಿದ್ದಾರೆ!

ಇತ್ತ ಇದನ್ನೆಲ್ಲ ಕಾಲಕಾಲಕ್ಕೆ ಶುಚಿ ಮಾಡಿಸಬೇಕಾದ ಇನ್ಸ್ಪೆಕ್ಟರ್ ನಾಗೇಶ್ ಎಂಬಾತ ಕೂಡ ಯಾವುದೇ ರೀತಿಯ ಶುಚಿ ಮಾಡಿಸದೇ ನಿರ್ಲಕ್ಷ ತೋರಿಸಿದ್ದಾನೆ.

ಮಹಾನಗರ ಪಾಲಿಕೆಗೆ ನೇರವಾಗಿ ಭೇಟಿ ನೀಡಿ, ಚರಂಡಿ ಕಟ್ಟಿಕೊಂಡಿದೆ ಸೊಳ್ಳೆಗಳು ಸೋಬಾನೆ ಹೇಳುತ್ತವೆ, ಪಕ್ಕದಲ್ಲಿ ಮೂಗು ಮುಚ್ಚಿಕೊಂಡು ಓಡಾಡಬೇಕಾದ ಪರಿಸ್ಥಿತಿ ಇದೆ. ಅಕ್ಕ ಪಕ್ಕದ ಮನೆಗಳಿಗೆ ಗಾಳಿ ಬೀಸಿದರೆ ಗಬ್ಬು ಅನ್ನುವ ವಾಸನೆ ಬೀರುತ್ತದೆ. ಊಟ ಮಾಡಲು ಆಗುತ್ತಿಲ್ಲ. ತೊಂದರೆ ತಾಪತ್ರಯ ಮಿತಿಮೀರಿದೆ. ಎಂದು ದೂರು ನೀಡಿದರು ಅದು ಮಹಾನಗರ ಪಾಲಿಕೆಯ ಕಮಿಷನರ್ ಅವರಿಗೆ, ಪತ್ರಿಕೆಯ ಸಂಪಾದಕರು ಹೋಗಿ ದೂರು ನೀಡಿದರು ಅವರ ಜೊತೆಗೆ ಎಇಇ ಅವರುಗಳಿಗೆ ದೂರು ನೀಡಿದರು ಯಾವುದೇ ಪ್ರಯೋಜನ ಆಗಿಲ್ಲ. ಯಾರೂ ಕೂಡ ಕ್ರಮ ಕೈಗೊಳ್ಳುತ್ತಿಲ್ಲ. ಯಾಕೆ ಅಂತ ಗೊತ್ತಾಗುತ್ತಿಲ್ಲ.

ಇನ್ನು ಕಮಿಷನರ್ ಮುಕುಲ್ ಜೈನ್, ಇಬ್ಬರು ಎಇಇ ಗಳಾದ ನಾಗನಾಥ ಬಿರಾದಾರ ರವೀಂದ್ರ ಕಾಂಬಳೆ ಮತ್ತು ಇನ್ಸ್ಪೆಕ್ಟರ್ ನಾಗೇಶ್ ಒಬ್ಬರೂ ಕೂಡ ದೂರವಾಣಿ ಕರೆ ಮಾಡಿದರೆ, ದೂರವಾಣಿ ಕರೆ ಸ್ವೀಕರಿಸುತ್ತಿಲ್ಲ. ಜನರಿಗೆ ಯಾವುದೇ ರೀತಿಯ ಮಾಹಿತಿ ನೀಡುತ್ತಿಲ್ಲ, ರೆಸ್ಪಾನ್ಸ್ ಕೊಡುತ್ತಿಲ್ಲ. ಇವರಿಗೆ ಸರ್ಕಾರದ ಸಂಬಳ ಬರುತ್ತದೆ ಓಡಾಡಲು ಜೀಪು ಇದೆ. ಆದರೆ ಸಾರ್ವಜನಿಕರ ಸಮಸ್ಯೆಗಳು ಅಂತ ಬಂದಾಗ ಅದನ್ನು ಬಗೆಹರಿಸುವ ಕನಿಷ್ಠ

ಪರಿಜ್ಞಾನ ಇಲ್ಲದೆ ಇರುವುದು ನಾಚಿಕೆಗೇಡಿನ ಸಂಗತಿ.

ಮುಕುಲ್ ಜೈನ್ ಬೀದರ್ ಮಹಾನಗರ ಪಾಲಿಕೆ ಕಮಿಷನರ್ ಆಗಿ ಬಂದ ನಂತರ ಸಮಸ್ಯೆಗಳು ಜಾಸ್ತಿಯಾಗಿದೆ ಹೊರತು ಕಡಿಮೆ ಆಗಿಲ್ಲ. ಬೀದರ್ ಮಹಾನಗರ ಜನ ಹೇಳುವ ಒಂದು ಪ್ರಶ್ನೆ ಯಾಕಾಗಿ ಮಹಾನಗರ ಪಾಲಿಕೆ ಆಯಿತೋ, ಇಂದೇ ನಗರ ಪಾಲಿಕೆಯಾಗಿ ಇದ್ದರೆ ಸಾಕಿತ್ತು. ಮಹಾನಗರ ಪಾಲಿಕೆ ಆದಮೇಲೆ ಇಲ್ಲಿರುವ ಅಧಿಕಾರಿಗಳು ಏನು ಮಾಡುತ್ತಿಲ್ಲ. ಬೇಕಾ ಬಿಟ್ಟಿಯಾಗಿ ವರ್ತನೆ ಮಾಡುತ್ತಿದ್ದಾರೆ. ಆಡಳಿತದಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಅದರಲ್ಲೂ ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾಗಿರುವ ಪ್ರದೇಶಗಳನ್ನು ಸಂಪೂರ್ಣವಾಗಿ ಕಡೆಗಣನೆ ಮಾಡಿದ್ದಾರೆ. ಇಂದು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.



ಮುಕುಲ್ ಜೈನ್ ಕೂಡ ಆಡಳಿತದಲ್ಲಿ ವಿಫಲರಾಗಿದ್ದಾರೆ. ಪತ್ರಿಕೆ ಈ ಹಿಂದೆ ಮುಕುಲ್ತೆನವರ ಆಡಳಿತವನ್ನು ಹಾಡಿ ಹೊಗಳಿತ್ತು. ಪತ್ರಿಕೆ ಅಂದು ಹಾಡಿ ಹೊಗಳಿದ್ದನ್ನು ಇವತ್ತು ಪತ್ರಿಕೆಯೇ ಸರಿಪಡಿಸಿಕೊಳ್ಳಬೇಕಾಗಿದೆ. ಯಾಕೆಂದರೆ ಅವರು ಯಾವುದೇ ರೀತಿಯಲ್ಲೂ ಬಿಟ್ಟತೆ ಮತ್ತು ಬದ್ಧತೆಯಿಂದ ಕೆಲಸ ಮಾಡದೆ ಕೈಕಟ್ಟಿ ಕೂತಿದ್ದಾರೆ. ನಿರ್ಲಕ್ಷ್ಯ ತೋರುತ್ತಿದ್ದಾರೆ. ಇದರಿಂದ ಸಂಪೂರ್ಣವಾಗಿ ಬೀದರ್ ಮಹಾನಗರ ಪಾಲಿಕೆ ಆಡಳಿತ ಎಕ್ಕುಟ್ಟಿ ಹೋಗಿದೆ.

### ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರೇ ಗಮನಿಸಿ...

ಬೀದರ್ ಮಹಾನಗರ ಪಾಲಿಕೆ ವ್ಯಾಪ್ತಿಯ ಬಹುತೇಕ ಒಳಚರಂಡಿಗಳು ತುಂಬಿ ಹೋಗಿವೆ. ಮನೆಗಳ ಮುಂದೆ ಒಳಚರಂಡಿ ನೀರು ನಿಂತು ದುರ್ವಾಸನೆ ಬೀರುತ್ತಾ, ಜನರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಎಲ್ಲೆಂದರಲ್ಲಿ ಕಸ ಬಿದ್ದಿದೆ. ಒಳಚರಂಡಿಗಳಲ್ಲಿ ಕಸ ತುಂಬಿದೆ. ಅದನ್ನು ಶುಚಿಗೊಳಿಸಿ ಎಂದು ಮಹಾನಗರ ಪಾಲಿಕೆ ದೂರು ಕೊಟ್ಟರು ಯಾರು ಗಮನಹರಿಸದೆ ನಿರ್ಲಕ್ಷ ತೋರುತ್ತಿದ್ದಾರೆ. ದೂರವಾಣಿ ಕರೆ ಮಾಡಿದರೆ ಕರೆ ಸ್ವೀಕರಿಸುತ್ತಿಲ್ಲ. ಆಡಳಿತ ಎಲ್ಲೋ ಒಂದು ಕಡೆ ಕುಂಟುತ್ತ ಸಾಗಿದೆ. ಹೀಗೆ ಆದರೆ ಬೀದರ್ ಮಹಾನಗರ ಪಾಲಿಕೆ ಮುಂದಿನ ದಿನಗಳಲ್ಲಿ ಇನ್ನಷ್ಟು ಬರ್ಬಾದಾಗುವುದರಲ್ಲಿ ಎರಡು ಮಾತಿಲ್ಲ. ಉಸ್ತುವಾರಿ ಸಚಿವರಾಗಿರುವ ನೀವು ಇದನ್ನು ಗಂಭೀರವಾಗಿ ಪರಿಗಣಿಸಿ, ಈ ಕೂಡಲೇ ಸಂಬಂಧಿಸಿದ ಅಧಿಕಾರಿಗಳ ಸಭೆ ಕರೆದು ಅವರಿಗೆ ಎಚ್ಚರಿಕೆ ನೀಡಬೇಕು ಎಂದು ಬೀದರ್ ಮಹಾನಗರದ ಜನ ಆಗ್ರಹಿಸುತ್ತಿದ್ದಾರೆ. ಇಲ್ಲದೆ ಹೋದರೆ ಕಾಂಗ್ರೆಸ್ ಸರ್ಕಾರದ ಮೇಲೆ ಮತ್ತು ನಿಮ್ಮ ಉಸ್ತುವಾರಿ ಮೇಲೆ ಬೀದರ್ ಜನ ನಂಬಿಕೆಯನ್ನು ಕಳೆದುಕೊಳ್ಳುತ್ತಾರೆ.

### ಪೌರಾಡಳಿತ ಸಚಿವ ರಹೀಮ್ ಖಾನ ಗಮನಕ್ಕೆ...!

ಬೀದರ್ ನಗರವನ್ನು ಪ್ರತಿನಿಧಿಸುವ ರಾಜ್ಯ ಸರ್ಕಾರದಲ್ಲಿ ಪೌರಾಡಳಿತ ಇಲಾಖೆ ಸಚಿವರು ಆಗಿರುವ ವ್ಯಾಪ್ತಿಯಲ್ಲಿಯೇ ಒಳಚರಂಡಿಗಳು ಕಟ್ಟಿಕೊಂಡು ದುರ್ವಾಸನೆ ಬೀರುವ ಮಟ್ಟಿಗೆ ಬಂದಿವೆ. ಕಮಿಷನರ್ ಅವರಿಗೆ ಭೇಟಿ ಮಾಡಿ ದೂರು ಕೊಟ್ಟರು ಪ್ರಯೋಜನ ಆಗುತ್ತಿಲ್ಲ. ಇಲಿ ಕೆಲಸ ಮಾಡುವ ಎಇಇ ಹಾಗೂ ಇತರ ಅಧಿಕಾರಿ ಮತ್ತು ಸಿಬ್ಬಂದಿಗಳು ಹೇಳುವವರು ಕೇಳುವವರಿಲ್ಲದೆ ಹೋಗಿದ್ದಾರೆ. ಒಬ್ಬರ ಮೇಲೆ ಒಬ್ಬರು ಹೇಳಿಕೊಂಡು ಕೆಲಸ ತಪ್ಪಿಸಿಕೊಂಡು ಜನರಿಗೆ ಸಮಸ್ಯೆ ತಂದೊಡ್ಡಿದ್ದಾರೆ. ಬೀದರ್ ಮಹಾನಗರ ಪಾಲಿಕೆಯಲ್ಲಿ ಆಡಳಿತ ಹಳಿ ತಪ್ಪಿದೆ. ಕಮಿಷನರ್ ಮುಕುಲ್ ಜೈನ್ ಕೂಡ ಕೆಲಸ ಮಾಡದೆ ಕೈ ಕಟ್ಟಿ ಕೂತಿದ್ದಾರೆ. ಈಗಿರುವಾಗ ಒಬ್ಬ ಸಚಿವರಾಗಿ ನಗರಾಡಳಿತ ಇಲಾಖೆಯ ಗಮನಕ್ಕೆ ತಂದು, ಇದನ್ನೆಲ್ಲ ಸರಿಪಡಿಸಿ ಮಹಾನಗರ ಪಾಲಿಕೆಯ ಜನ ನೆಮ್ಮದಿಯಿಂದ ಜೀವಿಸುವಂತೆ ಮಾಡಲಿ ಎನ್ನುತ್ತಿದ್ದಾರೆ.

### ಒಳಚರಂಡಿ ಸಮಸ್ಯೆ: ನಾಗರಿಕರ ಆರೋಗ್ಯಕ್ಕೆ ಕಂಟಕ!

ಬೀದರ್ ನಗರದ ಹಲವು ಪ್ರದೇಶಗಳಲ್ಲಿ ಒಳಚರಂಡಿ ವ್ಯವಸ್ಥೆಯ ದುಸ್ಥಿತಿ ತೀವ್ರವಾಗಿದ್ದು, ದುರ್ವಾಸನೆ ಹಾಗೂ ಅಶುಚಿ ಪರಿಸರದಿಂದ ನಾಗರಿಕರು ಸಂಕಷ್ಟ ಅನುಭವಿಸುತ್ತಿದ್ದಾರೆ. ರಸ್ತೆ ಬದಿಗಳಲ್ಲಿ ಹರಿದುಬರುವ ಮಲಿನ ನೀರು, ತಡೆಹಿಡಿಯದ ಚರಂಡಿಗಳು ಮತ್ತು ಸಮಯಕ್ಕೆ ಸರಿಯಾಗಿ ಸ್ವಚ್ಛತೆ ಮಾಡದಿರುವುದು ಸಾರ್ವಜನಿಕ ಆರೋಗ್ಯದ ಮೇಲೆ ನೇರ ಪರಿಣಾಮ ಬೀರುತ್ತಿದೆ.



ನಗರದ ಜನರು ಹಲವು ಬಾರಿ ದೂರು ನೀಡಿದರೂ, ಮಹಾನಗರ ಪಾಲಿಕೆಯ ನಿರ್ಲಕ್ಷ್ಯ ಮುಂದುವರಿದಿದೆ ಎಂಬ ಆರೋಪ ಕೇಳಿಬರುತ್ತಿದೆ. ಕಮಿಷನರ್ ಮುಕುಲ್ ಜೈನ್, ಎಇಇ ನಾಗನಾಥ ಬಿರಾದಾರ ಹಾಗೂ ರವೀಂದ್ರ ಕಾಂಬ್ಳೆ ಅವರ ಆಡಳಿತ ಕ್ರಮಗಳ ಬಗ್ಗೆ ಸಾರ್ವಜನಿಕರಲ್ಲಿ ಅಸಮಾಧಾನ ಹೆಚ್ಚಾಗಿದೆ. ಮೂಲಭೂತ ಸೌಕರ್ಯಗಳಾದ ಒಳಚರಂಡಿ ನಿರ್ವಹಣೆ ಸರಿಯಾಗಿ ನಡೆಯದಿರುವುದು ಅಧಿಕಾರಿಗಳ ಹೊಣೆಗಾರಿಕೆಯನ್ನು ಪ್ರಶ್ನಿಸುವಂತಾಗಿದೆ.

ಮಳೆಗಾಲದ ಸಂದರ್ಭದಲ್ಲಿ ಈ ಸಮಸ್ಯೆ ಇನ್ನಷ್ಟು ತೀವ್ರವಾಗುತ್ತದೆ. ನೀರು ನಿಂತು ಕೀಟಗಳು ಬೆಳೆಯುವುದರಿಂದ ಡೆಂಗ್ಯೂ, ಮಲೇರಿಯಾ ಹಾಗೂ ಇತರ ಸೋಂಕು ರೋಗಗಳ ಅಪಾಯ ಹೆಚ್ಚುತ್ತಿದೆ.

ಮಕ್ಕಳಿಂದ ಹಿಡಿದು ವೃದ್ಧರವರೆಗೆ ಎಲ್ಲರೂ ಈ ಪರಿಸ್ಥಿತಿಯಿಂದ ಬಾಧಿತರಾಗುತ್ತಿದ್ದಾರೆ.

ಸ್ಥಳೀಯ ನಿವಾಸಿಗಳು ಹೇಳುವಂತೆ, ಕೆಲವು ಕಡೆಗಳಲ್ಲಿ ತಿಂಗಳಿನಿಂದ ಚರಂಡಿ ತಡೆಗಳು ತೆರವುಗೊಳ್ಳದೇ ಇದ್ದು, ಮನೆಗಳ ಎದುರು ಮಲಿನ ನೀರು ನಿಂತಿರುವುದು ಸಾಮಾನ್ಯ ದೃಶ್ಯವಾಗಿದೆ. ಇದರಿಂದ ದುರ್ವಾಸನೆ ಮಾತ್ರವಲ್ಲದೆ ಜೀವನಮಟ್ಟಕ್ಕೂ ಹಾನಿಯಾಗುತ್ತಿದೆ.

ಇಂತಹ ಗಂಭೀರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುವುದು ಮಹಾನಗರ ಪಾಲಿಕೆಯ ಕರ್ತವ್ಯವಾಗಿದೆ. ಅಧಿಕಾರಿಗಳು ಕ್ಷೇತ್ರಕ್ಕೆ ಭೇಟಿ ನೀಡಿ ನೈಜ ಸ್ಥಿತಿ ಪರಿಶೀಲಿಸಿ, ತುರ್ತು ಕ್ರಮಗಳನ್ನು ಕೈಗೊಳ್ಳಬೇಕು. ಒಳಚರಂಡಿ ಶುದ್ಧೀಕರಣಕ್ಕೆ ನಿಯಮಿತ ವೇಳಾಪಟ್ಟಿ ರೂಪಿಸಿ, ನಾಗರಿಕರ ದೂರುಗಳಿಗೆ ಶೀಘ್ರ ಸ್ಪಂದನೆ ನೀಡಬೇಕು.

ನಗರವನ್ನು ಸ್ವಚ್ಛವಾಗಿಡುವುದು ಕೇವಲ ನಾಗರಿಕರ ಹೊಣೆಗಾರಿಕೆ ಮಾತ್ರವಲ್ಲ, ಆಡಳಿತದ ಪ್ರಮುಖ ಕರ್ತವ್ಯವೂ ಆಗಿದೆ. ಬೀದರ್ ನಗರವು ಆರೋಗ್ಯಕರ ಮತ್ತು ಸ್ವಚ್ಛ ವಾತಾವರಣವನ್ನು ಪಡೆಯಬೇಕಾದರೆ, ಸಂಬಂಧಿತ ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸುವುದು ಅಗತ್ಯ.

# ಭಾಲಿ ಧನ್ನೂರು(ಹೆಚ್) ಮಾದರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಂತೋಷಕುಮಾರ್ ಪಾಟೀಲ

(8ನೇ ಪುಟದಿಂದ)

ಕಡತಗಳನ್ನು ಸರಿಯಾದ ಸಮಯಕ್ಕೆ ವಿಲೇವಾರಿ ಮಾಡುತ್ತಾರೆ. ಸರ್ಕಾರದಿಂದ ಬರುವ ವಿವಿಧ ಯೋಜನೆಗಳ ಅನುದಾನಗಳನ್ನು ಅನುಷ್ಠಾನಗೊಳಿಸಿ, ಕ್ರಿಯಾಯೋಜನೆ ರೂಪಿಸಿ ಅದನ್ನು ಕಾರ್ಯರೂಪಕ್ಕೆ ತಂದು ಬದ್ಧತೆಯಿಂದ ಕೆಲಸ ಮಾಡುತ್ತಿದ್ದಾರೆ.

ಗ್ರಾಮ ಪಂಚಾಯತಿಯ ಗ್ರಾಮಗಳಿಗೆ ಮೂಲಭೂತವಾಗಿ ಬೇಕಾದಂತಹ ಸಿಸಿ ರಸ್ತೆ ಹಾಗೂ ಸಿಸಿ ಚರಂಡಿ ನಿರ್ಮಾಣ. ಮನೆ ಮನೆಗೂ ಶೌಚಾಲಯಗಳ ನಿರ್ಮಾಣ. ಮನೆಮನೆಗೂ ಕುಡಿಯುವ ನೀರು ಪೂರೈಕೆ. ಪ್ರತಿ ಗ್ರಾಮಗಳ ರಸ್ತೆಗಳ ಬೀದಿ ಕಂಬಗಳಿಗೆ ಬೀದಿ ದೀಪ ಅಳವಡಿಕೆ. ವಸತಿ ಯೋಜನೆಯಲ್ಲಿ ಮನೆಗಳ ಪೂರೈಕೆ ಮಾಡುತ್ತಾ ಜನಪರವಾಗಿ ಕೆಲಸ ಮಾಡುತ್ತಿದ್ದಾರೆ.

ವಿಶೇಷ ಎಂದರೆ ಗ್ರಾಮ ಪಂಚಾಯಿತಿಯಲ್ಲಿ ಸರಿಯಾದ ಸಮಯಕ್ಕೆ ಸಾಮಾನ್ಯ ಸಭೆ, ವಾರ್ಡ್ ಸಭೆ, ಹಾಗೂ ಗ್ರಾಮ ಸಭೆಗಳನ್ನು ನಡೆಸುತ್ತಿದ್ದಾರೆ. ಇದರಿಂದ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲು ಚರ್ಚೆಗಳ ನಡೆದು ಕ್ರಿಯಾ ಯೋಜನೆ ರೂಪಿಸಲು ಸಾಧ್ಯವಾಗಿದೆ.

ಬಿಡುವಿನ ಸಮಯದಲ್ಲಿ ಗ್ರಾಮಗಳಿಗೆ ಭೇಟಿ ನೀಡಿ ಅಲ್ಲಿನ ಸಮಸ್ಯೆಗಳನ್ನು ಅರಿತು ಜನರಿಗೆ ಸ್ಪಂದಿಸುತ್ತಾ ಬಂದಿದ್ದಾರೆ. ಸಾಮಾನ್ಯ ಜನ ಕಷ್ಟ ಅಂತ ಅಥವಾ ಸಮಸ್ಯೆ ಹೊತ್ತು ಗ್ರಾಮ ಪಂಚಾಯಿತಿ ಕಾರ್ಯಾಲಯಕ್ಕೆ ಹೋದಾಗ ಅವರನ್ನು ಕೂರಿಸಿ ಮಾತನಾಡಿಸಿ ಅವರ ಸಮಸ್ಯೆ ಆಲಿಸಿ ಅದಕ್ಕೆ ಸ್ಪಂದಿಸುತ್ತಾ ಬಂದಿದ್ದಾರೆ.

ಕಚೇರಿಯಲ್ಲಿ ಕೂತು ಕೆಳ ವರ್ಗದ ಅಧಿಕಾರಿಗಳ, ಸಿಬ್ಬಂದಿಗಳ ಕಾರ್ಯನಿರ್ವಹಣೆಯನ್ನು ಗಮನಿಸುತ್ತಾರೆ. ಇಒ ಅವರ ಮಾರ್ಗದರ್ಶನದಲ್ಲಿ, ಅವರ ಸಲಹೆ ಸೂಚನೆಗಳನ್ನು ಪಡೆಯುತ್ತಾ, ಜನರೊಂದಿಗೆ ಹಾಗೂ ಆಡಳಿತ ಅಧಿಕಾರಿ ಅವರೊಂದಿಗೆ ಸಮನ್ವಯತೆಯನ್ನು ಸಾಧಿಸಿ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಗ್ರಾಮಗಳ ಸಾರ್ವಜನಿಕರು ಯಾವುದೇ ರೀತಿಯ ದೂರು ದುಮ್ಮಾನಗಳನ್ನು ತಂದರು, ಅದಕ್ಕೆ ಸ್ಪಂದಿಸುತ್ತಿದ್ದಾರೆ.


ಎಲ್ಲಾ ಒಗ್ಗೂಡಿ ಕೆಲಸ ಮಾಡಿದಾಗ ಮಾತ್ರ ಪ್ರಗತಿ ಸಾಧ್ಯ. ಅದರಂತೆಯೇ ಮೇಲಧಿಕಾರಿಗಳ ಜೊತೆಗೆ ಆಡಳಿತ ಅಧಿಕಾರಿ, ಸಿಬ್ಬಂದಿ ವರ್ಗ ಎಲ್ಲರೂ ಇವರಿಗೆ ಸಹಕಾರ ನೀಡುತ್ತಿದ್ದಾರೆ. ಎಲ್ಲರ ಮಧ್ಯೆ ಪರಸ್ಪರ ಸಮನ್ವಯತೆ ಇದ್ದು, ಇದರೊಂದಿಗೆ ಪ್ರಗತಿ ಸಾಧ್ಯವಾಗಿದೆ. ಪ್ರಾಮಾಣಿಕವಾಗಿ, ಪಾರದರ್ಶಕವಾಗಿ, ನಿಸ್ವಾರ್ಥದಿಂದ, ಬದ್ಧತೆಯಿಂದ ಮಾಡುತ್ತಾ, ಇಲ್ಲಿ ಯಾವುದೇ ರೀತಿಯ ತಾರತಮ್ಯ ಮಾಡದೆ ಬಂದಿದ್ದಾರೆ.

ವಿಶೇಷವಾಗಿ ಮೇಲಧಿಕಾರಿಗಳಾದ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜೊತೆಗೆ ಉತ್ತಮ ಸಂಬಂಧವನ್ನು ಇರಿಸಿಕೊಂಡಿದ್ದಾರೆ. ಮೇಲಧಿಕಾರಿಗಳ ಮಾರ್ಗದರ್ಶನ, ನೇತೃತ್ವದಲ್ಲಿ ಸ್ಥಳೀಯ ಅನುದಾನ, ವರ್ಗ ಒಂದು, 15ನೇ ಹಣಕಾಸು ಯೋಜನೆ ಹಾಗೂ ನರೇಗಾ ಯೋಜನೆಗಳ ಅನುದಾನವನ್ನು ಸದ್ಬಳಕೆ ಮಾಡಿಕೊಂಡು ಪಂಚಾಯಿತಿ ಅಭಿವೃದ್ಧಿಗೆ ಕಂಕಣ ಬದ್ಧರಾಗಿದ್ದಾರೆ.

ಒಟ್ಟಾರೆ ಹೇಳಬೇಕು ಎಂದರೆ, ಸಂತೋಷಕುಮಾರ್ ಪಾಟೀಲ ಅವರು, ಯಾವೆಲ್ಲ ಗ್ರಾಮ ಪಂಚಾಯ್ತಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೋ, ಆ ಗ್ರಾಮ ಪಂಚಾಯಿತಿಗಳ ಜನರೊಂದಿಗೆ ಹಾಗೂ ಆಡಳಿತ ಮಂಡಳಿಯ ಜೊತೆ ಮತ್ತು ಸಿಬ್ಬಂದಿಯ ಜೊತೆ ಉತ್ತಮ ಸಂಬಂಧವನ್ನು ಹೊಂದಿ, ನಗುನಗುತ್ತಾ ಕೆಲಸ ಮಾಡುತ್ತಿರುವುದು ಇವರು ಉತ್ತಮವಾಗಿ ಕೆಲಸ ಮಾಡಲು ಸಾಧ್ಯವಾಗಿದೆ.

ಇದರಿಂದ ಧನ್ನೂರು ಹೆಚ್ ಪಂಚಾಯಿತಿಗೆ ಒಳ್ಳೆ ಹೆಸರು ಬಂದಿದೆ. ಹೀಗಾಗಿ ಇವರಿಗೆ ಪತ್ರಿಕೆಯು ಪಂಚಾಯಿತಿ ಜನರ ಪರವಾಗಿ ಹ್ಯಾಟ್ಸಾಫ್ ಹೇಳುತ್ತದೆ. ಒಟ್ಟಾರೆ ಜನ ಮೆಚ್ಚಿದ ಅಧಿಕಾರಿ ಸಂತೋಷಕುಮಾರ್ ಪಾಟೀಲ ಎಂದರೆ ತಪ್ಪಲ್ಲ.

# "ನಡೆದಾಡುವ ದೇವರು" ಶಿವಕುಮಾರ ಸ್ವಾಮೀಜಿಗಳನ್ನು ನೆನಯೋಣ..




ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿಗಳು ಕರ್ನಾಟಕದ ಅತಿ ಮಹಾನ್ ಸಂತರು, ಸಮಾಜಸೇವಕರು ಮತ್ತು ಶಿಕ್ಷಣ ಪ್ರಚಾರಕರು. ಅವರು "ನಡೆದಾಡುವ ದೇವರು" ಎಂದು ಪ್ರಸಿದ್ಧರಾಗಿದ್ದರು. ತಮ್ಮ ಜೀವನವನ್ನೇ ಸಮಾಜದ ಸೇವೆಗೆ ಅರ್ಪಿಸಿದ ಅವರು, ವಿಶೇಷವಾಗಿ ಬಡ ಮಕ್ಕಳಿಗೆ ಶಿಕ್ಷಣ ಮತ್ತು ಅನ್ನದಾನ ಮಾಡುವ ಮೂಲಕ ಅಪಾರ ಗೌರವವನ್ನು ಗಳಿಸಿದರು.

ತುಮಕೂರಿನ ಸಿದ್ದಗಂಗಾ ಮಠದ ಆಧ್ಯಾತ್ಮಿಕ ದೀಪಸ್ತಂಭ, "ನಡೆದಾಡುವ ದೇವರು" ಎಂದೇ ಖ್ಯಾತರಾದ ಶಿವಕುಮಾರ ಸ್ವಾಮೀಜಿಗಳ ಜೀವ ನವೇ ಒಂದು ಮಹಾನ್ ಸೇವಾ ಗಾಥೆ. ಸಮಾ ಜದ ಅತೀ ಹಿಂದುಳಿದ ವರ್ಗಗಳಿಗೂ ಶಿಕ್ಷಣ ಮತ್ತು ಅನ್ನದಾನವನ್ನು ತಲುಪಿಸಿದ ಅಪರೂಪದ ಮಹನೀಯರಲ್ಲಿ ಅವರು ಪ್ರಮುಖರು.

ಶ್ರೀ ಶಿವಕುಮಾರ ಸ್ವಾಮೀಜಿಗಳವರು 1907 ಏಪ್ರಿಲ್ 1ರಂದು ಕರ್ನಾಟಕದ ರಾಮನಗರ ಜಿಲ್ಲೆಯ ವೀರಾಪುರ ಗ್ರಾಮದಲ್ಲಿ ಜನಿಸಿದರು. ಅವರ ಮೂಲ ಹೆಸರು ಶಿವಣ್ಣ. ಬಾಲ್ಯದಿಂದಲೇ ಧಾರ್ಮಿಕ ಚಿಂತನೆ, ಶಿಸ್ತಿನ ಜೀವನ ಮತ್ತು ಸಮಾ ಜದ ಬಗ್ಗೆ ಕಾಳಜಿ ಅವರಲ್ಲಿ ಕಂಡುಬರುತ್ತಿತ್ತು.

ಅವರು ಪ್ರಾಥಮಿಕ ಮತ್ತು ಉನ್ನತ ಶಿಕ್ಷಣ ವನ್ನು ಪಡೆದ ನಂತರ, ಧಾರ್ಮಿಕ ಅಧ್ಯಯನದತ್ತ ಮುಖ ಮಾಡಿದರು. ನಂತರ ಅವರು ತುಮ ಕೂರಿನ ಸಿದ್ದಗಂಗಾ ಮಠಕ್ಕೆ ಸೇರ್ಪಡೆಯಾದರು.

ಮಠದ ಪೀಠಾಧಿಪತಿಗಳಾಗಿ ಅಧಿಕಾರ ವಹಿಸಿ ಕೊಂಡ ನಂತರ, ಅವರು ಮಠವನ್ನು ಕೇವಲ ಧಾರ್ಮಿಕ ಕೇಂದ್ರವಲ್ಲದೆ, ಒಂದು ಮಹತ್ತರ ಶಿಕ್ಷಣ ಮತ್ತು ಸೇವಾ ಸಂಸ್ಥೆಯಾಗಿ ರೂಪಿಸಿದರು.

ಶ್ರೀ ಶಿವಕುಮಾರ ಸ್ವಾಮೀಜಿಗಳು ಸಿದ್ದಗಂಗಾ ಮಠದ ಮುಖ್ಯಸ್ಥರಾಗಿ ಅಧಿಕಾರ ಸ್ವೀಕರಿಸಿದ ನಂತರ, ಮಠವನ್ನು ಶಿಕ್ಷಣ ಮತ್ತು ಸೇವೆಯ ಕೇಂದ್ರವಾಗಿ ರೂಪಿಸಿದರು. ಅವರು ಸಾವಿರಾರು ಬಡ ಮಕ್ಕಳಿಗೆ ಉಚಿತವಾಗಿ: ಶಿಕ್ಷಣ, ವಸತಿ, ಅನ್ನ ಇವನ್ನು ಒದಗಿಸಿದರು.

"ಅನ್ನದಾಸೋಹ" ಎಂಬ ಮಹತ್ವದ ಸೇವ 'ಯನ್ನು ನಿರಂತರವಾಗಿ ನಡೆಸಿದರು. ದಿನವೂ ಸಾವಿರಾರು ಜನರಿಗೆ ಉಚಿತ ಅನ್ನ ನೀಡುವುದು ಅವರ ಮಠದ ವಿಶೇಷತೆಯಾಗಿದೆ.

ಸ್ವಾಮೀಜಿಗಳು ಶಿಕ್ಷಣವೇ ಸಮಾಜದ ಪ್ರಗತಿಯ ಮೂಲ ಎಂದು ನಂಬಿದ್ದರು. ಅವರ ಮಾರ್ಗದರ್ಶನದಲ್ಲಿ: ನೂರಾರು ಶಾಲೆಗಳು ಮತ್ತು ಕಾಲೇಜುಗಳು ಸ್ಥಾಪನೆಯಾದವು. ಗ್ರಾಮೀಣ ಮತ್ತು ಬಡ ವಿದ್ಯಾರ್ಥಿಗಳಿಗೆ ಅವಕಾಶಗಳು ಸೃಷ್ಟಿಯಾದವು. ಅವರು ಜಾತಿ, ಧರ್ಮ, ಭಾಷೆ ಎಂಬ ಬೇಧವಿಲ್ಲದೆ ಎಲ್ಲರಿಗೂ ಸಮಾನ ಅವಕಾಶ ನೀಡಿದರು. ಶ್ರೀ ಶಿವಕುಮಾರ ಸ್ವಾಮೀಜಿಗಳವರು ಅತ್ಯಂತ ಸರಳ ಜೀವನ ನಡೆಸಿದರು.

ಅವರ ಜೀವನದ ಮುಖ್ಯ ಮೌಲ್ಯಗಳು: ಸೇವೆ, ಶಿಸ್ತು, ಸಮಾನತೆ, ದಾನ ಅವರು ಎಂದಿಗೂ ಆಸ್ತಿ ಸಂಪತ್ತಿನ ಹಿಂದೆ ಹೋಗಲಿಲ್ಲ. ಜನರ ಸೇವೆಯೇ ಅವರ ಧ್ಯೇಯವಾಗಿತ್ತು.

ಅವರ ಮಹತ್ವದ ಸೇವೆಯನ್ನು ಗುರುತಿಸಿ ಭಾರತ ಸರ್ಕಾರವು ಅವರಿಗೆ: ಪದ್ಮಭೂಷಣ ಮತ್ತು ಪದ್ಮ ವಿಭೂಷಣ ಪ್ರಶಸ್ತಿಯನ್ನು ನೀಡಿದೆ. ಕರ್ನಾಟಕ ಸರ್ಕಾರ ಕರ್ನಾಟಕ ರತ್ನ ಪ್ರಶಸ್ತಿ ನೀಡಿ ಗೌರವಿಸಿದೆ. ಹೀಗೆ ಅನೇಕ ಪ್ರಶಸ್ತಿಗಳನ್ನು ಸಂದಿವೆ. ಇವುಗಳು ಕೇವಲ ಗೌರವಗಳಲ್ಲ, ಅವರ ಜೀವ ನದ ಸಾಧನೆಗೆ ದೊರೆತ ರಾಷ್ಟ್ರೀಯ ಮಾನ್ಯತೆ. ಶ್ರೀ ಶಿವಕುಮಾರ ಸ್ವಾಮೀಜಿಗಳು 2019 ಜನ ವರಿ 21ರಂದು ಲಿಂಗೈಕ್ಯರಾದರು. ಅವರ ನಿಧನವು ದೇಶದಾದ್ಯಂತ ದುಃಖವನ್ನುಂಟು ಮಾಡಿತು.

ಇಂದಿಗೂ ಅವರ ಸಿದ್ಧಾಂತಗಳು ಲಕ್ಷಾಂತರ ಜನರಿಗೆ ಪ್ರೇರಣೆ ನೀಡುತ್ತಿವೆ. ಸಿದ್ದಗಂಗಾ ಮಠವು ಅವರ ಮಾರ್ಗದಲ್ಲಿ ಸೇವೆಯನ್ನು ಮುಂದುವರಿಸು ತ್ತಿದೆ. ಶಿವಕುಮಾರ ಸ್ವಾಮೀಜಿಗಳು ನಮಗೆ ಕಲಿಸಿದ ಪಾಠ: "ಮಾನವ ಸೇವೆಯೇ ಮಹಾ ದೇವ ಸೇವೆ".

ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿಗಳ ಜೀವನವು ನಮಗೆ ನಿಸ್ವಾರ್ಥ ಸೇವೆ, ದಾನ ಮತ್ತು ಶಿಕ್ಷಣದ ಮಹತ್ವವನ್ನು ತಿಳಿಸುತ್ತದೆ. ಅವರು ಕೇವಲ ಧಾರ್ಮಿಕ ನಾಯಕನಲ್ಲ, ಮಾನವೀಯ ಮೌಲ್ಯಗಳ ಜೀವಂತ ಪ್ರತಿರೂಪರಾಗಿದ್ದರು.

ಇಂದು ಕೂಡ ಸಿದ್ದಗಂಗಾ ಮಠವು ಅವರ ಆದರ್ಶಗಳನ್ನು ಮುಂದುವರಿಸಿಕೊಂಡು ಸಾಗು ತ್ತಿದೆ. ಶಿವಕುಮಾರ ಸ್ವಾಮೀಜಿಗಳ ಜೀವನವು ಪ್ರತಿಯೊಬ್ಬರಿಗೂ ಒಂದು ಪಾಠ:

ತುಮಕೂರಿನ ಸಿದ್ದಗಂಗಾ ಮಠದ ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿಗಳು ಕೇವಲ ಒಂದು ಜೀವಂತ ಮೌಲ್ಯ. ಬಡವರ ಕಣ್ಣೀರು ಒರೆಸಿದ ದಯಾಮೂರ್ತಿ, ಶಿಕ್ಷಣದ ಮೂಲಕ ಸಮಾಜವನ್ನು ಬೆಳಗಿಸಿದ ದಿವ್ಯಚೇತನ.

ಅವರ ಜೀವನದ ಬೆಳಕು ಮುಂದಿನ ಪೀಳಿಗೆ ಗಳಿಗೆ ಸದಾಕಾಲ ಮಾರ್ಗದರ್ಶಕವಾಗಿರುತ್ತದೆ.

## ಶಿಕ್ಷಣ ಹಾಗೂ ಅನ್ನ ದಾಸೋಹಿ...

ಶಿವಕುಮಾರ ಸ್ವಾಮೀಜಿಗಳು ಕರ್ನಾಟಕದ ಪ್ರಸಿದ್ಧ ಸಂತರು, ಶಿಕ್ಷಣಪ್ರೇಮಿಗಳು ಹಾಗೂ ಸಮಾಜಸೇವಕರು ಆಗಿದ್ದರು. ಬಾಲ್ಯದಿಂದಲೇ ಅವರು ಧಾರ್ಮಿಕ ಚಿಂತನೆ ಹಾಗೂ ಮಾನ ವೀಯ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದರು.

ಶಿವಕುಮಾರ ಸ್ವಾಮೀಜಿಗಳು ತುಮಕೂರಿನ ಸಿದ್ದಗಂಗಾ ಮಠದ ಮುಖ್ಯಸ್ಥರಾಗಿದ್ದು, ತಮ್ಮ ಜೀವನವನ್ನೇ ಸಮಾಜ ಸೇವೆಗೆ ಅರ್ಪಿಸಿದರು. ಅವರು ವಿಶೇಷವಾಗಿ ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರ ಕೊಡುಗೆ ನೀಡಿದ್ದಾರೆ. ಬಡ ಮತ್ತು ಅನಾಥ ಮಕ್ಕಳಿಗೆ ಉಚಿತವಾಗಿ ಶಿಕ್ಷಣ, ಊಟ ಮತ್ತು ವಸತಿ ನೀಡುವ ಮೂಲಕ ಸಾವಿರಾರು ವಿದ್ಯಾರ್ಥಿಗಳ ಬದುಕನ್ನು ಬೆಳಗಿಸಿದರು.

ಅವರ ಮಠದಲ್ಲಿ ಪ್ರತಿದಿನ ಲಕ್ಷಾಂತರ ಜನರಿಗೆ ಅನ್ನದಾನ ಮಾಡಲಾಗುತ್ತಿತ್ತು. "ನಿತ್ಯ ಅನ್ನದಾನ" ಎಂಬ ಪರಂಪರೆಯನ್ನು ಅವರು ಯಶಸ್ವಿಯಾಗಿ ಮುಂದುವರೆಸಿದರು. ಧರ್ಮ, ಜಾತಿ, ವರ್ಗ ಯಾವುದನ್ನೂ ಪರಿಗಣಿಸದೆ ಎಲ್ಲರಿಗೂ ಸಹಾಯ ಮಾಡುವುದು ಅವರ ಮುಖ್ಯ ಧ್ಯೇಯವಾಗಿತ್ತು. ಶಿವಕುಮಾರ ಸ್ವಾಮೀಜಿಗಳು ಸರಳ ಜೀವನವನ್ನು ನಡೆಸಿದರು. ಅವರು ಸದಾ ಸತ್ಯ, ಅಹಿಂಸೆ ಮತ್ತು ಸೇವೆಯ ಮಾರ್ಗವನ್ನು ಅನುಸರಿಸಿದರು. ಅವರ ಜೀವನವೇ ಒಂದು ಮಾದರಿಯಾಗಿದ್ದು, ಎಲ್ಲರಿಗೂ ಪ್ರೇರಣೆಯಾಗಿತ್ತು.

ಶಿವಕುಮಾರ ಸ್ವಾಮೀಜಿಗಳು ಮಾನವ ಸೇವೆಯ ಮಹತ್ವವನ್ನು ಸಾರಿದ ಮಹಾನ್ ವ್ಯಕ್ತಿ. ಅವರ ಜೀವನ ನಮ್ಮೆಲ್ಲರಿಗೂ ಸತ್ಪಥವನ್ನು ತೋರಿಸುತ್ತದೆ.

# ಭಾಲ್ಕಿ ನರೆಗಾದಲ್ಲಿ ಉದ್ಯೋಗ ಕೊಡಿ!



ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (MGNREGA) ಅಡಿಯಲ್ಲಿ ಭಾಲ್ಕಿ ತಾಲೂಕಿನ ಗ್ರಾಮೀಣ ಬಡ ಕಾರ್ಮಿಕರಿಗೆ ತಕ್ಷಣವೇ ಕೆಲಸ ಒದಗಿಸ ಬೇಕೆಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಭಾಲ್ಕಿ ಶಾಖೆಯ ಪದಾಧಿಕಾರಿಗಳು ಆಗ್ರಹಿಸಿದ್ದಾರೆ.

ಈ ಕುರಿತು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸಿದ ಮನವಿಯಲ್ಲಿ ತಾಲ್ಲೂಕು ಸಂಘಟನಾ ಸಂಚಾಲಕರಾದ ವೈಜನಾಥ ಬಿ. ಧರ್ಮಪಲ ಹಾಗೂ ತಾಲ್ಲೂಕು ಪ್ರಧಾನ ಸಂಚಾಲಕರಾದ ಗಾಳೆಪ್ಪ ಮೈಲೂರ್ ಅವರು ತಿಳಿಸಿದ್ದಾರೆ.

ಭಾಲ್ಕಿ ತಾಲೂಕಿನ ಎಲ್ಲಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಅನೇಕ ಬಡ ಹಾಗೂ ಕೂಲಿ ಕಾರ್ಮಿಕ ಕುಟುಂಬಗಳು ಜೀವನೋಪಾಯಕ್ಕಾಗಿ ಉದ್ಯೋಗ ಖಾತ್ರಿ ಯೋಜನೆಯನ್ನು ಅವಲಂಬಿಸಿಕೊಂಡಿವೆ. ಆದರೆ 2026ರ ಜನವರಿಯಿಂದ ಮಾರ್ಚ್ ತಿಂಗಳವರೆಗೆ ಬಹುತೇಕ ಗ್ರಾಮಗಳಲ್ಲಿ ಕಾರ್ಮಿಕರಿಗೆ ಯಾವುದೇ ಕೆಲಸ ನೀಡಲಾಗಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಚಟುವಟಿಕೆಗಳು ಕಡಿಮೆಯಾಗಿರುವುದರಿಂದ ಕಾರ್ಮಿಕರು ತೀವ್ರ ಸಂಕಷ್ಟವನ್ನು ಅನುಭವಿಸುತ್ತಿದ್ದಾರೆ.

## ಮನವಿಯಲ್ಲಿ ಉಲ್ಲೇಖಿಸಿದ ಪ್ರಮುಖ ಸಮಸ್ಯೆಗಳು ಹೀಗಿವೆ:

ಹಲವಾರು ಕಾರ್ಮಿಕರು ಈಗಾಗಲೇ ನಮೂನೆ 6ರ ಮೂಲಕ ಕೆಲಸಕ್ಕೆ ಅರ್ಜಿ ಸಲ್ಲಿಸಿದ್ದರೂ, ಪಂಚಾಯತ್ ಮಟ್ಟದಲ್ಲಿ ಕೆಲಸ ನೀಡಲು ವಿಳಂಬ ಮಾಡಲಾಗುತ್ತಿದೆ.

ಕೆಲವೆಡೆ ಕೆಲಸ ಲಭ್ಯವಿದ್ದರೂ ತಾಂತ್ರಿಕ ಕಾರಣಗಳನ್ನು ಮುಂದಿಟ್ಟು ಕಾರ್ಮಿಕರಿಗೆ ಕೆಲಸ ನೀಡಲಾಗುತ್ತಿಲ್ಲ. ಕಾನೂನು ಪ್ರಕಾರ ಕೆಲಸ ಕೇಳಿದ 15 ದಿನಗಳ ಒಳಗಾಗಿ ಉದ್ಯೋಗ ನೀಡುವುದು ಕಡ್ಡಾಯ ವಾಗಿದ್ದು, ಸಂಬಂಧಪಟ್ಟ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ತಕ್ಷಣವೇ ಸೂಚನೆ ನೀಡಿ ಅರ್ಹ ಕಾರ್ಮಿಕರಿಗೆ ಕೆಲಸ ನೀಡುವಂತೆ ಕ್ರಮ ಕೈಗೊಳ್ಳಬೇಕೆಂದು ಅವರು ಆಗ್ರಹಿಸಿದ್ದಾರೆ.

ಒಂದು ವೇಳೆ ಕೆಲಸ ನೀಡಲು ವಿಳಂಬವಾದಲ್ಲಿ ನಿಯಮಾನುಸಾರ ನಿರುದ್ಯೋಗ ಭತ್ಯವನ್ನು ಕೂಡಲೇ ನೀಡಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಇನ್ನು, ಮುಂದಿನ 10 ದಿನಗಳೊಳಗಾಗಿ ಕಾರ್ಮಿಕರಿಗೆ ಉದ್ಯೋಗ ಒದಗಿಸದಿದ್ದಲ್ಲಿ ತಾಲ್ಲೂಕು ಪಂಚಾಯತ್ ಕಚೇರಿ ಮುಂದೆ ಸಾಂಕೇತಿಕ ಧರಣಿ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಈ ಕುರಿತು ಅಧಿಕಾರಿಗಳು ತಕ್ಷಣ ಕ್ರಮ ಕೈಗೊಂಡು ಗ್ರಾಮೀಣ ಬಡ ಕಾರ್ಮಿಕರಿಗೆ ನ್ಯಾಯ ಒದಗಿಸಬೇಕು ಎಂದು ಸಂಘಟನೆಯವರು ಒತ್ತಾಯಿಸಿದ್ದಾರೆ.

# ಅಧಿಕಾರದ ಕಿತ್ತಾಟ: ಕಾಂಗ್ರೆಸ್ ಸರ್ಕಾರಕ್ಕೆ ಹೊಸ ಸವಾಲು

ಒಂದು ಸಲ ಜೋರು ಹೊಗೆ, ಮತ್ತೊಂದು ಸಲ ಬೂದಿ ಮುಚ್ಚಿದ ಕೆಂಡ. ಅಲ್ಲಿ ಒಂದಷ್ಟು ಶಾಸಕರು ಡಿನ್ನರ್ ಹೆಸರಲ್ಲಿ ಕೂತು ಮೀಟಿಂಗ್, ಮತ್ತೊಂದು ಕಡೆ ಆಪ್ತರಿಗೆ ಡಿನ್ನರ್, ಮಗದೊಂದು ಕಡೆ, ಮತ್ತೆಲ್ಲಿಗೋ ಪ್ರವಾಸ... ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ದಿನನಿತ್ಯದ ಬೆಳವಣಿಗೆಗಳು ಇವು. ಅದಕ್ಕೆ ಅಧಿಕಾರದ ಕಚ್ಚಾಟದ ಜಂಜಾಟ ಶಮನ ಆದಂತೆ ಕಂಡರೂ ಸಹ ಮುಂದೆ ಅದು ಜೋರಾಗುವ ಅನುಮಾನ ಗಳಿಗೂ ಕಡಿಮೆ ಏನಿಲ್ಲ. ಯಾಕಿಗೆ ಆಗುತ್ತಿದೆ ಎನ್ನುವುದಕ್ಕೆ ಕಾರಣ ಒಂದೇ ಎಲ್ಲಾ ಅಧಿಕಾರದ ಮೋಹ!

ರಾಜ್ಯ ರಾಜಕೀಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರದೊಳಗಿನ ನಾಯಕತ್ವದ ಪೈಪೋಟಿ ಮತ್ತೆ ಚರ್ಚೆಗೆ ಕಾರಣವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿಕೆ ಶಿವಕು ಮಾರ್ ಅವರ ಬೆಂಬಲಿಗರ ನಡುವೆ ನಾಯ ಕತ್ವದ ಪ್ರಶ್ನೆಯ ಕುರಿತಾಗಿ ನಡೆಯುತ್ತಿರುವ ಸ್ಪರ್ಧಾತ್ಮಕ ರಾಜಕೀಯ ಪಕ್ಷದ ಒಳಭಾಗದಲ್ಲಿ ಒತ್ತಡದ ವಾತಾವರಣವನ್ನು ಸೃಷ್ಟಿಸಿದೆ. ಈ ಬೆಳವಣಿಗೆಗಳು ಸರ್ಕಾರದ ಸ್ಥಿರತೆ ಮತ್ತು ಆಡಳಿತದ ದಕ್ಷತೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆಯ ಕುರಿತು ರಾಜಕೀಯ ವಲಯದಲ್ಲಿ ಚರ್ಚೆಗಳು ಜೋರಾಗಿವೆ.

### ಅಧಿಕಾರ ಹಂಚಿಕೆ ವಿಚಾರದಲ್ಲಿ ಊಹಾಪೋಹ...

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಕ್ಷಣದಿಂದಲೇ ಮುಖ್ಯಮಂತ್ರಿ ಸ್ಥಾನ ಹಂಚಿಕೆ ಕುರಿತಂತೆ ಹಲವು ಊಹಾಪೋಹಗಳು ಕೇಳಿಬಂದಿದ್ದವು. ಕೆಲ ನಾಯಕರು ಮುಖ್ಯಮಂತ್ರಿ ಸ್ಥಾನ ಐದು ವರ್ಷಗಳಲ್ಲಿ ಹಂಚಿಕೊಳ್ಳುವ ಒಪ್ಪಂದ ನಡೆದಿದೆ ಎಂದು ಅಭಿಪ್ರಾಯಪಟ್ಟರೆ, ಮತ್ತೊಂದು ವಲಯ ಅದನ್ನು ಸಂಪೂರ್ಣವಾಗಿ ತಳ್ಳಿಹಾಕಿದೆ.



ಈ ವಿಚಾರ ಪಕ್ಷದೊಳಗೆ ಅನೇಕ ಬಾರಿ ಚರ್ಚೆಗೆ ಕಾರಣವಾಗಿದ್ದು, ಕೆಲ ಸಂದರ್ಭಗಳಲ್ಲಿ ಸಾರ್ವಜನಿಕ ಹೇಳಿಕೆಗಳ ರೂಪದಲ್ಲಿಯೂ ಹೊರಬಂದಿದೆ. ಇದರಿಂದ ಪಕ್ಷದ ಒಳ ರಾಜಕೀಯದಲ್ಲಿ ಸ್ಪಷ್ಟವಾದ ಎರಡು ಧ್ರುವಗಳು ಮೂಡಿ ಬಂದಿರುವಂತಾಗಿದೆ ಎಂಬ ಅಭಿಪ್ರಾಯ ರಾಜಕೀಯ ವಿಶ್ಲೇಷಕರಿಂದ ವ್ಯಕ್ತವಾಗುತ್ತಿದೆ.


### ಸಚಿವ ಸಂಪುಟ ರಚನೆಗೂ ಅಸಮಾಧಾನದ ನೆರಳು!

ಸಚಿವ ಸಂಪುಟ ರಚನೆ ಮತ್ತು ಪ್ರಮುಖ ಹುದ್ದೆಗಳ ಹಂಚಿಕೆ ಸಂದರ್ಭದಲ್ಲೂ ಕೆಲವು ಶಾಸಕರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿ ದ್ದರು. ತಮ್ಮ ಕ್ಷೇತ್ರಗಳಿಗೆ ಸಮರ್ಪಕ ಪ್ರತಿನಿಧಿತ್ವ ಸಿಗುತ್ತಿಲ್ಲ ಎಂಬ ಅಸಮಾಧಾನ ವನ್ನು ಕೆಲವರು ಬಹಿರಂಗವಾಗಿ ವ್ಯಕ್ತಪಡಿಸಿದ್ದರು.

ಈ ಅಸಮಾಧಾನ ಪಕ್ಷದೊಳಗಿನ ಒಳಕಿ ತ್ತಾಟಕ್ಕೆ ಮತ್ತಷ್ಟು ಆಹಾರ ನೀಡಿದಂತಾಗಿದೆ. ಕೆಲ ಶಾಸಕರು ಹಾಗೂ ನಾಯಕರು ತಮ್ಮ ರಾಜಕೀಯ ಭವಿಷ್ಯ ಮತ್ತು ಪ್ರಭಾವವನ್ನು ಬಲಪಡಿಸುವ ನಿಟ್ಟಿನಲ್ಲಿ ಪ್ರತ್ಯೇಕವಾಗಿ ಚಟುವಟಿಕೆ ನಡೆಸುತ್ತಿರುವುದು ರಾಜಕೀಯ ವಲಯದಲ್ಲಿ ಗಮನ ಸೆಳೆದಿದೆ.

### ಆಡಳಿತದ ಮೇಲೆ ಪರಿಣಾಮದ ಆತಂಕ!

ರಾಜಕೀಯ ವಿಶ್ಲೇಷಕರ ಪ್ರಕಾರ ಸರ್ಕಾರದೊಳಗಿನ ಈ ರೀತಿಯ ಒಳಕಿತ್ತಾಟ ದೀರ್ಘಕಾಲ ಮುಂದುವರಿದರೆ ಆಡಳಿತದ ವೇಗ ಕುಂಠಿತವಾಗುವ ಸಾಧ್ಯತೆ ಇದೆ. ಜನಪರ ಕಾರ್ಯಕ್ರಮಗಳು ಹಾಗೂ ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರ ಹೆಚ್ಚು ಗಮನ ಹರಿಸಬೇಕಾದ ಸಮಯದಲ್ಲಿ ಒಳರಾಜಕೀಯವೇ ಪ್ರಾಮುಖ್ಯತೆ ಪಡೆಯುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.



ಸರ್ಕಾರ ಘೋಷಿಸಿರುವ ಹಲವು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೂ ಹೆಚ್ಚಿನ ಹಣಕಾಸು ಹಾಗೂ ಆಡಳಿತಾತ್ಮಕ ಸಮನ್ವಯ ಅಗತ್ಯವಿದೆ. ಈ ಸಂದರ್ಭದಲ್ಲಿ ರಾಜಕೀಯ ಅಸಮಾಧಾನಗಳು ಹೆಚ್ಚಾದರೆ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೂ ಅಡ್ಡಿಯಾಗಬಹುದು ಎಂಬ ಆತಂಕ ವ್ಯಕ್ತವಾಗುತ್ತಿದೆ.

### ವಿರೋಧ ಪಕ್ಷಗಳ ಟೀಕೆ


ರಾಜ್ಯದಲ್ಲಿ ವಿರೋಧ ಪಕ್ಷವಾಗಿ ರುವ ಭಾರತೀಯ ಜನತಾ ಪಾರ್ಟಿ ಈ ಪರಿಸ್ಥಿತಿಯನ್ನು ತೀವ್ರವಾಗಿ ಟೀಕಿಸುತ್ತಿದೆ. ಅವರ ಪ್ರಕಾರ ಸರ್ಕಾರ ಜನಪರ ಕೆಲಸಗಳಿ ಗಿಂತ ಒಳರಾಜಕೀಯ ಸಮಸ್ಯೆಗಳನ್ನು ಪರಿಹ ರಿಸುವಲ್ಲೇ ಹೆಚ್ಚು ಸಮಯ ವ್ಯಯಿಸುತ್ತಿದೆ ಎಂಬ ಆರೋಪ ಕೇಳಿಬರುತ್ತಿದೆ.

ಆದರೆ ರಾಜಕೀಯ ವಿಶ್ಲೇಷಕರ ಅಭಿಪ್ರಾಯ ದಂತೆ, ವಿರೋಧ ಪಕ್ಷವೂ ಸಮರ್ಪಕವಾಗಿ ಸಂಘಟಿತವಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎಂಬ ಟೀಕೆಗಳೂ ಕೇಳಿ ಬರುತ್ತಿವೆ. ಒಂದು ಬಲಿಷ್ಠ ವಿರೋಧ ಪಕ್ಷ ವಾಗಿ ಆಡಳಿತ ಪಕ್ಷದ ಕಾರ್ಯವೈಖರಿಯನ್ನು ಪರಿಣಾಮಕಾರಿಯಾಗಿ ಪ್ರಶ್ನಿಸುವಲ್ಲಿ ಅದು ಹಿಂದೆ ಬಿದ್ದಿದೆ ಎನ್ನುವುದು ಕೆಲವು ರಾಜಕೀಯ ವೀಕ್ಷಕರ ಅಭಿಪ್ರಾಯವಾಗಿದೆ.

### ಹೈಕಮಾಂಡ್ ಮಧ್ಯಪ್ರವೇಶದ ನಿರೀಕ್ಷೆ...

ಪಕ್ಷದೊಳಗಿನ ಒತ್ತಡದ ವಾತಾವರಣ ವನ್ನು ಸಮತೋಲನಗೊಳಿಸಲು ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಮಧ್ಯಪ್ರವೇಶ ಮಾಡುವ ಸಾಧ್ಯತೆ ಇದೆ ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿಬರುತ್ತಿವೆ. ಪಕ್ಷದ ಏಕತೆಯನ್ನು ಕಾಪಾಡಲು ಹಿರಿಯ ನಾಯಕರು ಮಧ್ಯಸ್ಥಿಕೆ ವಹಿಸುವುದು ಅಗತ್ಯವೆಂದು ಹಲವರು ಅಭಿಪ್ರಾಯಪಟ್ಟಿದ್ದಾರೆ.

ಪಕ್ಷದ ಒಳ ಏಕತೆ ಮತ್ತು ಸಮನ್ವಯವನ್ನು ಕಾಪಾಡು ವುದು ಆಡಳಿತದ ಸ್ಥಿರತೆಗೆ ಮಹತ್ವದ್ದಾಗಿದೆ. ಇಲ್ಲವಾದರೆ ಒಳಕಿತ್ತಾಟ ಮುಂದಿನ ಚುನಾವಣಾ ರಾಜಕೀಯದಲ್ಲಿಯೂ ಪರಿಣಾಮ ಬೀರುವ ಸಾಧ್ಯತೆ ಇದೆ ಎಂಬ ಎಚ್ಚರಿಕೆ ರಾಜಕೀಯ ವಿಶ್ಲೇಷಕರಿಂದ ವ್ಯಕ್ತವಾಗುತ್ತಿದೆ.



### ಕಿತ್ತಾಟ ಹೊಸದೇನೂ ಅಲ್ಲ...

ಅಧಿಕಾರಕ್ಕಾಗಿ ನಡೆಯುವ ಒಳಪೈಪೋಟಿ ಕಾಂಗ್ರೆಸ್ ಪಕ್ಷಕ್ಕೆ ಹೊಸದಾಗಿಲ್ಲ. ಸ್ವಾತಂತ್ರ್ಯೋತ್ತರ ಕಾಲದಿಂದಲೂ ಪಕ್ಷದೊಳಗಿನ ಭಿನ್ನಮತಗಳು ರಾಜಕೀಯ ಬೆಳವಣಿಗೆಗಳಿಗೆ ಕಾರಣವಾಗುತ್ತ ಬಂದಿವೆ.

ಕರ್ನಾಟಕ ರಾಜಕೀಯದಲ್ಲಿಯೂ ಇದೇ ರೀತಿಯ ಉದಾಹರಣೆಗಳು ಹಿಂದೆ ಕಂಡುಬಂದಿವೆ. ಈ ಹಿನ್ನೆಲೆಯಲ್ಲೇ ಇಂದಿನ ರಾಜಕೀಯ ಬೆಳವಣಿಗೆಗಳನ್ನು ಕೆಲವರು "ಹಳೆಯ ನಾಟಕದ ಹೊಸ ಅಧ್ಯಾಯ" ಎಂದು ವ್ಯಾಖ್ಯಾನಿಸುತ್ತಿದ್ದಾರೆ.

### ಅಧಿಕಾರದ ಆಸೆ ಮತ್ತು ರಾಜಕೀಯ ತಂತ್ರಗಳು!

ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರದ ಹಲವು ನಾಯಕರು ತಮ್ಮ ರಾಜಕೀಯ ಸ್ಥಾನವನ್ನು ಬಲಪಡಿಸುವತ್ತ ಹೆಚ್ಚು ಗಮನ ಹರಿಸುತ್ತಿದ್ದಾರೆ ಎಂಬ ಅಭಿಪ್ರಾಯವೂ ವ್ಯಕ್ತವಾಗುತ್ತಿದೆ. ಕೆಲವರು ಅಧಿಕಾರದಲ್ಲಿ ಮುಂದುವರಿಯಲು ಪ್ರಯತ್ನಿಸುತ್ತಿದ್ದರೆ, ಮತ್ತೊಬ್ಬರು ಅದೇ ಸ್ಥಾನವನ್ನು ಪಡೆಯಲು ರಾಜಕೀಯ ತಂತ್ರಗ ಳನ್ನು ರೂಪಿಸುತ್ತಿದ್ದಾರೆ ಎಂಬ ಮಾತುಗಳು ರಾಜಕೀಯ ವಲಯ ದಲ್ಲಿ ಕೇಳಿಬರುತ್ತಿವೆ.

ರಾಜಕೀಯದಲ್ಲಿ ಅಧಿಕಾರ ಶಾಶ್ವತವಲ್ಲ ಎಂಬ ಮಾತು ಸಾಮಾನ್ಯವಾದರೂ, ಅಧಿಕಾರದಲ್ಲಿರುವ ಸಮಯವನ್ನು ಗಟ್ಟಿಯಾಗಿ ಬಳಸಿಕೊಳ್ಳಬೇಕು ಎಂಬ ಮನೋಭಾವ ನಾಯಕ ರುಗಳಲ್ಲಿ ಕಂಡುಬರುತ್ತಿದೆ. ಆದರೆ ಪಕ್ಷವನ್ನು ಸಂಘಟಿಸುವುದು, ಮುಂದಿನ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳುವುದು ಮತ್ತು ಆಡಳಿತದ ಗುಣಮಟ್ಟವನ್ನು ಹೆಚ್ಚಿಸುವುದಕ್ಕಿಂತ ಒಳರಾಜಕೀಯವೇ ಹೆಚ್ಚು ಪ್ರಾಮುಖ್ಯತೆ ಪಡೆಯುತ್ತಿರುವುದು ಗಮನಾರ್ಹ ಬೆಳವಣಿಗೆ ಎಂದು ಕೆಲ ವೀಕ್ಷಕರು ಅಭಿಪ್ರಾಯಪಟ್ಟಿದ್ದಾರೆ.

### ವಿರೋಧ ಪಕ್ಷದ ಪಾತ್ರಕ್ಕೂ ಪ್ರಶ್ನೆ?

ರಾಜ್ಯದಲ್ಲಿ ಪ್ರಮುಖ ವಿರೋಧ ಪಕ್ಷವಾಗಿರುವ ಬಿಜೆಪಿ ತನ್ನ ಪಾತ್ರವನ್ನು ಸಮರ್ಪಕವಾಗಿ ನಿರ್ವಹಿಸುತ್ತಿದೆಯೇ ಎಂಬ ಪ್ರಶ್ನೆಯೂ ರಾಜಕೀಯ ವಲಯದಲ್ಲಿ ಕೇಳಿಬರುತ್ತಿದೆ.

ಒಂದು ಬಲಿಷ್ಠ ವಿರೋಧ ಪಕ್ಷವಾಗಿ ಆಡಳಿತದ ಪ್ರತಿಯೊಂದು ನಿರ್ಧಾರವನ್ನು ಪರಿಶೀಲಿಸಿ ಜನತೆಗೆ ಮಾಹಿತಿ ನೀಡುವುದು ಅದರ ಮುಖ್ಯ ಹೊಣೆಗಾರಿಕೆ. ಆದರೆ ಸಂಘಟನಾತ್ಮಕ ಏಕತೆಯ ಕೊರತೆ ಹಾಗೂ ನಾಯಕತ್ವದ ಒಳಭಿನ್ನತೆಗಳಿಂದಾಗಿ ಬಿಜೆಪಿ ತನ್ನ ಸಾಮ ರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳುತ್ತಿಲ್ಲ ಎಂಬ ಅಭಿಪ್ರಾ ಯವೂ ವ್ಯಕ್ತವಾಗುತ್ತಿದೆ.

### ಮುಂದಿನ ರಾಜಕೀಯದ ದಿಕ್ಕು?

ಒಟ್ಟಾರೆ ರಾಜ್ಯ ರಾಜಕೀಯದಲ್ಲಿ ನಾಯಕತ್ವದ ಪ್ರಶ್ನೆ ಮುಂದಿನ ದಿನಗಳಲ್ಲಿ ಮತ್ತಷ್ಟು ಚರ್ಚೆಗೆ ಕಾರಣವಾಗುವ ಸಾಧ್ಯತೆ ಇದೆ. ಆಡಳಿತ ಪಕ್ಷದೊಳಗಿನ ಒಳಸಮನ್ವಯ ಮತ್ತು ವಿರೋಧ ಪಕ್ಷದ ಕಾರ್ಯಪಟುತೆಯೇ ಮುಂದಿನ ರಾಜಕೀಯ ಪರಿಸ್ಥಿತಿಯನ್ನು ನಿರ್ಧರಿಸಬಹುದು.

ಪಕ್ಷದ ಏಕತೆಯನ್ನು ಕಾಪಾಡಿ ಆಡಳಿತದ ಮೇಲೆ ಹೆಚ್ಚು ಗಮನ ಹರಿಸುವುದು ರಾಜ್ಯದ ಅಭಿವೃದ್ಧಿಗೆ ಅಗತ್ಯ. ಇಲ್ಲವಾದರೆ ಒಳಕಿತ್ತಾಟ ಮತ್ತು ರಾಜಕೀಯ ಸಂಘರ್ಷಗಳು ಮುಂದಿನ ಚುನಾವಣಾ ರಾಜಕೀಯದಲ್ಲಿಯೂ ಪರಿಣಾಮ ಬೀರುವ ಸಾಧ್ಯತೆ ಇದೆ ಎಂಬ ಎಚ್ಚರಿಕೆ ರಾಜಕೀಯ ವೀಕ್ಷಕರಿಂದ ಕೇಳಿಬರುತ್ತಿದೆ.

# ಬೀದರ: ಲಂಚ ಸ್ವೀಕರಿಸುತ್ತಿದ್ದ ಇಇ ರಾಮಲಿಂಗಪ್ಪ ಬಂಧನ!



**ಬೀದರ್ ಜಿಲ್ಲೆಯ ಆಡಳಿತ ವಲಯದಲ್ಲಿ ಸಂಚಲನ ಮೂಡಿಸಿದ ಘಟನೆ ಒಂದರಲ್ಲಿ, ಬೀದರ್ ನಗರದ ಜಿಲ್ಲಾ ಪಂಚಾಯತ್ ಆವರಣದಲ್ಲಿರುವ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಚೇರಿಯ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ, ಕಾರ್ಯನಿರ್ವಾಹಕ ಇಂಜಿನಿಯರ್ (ಇಇ) ರಾಮಲಿಂಗಪ್ಪ ಬಿರಾದಾರ್ ಅವರನ್ನು ಬಂಧಿಸಿದ್ದಾರೆ. ಲಭ್ಯವಾದ ಮಾಹಿತಿಯ ಪ್ರಕಾರ, ಗುತ್ತಿಗೆದಾರ ವಸಂತ್ ಅವರು ಪೂರ್ಣಗೊಳಿಸಿದ ಕಾಮಗಾರಿಯ ಬಿಲ್ ಪಾಸ್ ಮಾಡಲು ಇಇ ರಾಮಲಿಂಗಪ್ಪ ಬಿರಾದಾರ್ ಅವರು 50,000 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಒಟ್ಟು ಸುಮಾರು 2 ಲಕ್ಷದ ಬಿಲ್ ಬಿಡುಗಡೆಗಾಗಿ ಈ ಹಣವನ್ನು ಕೇಳಲಾಗಿತ್ತು ಎಂದು ತಿಳಿದುಬಂದಿದೆ.**

ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರು ಮತ್ತು ಸಮರ್ಪಕ ನೈರ್ಮಲ್ಯ ವ್ಯವಸ್ಥೆ ಮಾನವ ಜೀವನಕ್ಕೆ ಅತ್ಯಂತ ಅಗತ್ಯವಾದವು. ಇವುಗಳ ಕೊರತೆಯಿಂದ ಅನೇಕ ರೋಗಗಳು ಉಂಟಾಗುತ್ತವೆ ಮತ್ತು ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತವೆ.

ನೀರು ಜೀವದ ಮೂಲವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಜನರು ನದಿ, ಕೆರೆ, ಬಾವಿ ಮುಂತಾದ ಮೂಲಗಳಿಂದ ನೀರನ್ನು ಬಳಸುತ್ತಾರೆ. ಆದರೆ ಈ ನೀರು ಶುದ್ಧವಾಗಿರದಿದ್ದರೆ ಟೈಫಾಯ್ಡ್, ಕಾಲರಾ, ಡೈರಿಯಾ ಮುಂತಾದ ರೋಗಗಳು ಹರಡುತ್ತವೆ. ಆದ್ದರಿಂದ ಶುದ್ಧ ಮತ್ತು ಸುರಕ್ಷಿತ ಕುಡಿಯುವ ನೀರಿನ ಲಭ್ಯತೆ ಅತ್ಯಂತ ಮುಖ್ಯ.

ನೈರ್ಮಲ್ಯವು ಆರೋಗ್ಯಕರ ಜೀವನದ ಮೂಲಸ್ತಂಭವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ತೆರೆಯ ಪ್ರದೇಶಗಳಲ್ಲಿ ಮಲವಿಸರ್ಜನೆ ಮಾಡುವ ಪದ್ಧತಿ ಕಂಡುಬರುತ್ತದೆ. ಇದು ಪರಿಸರವನ್ನು ಹಾಳುಮಾಡುತ್ತದೆ ಮತ್ತು ರೋಗಗಳ ಹರಡುವಿಕೆಗೆ ಕಾರಣವಾಗುತ್ತದೆ. ಸರಿಯಾದ ಶೌಚಾಲಯ ವ್ಯವಸ್ಥೆ ಮತ್ತು ಕಸ ನಿರ್ವಹಣೆ ಅನಿವಾರ್ಯ.

ಭಾರತ ಸರ್ಕಾರವು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. "ಜಲ್ ಜೀವನ್ ಮಿಷನ್" ಮತ್ತು "ಸ್ವಚ್ಛ ಭಾರತ ಅಭಿಯಾನ" ಪ್ರಮುಖ ಯೋಜನೆಗಳಾಗಿವೆ. ಇವುಗಳ ಮೂಲಕ ಮನೆಮನೆಗೆ ಶುದ್ಧ ನೀರು ಒದಗಿಸುವುದು ಮತ್ತು ಶೌಚಾಲಯಗಳ ನಿರ್ಮಾಣವನ್ನು ಉತ್ತೇಜಿಸಲಾಗುತ್ತಿದೆ.

ಜನರು ಸ್ವಚ್ಛತೆಯ ಮಹತ್ವವನ್ನು ಅರಿತುಕೊಳ್ಳಬೇಕು. ಗ್ರಾಮಸ್ಥರು ತಮ್ಮ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು, ನೀರನ್ನು ಸಂರಕ್ಷಿಸುವುದು ಮತ್ತು ಶೌಚಾಲಯಗಳನ್ನು ಬಳಸುವುದು ಅತ್ಯಂತ ಅಗತ್ಯ. ಶಾಲೆಗಳು ಮತ್ತು ಸಮಾಜ ಸಂಘಟನೆಗಳು ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯವು ದೇಶದ ಸಮಗ್ರ ಅಭಿವೃದ್ಧಿಗೆ ಅತಿ ಮುಖ್ಯ. ಸರ್ಕಾರದ ಯೋಜನೆಗಳ ಜೊತೆಗೆ ಜನರ ಸಹಕಾರವೂ ಅಗತ್ಯ. ಎಲ್ಲರೂ ಸೇರಿ ಶುದ್ಧ ನೀರು ಮತ್ತು ಸ್ವಚ್ಛ ಪರಿಸರವನ್ನು ನಿರ್ಮಿಸಿದರೆ ಆರೋಗ್ಯಕರ ಸಮಾಜವನ್ನು ರೂಪಿಸಬಹುದು.






## ಭ್ರಷ್ಟ ಇಇ ರಾಮಲಿಂಗಪ್ಪ!

ಬೀದರ್ ಜಿಲ್ಲೆಯ ಆಡಳಿತ ವಲಯದಲ್ಲಿ ಸಂಚಲನ ಮೂಡಿಸಿದ ಘಟನೆ ಒಂದರಲ್ಲಿ, ಬೀದರ್ ನಗರದ ಜಿಲ್ಲಾ ಪಂಚಾಯತ್ ಆವರಣದಲ್ಲಿರುವ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಚೇರಿಯ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ, ಕಾರ್ಯನಿರ್ವಾ ಹಕ ಇಂಜಿನಿಯರ್ (ಇಇ) ರಾಮಲಿಂಗಪ್ಪ ಬಿರಾದಾರ್ ಅವರನ್ನು ಬಂಧಿಸಿದ್ದಾರೆ. ಲಭ್ಯವಾದ ಮಾಹಿತಿಯ ಪ್ರಕಾರ, ಗುತ್ತಿಗೆದಾರ ವಸಂತ್ ಅವರು ಪೂರ್ಣಗೊಳಿಸಿದ ಕಾಮಗಾರಿಯ ಬಿಲ್ ಪಾಸ್ ಮಾಡಲು ಇಇ ರಾಮಲಿಂಗಪ್ಪ ಬಿರಾದಾರ್ ಅವರು 50,000 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಒಟ್ಟು ಸುಮಾರು 2 ಲಕ್ಷದ ಬಿಲ್ ಬಿಡುಗಡೆಗಾಗಿ ಈ ಹಣವನ್ನು ಕೇಳಲಾಗಿತ್ತು ಎಂದು ತಿಳಿದುಬಂದಿದೆ.

ಈ ಬಗ್ಗೆ ಲೋಕಾಯುಕ್ತ ಅಧಿಕಾರಿಗಳಿಗೆ ದೂರು ನೀಡಿದ ಗುತ್ತಿಗೆದಾರರ ಮಾಹಿತಿ ಆಧರಿಸಿ, ಅಧಿಕಾರಿಗಳು ಪೂರ್ವ ಯೋಜನೆಯಂತೆ ದಾಳಿ ನಡೆಸಿದರು. ಯೋಜನೆಯಂತೆ, ಗುತ್ತಿಗೆದಾರ ವಸಂತ್ ಅವರು ಸಿಬ್ಬಂದಿ ಬಾಬು ಮೂಲಕ 50,000 ಸಾವಿರ ಹಣವನ್ನು ಇಇ ಅವರಿಗೆ ನೀಡುವ ವೇಳೆ, ಸ್ಥಳದಲ್ಲೇ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ರಾಮಲಿಂಗಪ್ಪ ಬಿರಾದಾರ್ ಮತ್ತು ಸಿಬ್ಬಂದಿ ಬಾಬು ಅವರನ್ನು ಬಲೆಗೆ ಕೆಡವಿದರು.

ದಾಳಿ ವೇಳೆ ಲಂಚವಾಗಿ ಪಡೆಯಲಾಗುತ್ತಿದ್ದ 50,000 ಸಾವಿರ ನಗದು ಹಣವನ್ನು ಅಧಿಕಾರಿಗಳು ಜಪ್ತಿ ಮಾಡಿದ್ದಾರೆ. ಈ ಘಟನೆ ಜಿಲ್ಲಾ ಪಂಚಾಯತ್ ಕಚೇರಿ ಆವರಣದಲ್ಲೇ ನಡೆದಿರುವುದು ವಿಶೇಷವಾಗಿದೆ.

ಬಂಧಿತ ಇಇ ರಾಮಲಿಂಗಪ್ಪ ಬಿರಾದಾರ್ ಮತ್ತು ಸಿಬ್ಬಂದಿ ಬಾಬು ಅವರನ್ನು ವಿಚಾರಣೆಗಾಗಿ ವಶಕ್ಕೆ ಪಡೆದುಕೊಳ್ಳಲಾಗಿದ್ದು, ಈ ಪ್ರಕರಣದ ಕುರಿತು ಲೋಕಾಯುಕ್ತ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಈ ದಾಳಿ ಹಿನ್ನೆಲೆಯಲ್ಲಿ ಜಿಲ್ಲೆಯ ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ ವಿರೋಧಿ ಕ್ರಮಗಳು ಮತ್ತಷ್ಟು ತೀವ್ರಗೊಳ್ಳುವ ನಿರೀಕ್ಷೆ ವ್ಯಕ್ತವಾಗಿದೆ.

## ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಗ್ರಾಮೀಣ ಜನರ ಆರೋಗ್ಯ ಮತ್ತು ಅಭಿವೃದ್ಧಿಗೆ ಪ್ರಮುಖ ಆಧಾರ...

ಗ್ರಾಮೀಣ ಅಭಿವೃದ್ಧಿಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯವು ಅತ್ಯಂತ ಮುಖ್ಯವಾದ ಅಂಶಗಳಾಗಿವೆ. ಗ್ರಾಮಗಳ ಆರೋಗ್ಯ, ಸ್ವಚ್ಛತೆ ಮತ್ತು ಜೀವನಮಟ್ಟವನ್ನು ಸುಧಾರಿಸಲು ಜಿಲ್ಲಾ ಪಂಚಾಯತ್‌ನ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಮಹತ್ವದ ಪಾತ್ರವಹಿಸುತ್ತದೆ.

ಈ ವಿಭಾಗದ ಮುಖ್ಯ ಉದ್ದೇಶ ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಮತ್ತು ಸುರಕ್ಷಿತ ಕುಡಿಯುವ ನೀರನ್ನು ಒದಗಿಸುವುದು ಹಾಗೂ ಸಮಗ್ರ ನೈರ್ಮಲ್ಯ ವ್ಯವಸ್ಥೆಯನ್ನು ರೂಪಿಸುವುದು. ಗ್ರಾಮಗಳಲ್ಲಿ ಬೋರ್‌ವೆಲ್, ಪೈಪ್‌ಲೈನ್ ಮೂಲಕ ನೀರು ಪೂರೈಕೆ, ಜಲಾಶಯಗಳ ನಿರ್ಮಾಣ ಮತ್ತು ನೀರಿನ ಶುದ್ಧೀಕರಣ ಘಟಕಗಳ ಸ್ಥಾಪನೆ ಇವುಗಳ ಮೂಲಕ ಜನರಿಗೆ ನೀರು ತಲುಪಿಸಲಾಗುತ್ತದೆ.

ನೈರ್ಮಲ್ಯದ ದೃಷ್ಟಿಯಿಂದ, ಈ ವಿಭಾಗವು ಶೌಚಾಲಯಗಳ ನಿರ್ಮಾಣಕ್ಕೆ ಉತ್ತೇಜನ ನೀಡುತ್ತದೆ. ಸರ್ಕಾರದ ವಿವಿಧ ಯೋಜನೆಗಳಡಿ ಮನೆಮನೆಗೆ ಶೌಚಾಲಯ ನಿರ್ಮಾಣ, ಶಾಲಾ ಶೌಚಾಲಯಗಳು, ಅಂಗನವಾಡಿ ಶೌಚಾಲಯಗಳು ನಿರ್ಮಿಸಲಾಗುತ್ತವೆ. ಇದರೊಂದಿಗೆ, ಮುಕ್ತ ಮಲಮೂತ್ರ ವಿಸರ್ಜನೆ ನಿವಾರಣೆಗಾಗಿ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತದೆ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗವು ನೀರಿನ ಗುಣಮಟ್ಟವನ್ನು ಪರೀಕ್ಷಿಸುವ ಕೆಲಸವನ್ನು ಕೂಡ ಮಾಡುತ್ತದೆ. ಫ್ಲೋರೈಡ್, ಆರ್ಸೆನಿಕ್ ಮುಂತಾದ ಹಾನಿಕಾರಕ ಅಂಶಗಳು ನೀರಿನಲ್ಲಿ ಇರುವುದನ್ನು ಪರೀಕ್ಷಿಸಿ, ಅವುಗಳನ್ನು ಕಡಿಮೆ ಮಾಡುವ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಇದರಿಂದ ಜನರ ಆರೋಗ್ಯ ಕಾಪಾಡಲಾಗುತ್ತದೆ. ಇದೇ ವೇಳೆ, ಜನರಲ್ಲಿ ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವ ಅಭಿಯಾನಗಳು ನಡೆಸಲಾಗುತ್ತದೆ. ಕೈತೊಳೆಯುವ ಅಭ್ಯಾಸ, ಪರಿಸರ ಸ್ವಚ್ಛತೆ, ಕಸದ ಸರಿಯಾದ ನಿರ್ವಹಣೆ ಮುಂತಾದ ವಿಷಯಗಳಲ್ಲಿ ಜಾಗೃತಿ ಮೂಡಿಸಲಾಗುತ್ತದೆ.

ಜಿಲ್ಲಾ ಪಂಚಾಯತ್‌ನ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗವು ಗ್ರಾಮೀಣ ಜನರ ಆರೋಗ್ಯ ಮತ್ತು ಅಭಿವೃದ್ಧಿಗೆ ಪ್ರಮುಖ ಆಧಾರವಾಗಿದೆ. ಇದು ಶುದ್ಧ ನೀರು ಮತ್ತು ಉತ್ತಮ ನೈರ್ಮಲ್ಯವನ್ನು ಒದಗಿಸುವ ಮೂಲಕ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ನೆರವಾಗುತ್ತದೆ.




Edited , Printed, Published & Owned by : Anil Kumar Kamtane, No. 8-6-10, J.P. Coloney, Janawada Road, Bidar - 01
Printed at : Jai Printers, Bangalore. e-mail : bidarkote1@gmail.com Cell : 9036420479 / 08482 - 226479